ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

ಶುಕ್ರವಾರ, ಜುಲೈ 28, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 75 RNI : 27369/75

janathavani@mac.com
www.janathavani.com
08192 254736 91642 99999



ಚಿತ್ರ: ರಫೀಕ್, ಜನತಾವಾಣಿ

**ದೇವರಬೆಳಕೆರೆ ಡ್ಯಾಂ** ಕಳೆದ ಕೆಲವು ದಿನಗಳಿಂದ ರಾಜ್ಯಾದ್ಯಂತ ಉತ್ತಮ ಮಳೆಯಾಗುತ್ತಿದೆ. ಹರಿಹರ ತಾಲ್ಲೂಕು ದೇವರ ಬೆಳಕೆರೆ ಪಿಕಪ್ ಡ್ಯಾಂನಲ್ಲಿ ನೀರಿನ ಹರಿವು ಹೆಚ್ಚಾಗಿದ್ದು, ಹೊರ ಹೋಗುತ್ತಿರುವ ನೀರಿನ ಸುಂದರ ದೃಶ್ಯ.

# ಕಾಮಗಾರಿಗಳಿಗೆ ಅನುಮತಿ ಅಧಿಕಾರಿಗಳ ಬದಲಾವಣೆ

ಬೆಂಗಳೂರು, ಜು.27- ಸರ್ಕಾರ ಬದಲಾವಣೆಯಾದರೂ ಅಧಿಕಾರಿಗಳು ಬಿಜೆಪಿ ಆಡಳಿತದ ಗುಂಗಿನಲ್ಲೇ ಇದ್ದಾರೆ ಎಂದು ಆಡಳಿತ ಪಕ್ಷದ ಶಾಸಕರು ಇಂದಿಲ್ಲಿ ಅಧಿಕಾರಶಾಹಿ ವಿರುದ್ಧ ತಿರುಗಿ ಬಿದ್ದಿದ್ದಾರೆ.

ಐದು ವರ್ಷಗಳ ನಂತರ ಪಕ್ಷ ಅಧಿಕಾರದ ಗದ್ದುಗೆ ಹಿಡಿದಿದ್ದರೂ, ನಮ್ಮ ಕ್ಷೇತ್ರಗಳಲ್ಲಿ ನಾವು ಜಯ ಗಳಿಸಿದ್ದೇವೆ ಎಂಬುದನ್ನು ಬಿಟ್ಟರೆ, ಉಳಿದಂತೆ ಯಾವುದೇ ಬದಲಾವಣೆಗಳು ಕಾಣುತ್ತಿಲ್ಲ ಎಂದು ಮುಖ್ಯಮಂತ್ರಿ ಹಾಗೂ ಸಹೋದ್ಯೋಗಿಗಳ ಗಮನಕ್ಕೆ ತಂದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಶಾಸಕರ ಸಮಸ್ಯೆಗಳನ್ನು ಆಲಿಸಿ ಬಗೆಹರಿಸುವ ಉದ್ದೇಶದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆದಿದ್ದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಸದಸ್ಯರು ಅಧಿಕಾರಿಗಳು ಮತ್ತು ಸಚಿವರನ್ನು ನೇರವಾಗಿ ತರಾಟೆಗೆ ತೆಗೆದುಕೊಂಡಿದ್ದಾರೆ.

## ಕಾಂಗ್ರೆಸ್ ಶಾಸಕಾಂಗ ಸಭೆಯಲ್ಲಿ ಒತ್ತಾಯ

ಸಭೆಗೂ ಮುನ್ನವೇ ಆಡಳಿತ ಪಕ್ಷದ 30 ಸದಸ್ಯರು ಮುಖ್ಯಮಂತ್ರಿ ಅವರಿಗೆ 2 ಪತ್ರ ಬರೆದು ಸಿಎಲ್‌ಪಿ ಸಭೆ ಕರೆಯುವಂತೆ ಹಾಗೂ ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳ ಬಗ್ಗೆ ಪರೋಕ್ಷವಾಗಿ ತಿಳಿಸಿದ್ದರು.

ಗ್ಯಾರಂಟಿ ಮತ್ತು ಅಭಿವೃದ್ಧಿಯನ್ನು ಮುಂದಿಟ್ಟುಕೊಂಡು ನಾವು ಅಧಿಕಾರಕ್ಕೆ ಬಂದಿದ್ದೇವೆ. ಆದರೆ, ನಮ್ಮ ನಮ್ಮ ಕ್ಷೇತ್ರಗಳಲ್ಲಿ ಕೈಗೊಳ್ಳಬೇಕಾದ ಕಾಮಗಾರಿಗಳಿಗೆ ವಿವಿಧ ಇಲಾಖೆಗಳಿಂದ ಹಸಿರು ನಿಶಾನೆಯೂ ದೊರೆಯುತ್ತಿಲ್ಲ. ಸಚಿವರು ಸ್ಪಂದಿಸುತ್ತಿಲ್ಲ ಎಂದು ಕೆಲವು ಶಾಸಕರು ನೇರವಾಗಿ ತರಾಟೆಗೆ ತೆಗೆದುಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕ್ಷೇತ್ರಗಳಿಗೆ ನಮಗೆ ಬೇಕಾದ ಅಧಿಕಾರಿಗಳನ್ನು ಹಾಕಿಸಿಕೊಳ್ಳಲು ಸಾಧ್ಯವಾಗಿಲ್ಲ. ಮುಖ್ಯಮಂತ್ರಿಗಳು ವರ್ಗಾವಣೆಗೆ ಒಂದು ತಿಂಗಳ ಅವಕಾಶ ನೀಡಿದ್ದರು. ಆದರೆ, ಈ ಸಂದರ್ಭದಲ್ಲಿ ನಮಗೆ ಸಚಿವರೇ ಕೈಗೆ ಸಿಗಲಿಲ್ಲ. ಅವಧಿ ಮುಗಿದ ನಂತರ ಎಲ್ಲವೂ ಆಗಿದೆ ಎನ್ನುತ್ತಾರೆ. ನಾವು ಹಿಂದಿನ ಸರ್ಕಾರದಲ್ಲಿದ್ದವರನ್ನೇ ಇಟ್ಟುಕೊಂಡು ಹಳಿತಪ್ಪಿರುವ ಆಡಳಿತ ಸರಿಪಡಿಸುವುದಾದರೂ ಹೇಗೆ? ಎಂದು ಪ್ರಶ್ನಿಸಿದ್ದಾರೆ.

ಇನ್ನೂ ಕೆಲವರು ಮಾತನಾಡಿ, ನನಗೆ ಬೇಕಾದ ಅಧಿಕಾರಿಗಳನ್ನು ಹಾಕುವ ಬದಲು ಬೇರೆಯವರ ಮರ್ಜಿಗೆ ಇಲ್ಲವೇ ತಮಗೆ ಬೇಕಾದವರನ್ನು ಹಾಕಿದ್ದಾರೆ. ಬಿಜೆಪಿ ಆಡಳಿತಕ್ಕೆ ಬೇಸತ್ತು ಜನರು ನಮ್ಮ ಕೈ ಹಿಡಿದಿದ್ದಾರೆ. ನಾವು ಮತದಾರ ಪ್ರಭುಗಳಿಗೆ ಸ್ಪಂದಿಸಬೇಕು. ಅಧಿಕಾರಕ್ಕೆ ಬಂದ ಎರಡು ತಿಂಗಳಲ್ಲೇ ಕೆಲವು ಸಚಿವರ (2ನೇ ಪುಟಕ್ಕೆ)

## ಎರಡು ಮಸೂದೆಗಳಿಗೆ ಲೋಕಸಭೆ ಅಂಗೀಕಾರ

ನವದೆಹಲಿ, ಜು. 27 - ಲೋಕಸಭೆಯಲ್ಲಿ ಜನ ವಿಶ್ವಾಸ್ ತಿದ್ದುಪಡಿ ಮಸೂದೆ ಹಾಗೂ ಸವಕಲಾದ ಕಾಯ್ದೆಗಳನ್ನು ವಾಪಸ್ ಪಡೆಯುವ ಮಸೂದೆಗೆ ಲೋಕಸಭೆಯಲ್ಲಿ ಅಂಗೀಕಾರ ನೀಡಲಾಗಿದೆ. ಪ್ರತಿಪಕ್ಷಗಳ ಗದ್ದಲ ಹಾಗೂ ಘೋಷಣೆಗಳ ನಡುವೆ ಮಸೂದೆಯನ್ನು ಮಂಡಿಸಿ ಒಪ್ಪಿಗೆ ಪಡೆಯಲಾಗಿದೆ. ಮಣಿಪುರ ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿಪಕ್ಷಗಳು ಗದ್ದಲ ನಡೆಸುತ್ತಿದ್ದವು.

## ಮುಂಬೈನಲ್ಲಿ ವಿಪಕ್ಷ ಸಭೆ

ನವದೆಹಲಿ, ಜು. 27 - ಪ್ರತಿಪಕ್ಷಗಳ ಒಕ್ಕೂಟವಾದ ಐಎನ್‌ಡಿಐಎ ಮುಂದಿನ ಸಭೆ ಮುಂಬೈನಲ್ಲಿ ಆಗಸ್ಟ್ 25 ಹಾಗೂ 26ರಂದು ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ಶಿವಸೇನೆ (ಯು.ಬಿ.ಟಿ.) ಹಾಗೂ ಎನ್.ಸಿ.ಪಿ. ಪಕ್ಷದ ಶರದ್ ಪವಾರ್ ಬಣ ಮತ್ತು ಕಾಂಗ್ರೆಸ್ ಪಕ್ಷಗಳು ಜಂಟಿಯಾಗಿ ಈ ಸಭೆ ಆಯೋಜಿಸಲಿವೆ. ಪ್ರತಿಪಕ್ಷಗಳ ಒಕ್ಕೂಟದ ಸಭೆ ನಡೆಯುತ್ತಿರುವುದು ಮೂರನೇ ಬಾರಿ.

## ಗಣಿ ಗುತ್ತಿಗೆ ಸಮಸ್ಯೆ ಪರಿಹಾರಕ್ಕೆ ಏಕಗವಾಕ್ಷಿ ವ್ಯವಸ್ಥೆಗೆ ಸೂಚನೆ

ಬೆಂಗಳೂರು, ಜು. 27 - ಗಣಿ ಗುತ್ತಿಗೆ ಸಮಸ್ಯೆಗಳನ್ನು ಬಗೆಹರಿಸಲು ಏಕ ಗವಾಕ್ಷಿ ಮಾದರಿ ವ್ಯವಸ್ಥೆ ರೂಪಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು.

ರಾಜ್ಯದಲ್ಲಿ ಗಣಿ ಗುತ್ತಿಗೆ ಪಡೆದಿರುವ ಸಂಸ್ಥೆಗಳಿಗೆ ಅರಣ್ಯ ಇಲಾಖೆ ತೀರುವಳಿ ಮತ್ತಿತರೆ ಅನುಮತಿ ಪತ್ರಗಳನ್ನು ನೀಡಲು ಹಾಗೂ ಸಮಸ್ಯೆಗಳನ್ನು ಬಗೆಹರಿಸಲು ಗಣಿ ಮತ್ತು ಭೂವಿಜ್ಞಾನ, ಕಂದಾಯ ಹಾಗೂ ಅರಣ್ಯ ಇಲಾಖೆಯ ಸಚಿವರು ಹಾಗೂ ಅಧಿಕಾರಿಗಳು ಪ್ರತಿ ತಿಂಗಳು ಅಥವಾ ಎರಡು ತಿಂಗಳಿಗೊಮ್ಮೆ ಸಭೆ ನಡೆಸಿ ಏಕಗವಾಕ್ಷಿ ವ್ಯವಸ್ಥೆಯ ಮಾದರಿಯಲ್ಲಿ ಇತ್ಯರ್ಥಪಡಿಸುವಂತೆ ಮುಖ್ಯಮಂತ್ರಿಗಳು ಸೂಚಿಸಿದರು.

ಅವರು ಇಂದು ರಾಜ್ಯದಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ವ್ಯಾಪ್ತಿಯ ಸಂಸ್ಥೆಗಳಲ್ಲಿ ಅರಣ್ಯ ಇಲಾಖೆಗೆ ಸಂಬಂಧಿಸಿದ ಬಾಕಿ ಇರುವ ಪ್ರಕರಣಗಳನ್ನು ಇತ್ಯರ್ಥ ಪಡಿಸುವ ಕುರಿತಂತೆ ಉನ್ನತ ಮಟ್ಟದ ಸಭೆ ನಡೆಸಿದರು.

ಈ ಸಂದರ್ಭದಲ್ಲಿ ಅರಣ್ಯ ಇಲಾಖೆ ತೀರುವಳಿ ಪಡೆಯಲು ಬಹಳಷ್ಟು ಪ್ರಕರಣಗಳು ಬಾಕಿ ಇರುವ ಕುರಿತು ಚರ್ಚಿಸಲಾಯಿತು. ಇದಕ್ಕೆ ಗಣಿ ಗುತ್ತಿಗೆ ಪಡೆದ ಸಂಸ್ಥೆಗಳು ಅರಣ್ಯೀಕರಣಕ್ಕೆ ಪರ್ಯಾಯ ಭೂಮಿ ನೀಡದೇ ಇರುವುದು ಕಾರಣವೆಂದು ಗುರುತಿಸಲಾಯಿತು. ಇದಕ್ಕಾಗಿ ಆನೆಗಳು ಮತ್ತಿತರೆ ವನ್ಯಜೀವಿಗಳ ಉಪಟಳದಿಂದಾಗಿ ಕೃಷಿ ಭೂಮಿ ಮಾರಲು ಸಿದ್ಧರಿರುವ ರೈತರು ಅರಸೀಕರೆ ಮತ್ತು ರಾಜ್ಯದ ಇತರೆ ಕೆಲವು ಭಾಗಗಳಲ್ಲಿದ್ದಾರೆ. ಇಂತಹ ರೈತರಿಗೆ ಈ ಸಂಸ್ಥೆಗಳು ಜಮೀನು ಖರೀದಿಸಿ ಅರಣ್ಯೀಕರಣಕ್ಕೆ ಒದಗಿಸಲು ಅನುವು ಮಾಡಿಕೊಡುವಂತೆ ಮುಖ್ಯಮಂತ್ರಿಗಳು (4ನೇ ಪುಟಕ್ಕೆ)

## ಆ.31ರಿಂದ ಶಿವಮೊಗ್ಗ ಏರ್‌ಪೋರ್ಟ್ ಆರಂಭ

ಬೆಂಗಳೂರು, ಜು.27 - ಶಿವಮೊಗ್ಗ ವಿಮಾನ ನಿಲ್ದಾಣ ಆಗಸ್ಟ್ 31ರಿಂದ ತನ್ನ ಕಾರ್ಯಾಚರಣೆ ಆರಂಭಿಸಲಿದ್ದು, ಅಂದು ಮೊದಲ ವಿಮಾನದಲ್ಲಿ ಪ್ರಯಾಣಿಸುವ ಭಾಗ್ಯ ಮಲೆನಾಡಿನ ಜನರಿಗೆ ಸಿಗಲಿದೆ.

ಈ ಮುಂಚೆ ಆಗಸ್ಟ್ 11ರಿಂದ ಆರಂಭವಾಗಬೇಕಿತ್ತು. ತಾಂತ್ರಿಕ ಕಾರಣಗಳಿಂದ 31ಕ್ಕೆ ಹೋಗಿದ್ದು ಇಂಡಿಗೋ ಏರ್ ಲೈನ್ಸ್ ತನ್ನ ಬುಕ್ಕಿಂಗ್ ಅನ್ನು ಆರಂಭಿಸಿದೆ ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ್ ತಿಳಿಸಿದ್ದಾರೆ.

ಶಿವಮೊಗ್ಗದಿಂದ ತಿರುಪತಿ, ಗೋವಾ ಮತ್ತು ಹೈದರಾಬಾದ್ ನಗರಗಳಿಗೆ ಉಡಾನ್ ಯೋಜನೆಯಡಿ ವಿಮಾನಯಾನ ಸೇವೆ (4ನೇ ಪುಟಕ್ಕೆ)

## ಪೈರಸಿ ತಡೆ ಮಸೂದೆಗೆ ಅಂಗೀಕಾರ

### ಮರು ವೀಕ್ಷಣೆಗಾಗಿ ಚಲನಚಿತ್ರ, ವಿಡಿಯೋ ತೆಗೆಯುವುದೂ ಅಪರಾಧ

### ಪೈರಸಿಗೆ ಮೂರು ವರ್ಷ ಜೈಲು, ದಂಡ

ನವದೆಹಲಿ, ಜು. 27 - ಪೈರಸಿ ತಡೆಯುವ ಹಾಗೂ ಅನುಮತಿ ಪ್ರಕ್ರಿಯೆ ಸರಳಗೊಳಿಸುವ ಸಿನೆಮಾಟೋಗ್ರಾಫ್ ತಿದ್ದುಪಡಿ ಮಸೂದೆಗೆ ರಾಜ್ಯಸಭೆ ಅಂಗೀಕಾರ ನೀಡಿದೆ.

ಮಸೂದೆ ಮಂಡನೆಯ ವೇಳೆ ಪ್ರತಿಪಕ್ಷಗಳು ಮಣಿಪುರದ ವಿಷಯದ ಕುರಿತು ಚರ್ಚೆಗೆ ಒತ್ತಾಯಿಸಿ ಸಭಾತ್ಯಾಗ ಮಾಡಿದವು. ನಂತರ ಮಸೂದೆಯ ಕುರಿತು ಅಲ್ಪಾವಧಿಯ ಚರ್ಚೆ ನಡೆಯಿತು. ಆನಂತರ ಮಸೂದೆಗೆ ಅಂಗೀಕಾರ ನೀಡಲಾಯಿತು. ಮಸೂದೆಯನ್ನು ಲೋಕಸಭೆಗೆ ಕಳಿಸಿ ಅಂಗೀಕಾರ ಪಡೆಯಬೇಕಿದೆ.

ಪೈರಸಿ ಮಾಡುವವರಿಗೆ 3 ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸಲು ಹಾಗೂ ಚಿತ್ರ ನಿರ್ಮಾಣಕ್ಕೆ ಆದ ವೆಚ್ಚದ ಶೇ.5ರವರೆಗೆ ದಂಡ ವಿಧಿಸಲು ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ.

ಪ್ರಸಕ್ತ ಚಲನಚಿತ್ರಗಳಿಗೆ ಹತ್ತು ವರ್ಷಗಳ ಅವಧಿಗೆ ಸೆನ್ಸಾರ್ ಒಪ್ಪಿಗೆ (2ನೇ ಪುಟಕ್ಕೆ)

## 'ನನ್ನ ಜೀವನ - ನನ್ನ ಸ್ವಚ್ಛ ನಗರ' : ದಾವಣಗೆರೆ ಪಾಲಿಕೆಗೆ ಪ್ರಶಸ್ತಿ ಪ್ರದಾನ



ಬೆಂಗಳೂರು,ಜು.27 - ಕೇಂದ್ರ ಸರ್ಕಾರದ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿಯ 'ನನ್ನ ಜೀವನ - ನನ್ನ ಸ್ವಚ್ಛ ನಗರ' ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದರ ಮೂಲಕ ಪ್ರಥಮ ಸ್ಥಾನಕ್ಕೆ ಭಾಜನರಾಗಿರುವ ದಾವಣಗೆರೆ ಮಹಾನಗರ ಪಾಲಿಕೆಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಬೆಂಗಳೂರಿನಲ್ಲಿ ಇಂದು ನಡೆದ ಸಮಾರಂಭದಲ್ಲಿ ದಾವಣಗೆರೆ ಮಹಾನಗರ ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ ಅವರಿಗೆ ಪೌರಾಡಳಿತ ಸಚಿವ ರೆಹಮಾನ್ ಖಾನ್ ಅವರು ಪ್ರಶಸ್ತಿ ಪ್ರದಾನ ಮಾಡಿದರು.

ದಾವಣಗೆರೆ ಮಹಾನಗರ ಪಾಲಿಕೆಯಲ್ಲದೇ, ಕರ್ನಾಟಕದ 6 ನಗರ ಪಾಲಿಕೆ, ನಗರಸಭೆ ಈ ಪ್ರಶಸ್ತಿಗೆ ಆಯ್ಕೆಯಾಗಿದ್ದು, ಈ ಎಲ್ಲಾ ಪಾಲಿಕೆ ಆಯುಕ್ತರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕರಾದ ಶ್ರೀಮತಿ ಮಂಜುಶ್ರೀ ಉಪಸ್ಥಿತರಿದ್ದರು.

## ಸಂಸ್ಥೆ ಬೆಳೆಯಬೇಕಾದರೆ ಜಾತಿ, ಪಕ್ಷ ಇರಬಾರದು

### ವಿಶ್ವಬಂಧು ಸೊಸೈಟಿ ಬೆಳ್ಳಿ ಮಹೋತ್ಸವದಲ್ಲಿ ಸಾಣೇಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ

ಹರಿಹರ, ಜು. 27 - ಸಮಾಜದಲ್ಲಿ ಒಂದು ಸಂಸ್ಥೆ ಹೆಮ್ಮರವಾಗಿ ಬೆಳೆಯತೊಡಗಿದೆ ಹಾಗೂ ಪ್ರಗತಿ ಹೊಂದುತ್ತಿದೆ ಎಂದು ಗೊತ್ತಾದ ತಕ್ಷಣವೇ ಅದನ್ನು ಮುಳುಗಿಸುವ ಸಂಚನ್ನು ಮಾಡುವವರು ಸಮಾಜದಲ್ಲಿ ಜಾಸ್ತಿಯಾಗಿದ್ದಾರೆ. ಆದರೆ ಶ್ರೀ ವಿಶ್ವಬಂಧು ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ ಆಡಳಿತ ಮಂಡಳಿಯ ಸದಸ್ಯರು, ಸಿಬ್ಬಂದಿಗಳು ಮತ್ತು ಷೇರುದಾರರು ತಂಡವಾಗಿ ಕಾರ್ಯನಿರ್ವಹಿಸಿ, ಪಾರದರ್ಶಕತೆ ಮತ್ತು ದಕ್ಷತೆಯಿಂದ ಇರುವುದರಿಂದ ಸೊಸೈಟಿ ಬೆಳ್ಳಿ ಹಬ್ಬ ಆಚರಿಸಿಕೊಳ್ಳುತ್ತಿದೆ ಎಂದು ಸಾಣೇಹಳ್ಳಿ ತರಳಬಾಳು ಶಾಖಾಮಠದ ಪಟ್ಟಾಧ್ಯಕ್ಷರಾದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿ ತಿಳಿಸಿದರು.

ನಗರದ ಸಿದ್ದೇಶ್ವರ ಪ್ಯಾಲೇಸ್ ಸಭಾಂಗಣದಲ್ಲಿ ಇಂದು ಏರ್ಪಾಡಾಗಿದ್ದ ಶ್ರೀ ವಿಶ್ವಬಂಧು ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ನಿಯಮಿತದ ಬೆಳ್ಳಿಹಬ್ಬ ಮಹೋತ್ಸವ ನೆನಪಿನ ಶಿವ ಸದನದ ನೂತನ ಕಟ್ಟಡದ ಉದ್ಘಾಟನಾ ಸಮಾರಂಭವನ್ನು ಉದ್ಘಾಟಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಸಂಸ್ಥೆಯೊಂದು ಎತ್ತರಕ್ಕೆ ಬೆಳೆಯುವಾಗ ಅದರಲ್ಲಿ ಜಾತಿ ಹಾಗೂ ಪಕ್ಷ ಸೇರದಂತೆ ಎಚ್ಚರಿಕೆ ವಹಿಸಬೇಕು. ಜಾತಿ ಹಾಗೂ ಪಕ್ಷ ಮಾಡುವಷ್ಟು ಅನಾಹುತಗಳನ್ನು ಬೇರೆ ಎಲ್ಲೂ ಕಾಣಲು ಸಾಧ್ಯವಿಲ್ಲ ಎಂದೂ ಶ್ರೀಗಳು ತಿಳಿಸಿದರು. 1999ರಲ್ಲಿ ಈ ವಿಶ್ವಬಂಧು ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯನ್ನು ನಾನು ಉದ್ಘಾಟನೆ ಮಾಡಿದ್ದೆ. ಇಂದು ನನ್ನಿಂದ ಬೆಳ್ಳಿ ಮಹೋತ್ಸವದ ಆಚರಣೆ ಮಾಡಿಕೊಳ್ಳುವಂತೆ ಆಗಿರುವುದು ಸಂತಸ ತಂದಿದೆ ಎಂದರು.



ತುಂಗಭದ್ರಾ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಮಾಜಿ ಅಧ್ಯಕ್ಷ ಡಿ. ಹೇಮಂತರಾಜ್ ಮಾತನಾಡಿ, ಬೆಳ್ಳೂಡಿ ರಾಮಚಂದ್ರಪ್ಪನವರಿಗೆ ಸಹಕಾರಿ ಸಂಘದಲ್ಲಿ ಸಾಕಷ್ಟು ಅನುಭವ ಇರುವ ಕಾರಣ ಸೊಸೈಟಿ ಹೆಮ್ಮರವಾಗಿ ಬೆಳೆಸುವ ಶಕ್ತಿ ದೊರೆತಿದೆ ಎಂದರು.

ಕೆ.ಎಂ.ಎಫ್ ಮಾಜಿ ಅಧ್ಯಕ್ಷ ಬಿ. ಜಗದೀಶಪ್ಪ ಮಾತನಾಡಿ, ಈ ಸೊಸೈಟಿ ಕೋಟಿ ರೂ.ಗಳಿಗೂ ಅಧಿಕ ಲಾಭ ಗಳಿಸಿದೆ. ಸೊಸೈಟಿಯಲ್ಲಿ ರಾಜಕೀಯ ಪ್ರವೇಶಕ್ಕೆ ಅವಕಾಶ ನೀಡಿಲ್ಲ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶಾಸಕ ಬಿ.ಪಿ. ಹರೀಶ್ ಮಾತನಾಡಿ, ಸಹಕಾರಿ ಸಂಘವನ್ನು ಮುನ್ನಡೆಸುವುದು ಸುಲಭವಲ್ಲ. ಸರಿಯಾದ ಸಾಮರ್ಥ್ಯ ಇದ್ದರೆ ಮಾತ್ರ ಸೊಸೈಟಿಯ ಉನ್ನತಿ ಸಾಧ್ಯ ಎಂದರು.

ಮಾಜಿ ಸಚಿವ ಎಸ್.ಎ. ರವೀಂದ್ರನಾಥ್ ಮಾತನಾಡಿ, ಸಹಕಾರಿ ಸಂಘಗಳು ರೈತರಿಗೆ ಹೆಚ್ಚಿನ ಪ್ರಮಾಣದಲ್ಲಿ ಸಾಲ ಕೊಡಬೇಕು. ಇದರಿಂದ ರೈತರಿಗೆ ಅನುಕೂಲವಾಗುತ್ತದೆ ಎಂದರು.

ಶ್ರೀ ವಿಶ್ವಬಂಧು ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಬೆಳ್ಳೂಡಿ ಬಿ. ರಾಮಚಂದ್ರಪ್ಪ ಮಾತನಾಡಿ, 1999ರಲ್ಲಿ 4 ಲಕ್ಷ ರೂ.ಗಳ ಬಂಡವಾಳದೊಂದಿಗೆ ಆರಂಭವಾದ ಸೊಸೈಟಿ ಇಂದು 1 ಕೋಟಿ 9 ಲಕ್ಷ ರೂ.ಗಳ ಲಾಭ ಗಳಿಸಿದೆ. ಬೆಳ್ಳಿ ಮಹೋತ್ಸವದ ನೆನಪಿಗಾಗಿ ಸಂತೆಬೆನ್ನೂರು ಗ್ರಾಮದಲ್ಲಿ ಇನ್ನೊಂದು ಶಾಖೆಯನ್ನು ತೆರೆದು, ಇನ್ನಷ್ಟು ಪ್ರಗತಿಯ ಹೆಜ್ಜೆ ಇಡಲಾಗುತ್ತಿದೆ ಎಂದರು.

ಜಿಲ್ಲಾ ಕಸಾಪ ನಿಕಟಪೂರ್ವ ಅಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ ಕುರ್ಕಿ ಮಾತನಾಡಿ, ಪ್ರಜಾಸತ್ತಾತ್ಮಕ ತಳಹದಿಯ ಮೇಲೆ ಸಹಕಾರ ಸಂಘಗಳು ರಚಿಸಲ್ಪಟ್ಟು ವಿಶ್ವದಾದ್ಯಂತ ತನ್ನ (2ನೇ ಪುಟಕ್ಕೆ)

## ಹಾಲಿನ ದರ ಹೆಚ್ಚಳಕ್ಕೆ ಸಂಪುಟ ಸಮ್ಮತಿ

ಬೆಂಗಳೂರು, ಜು. 27 - ಕರ್ನಾಟಕ ಹಾಲು ಉತ್ಪಾದಕರ ಮಹಾಮಂಡಳ (ಕೆಎಂಎಫ್) ನಂದಿನಿ ಹಾಲಿನ ದರವನ್ನು ಪ್ರತಿ ಲೀಟರ್‌ಗೆ 3 ರೂಪಾಯಿ ಹೆಚ್ಚಳ ಮಾಡಲು ರಾಜ್ಯ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಸಚಿವ ಹೆಚ್.ಕೆ.ಪಾಟೀಲ್, ನಂದಿನಿ ಹಾಲಿನ ದರ ಹೆಚ್ಚಳಕ್ಕೆ ಒಪ್ಪಿಗೆ ಸೇರಿದಂತೆ, ಸಭೆಯಲ್ಲಿ 15 ವಿಷಯಗಳ ಬಗ್ಗೆ ಚರ್ಚೆ ಮಾಡಲಾಯಿತು ಎಂದರು.

ಸಹಕಾರ ಇಲಾಖೆ ಅಡಿಯಲ್ಲಿ ಎಪಿಎಂಸಿಗಳಿಗೆ ರಸ್ತೆ ನಿರ್ಮಾಣ ಮಾಡಲು, ಮೂಲಭೂತ ಸೌಲಭ್ಯ ಒದಗಿಸಲು 130.40 ಕೋಟಿ ರೂ. ಮಂಜೂರು (2ನೇ ಪುಟಕ್ಕೆ)

## ಉದ್ಯೋಗ ಖಾತ್ರಿ ಅನುದಾನ ಕಡಿತಕ್ಕೆ ಆಕ್ಷೇಪ

ನವದೆಹಲಿ, ಜು. 27 - ಉದ್ಯೋಗ ಖಾತ್ರಿ ಯೋಜನೆಗೆ ಅನುದಾನ ಕಡಿತಗೊಳಿಸಲಾಗಿದೆ. ಇದರಿಂದ ಖಾತ್ರಿ ಯೋಜನೆಗೆ ಹಿನ್ನಡೆಯಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಕುರಿತ ಸಂಸದೀಯ ಸಮಿತಿ ಆಕ್ಷೇಪಿಸಿದೆ. ಈ ವರ್ಷದ ಬಜೆಟ್‌ನಲ್ಲಿ ಅನುದಾನವನ್ನು 60 ಸಾವಿರ ಕೋಟಿ ರೂ.ಗಳಿಗೆ ಇಳಿಸಲಾಗಿದೆ. ಕಳೆದ ವರ್ಷ ಯೋಜನೆಗೆ 73 ಸಾವಿರ ಕೋಟಿ ರೂ. ಬಿಡುಗಡೆ ಮಾಡಲಾಗಿತ್ತು. ಈ ಇಳಿಕೆಗೆ ಕಾರಣ ತಿಳಿಸಿಲ್ಲ ಎಂದು ಸಮಿತಿ ಹೇಳಿದೆ.

## ಡಿಸಿ ಆದೇಶ ಧಿಕ್ಕರಿಸಿದ ಶಾಲೆಗಳು

### ನೋಟಿಸ್ ನೀಡಿದ ರಾಣೇಬೆನ್ನೂರು ಶಿಕ್ಷಣಾಧಿಕಾರಿ



ರಾಣೇಬೆನ್ನೂರು, ಜು. 27- ಸತತವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಶಾಲಾ ಮಕ್ಕಳಿಗೆ ಯಾವುದೇ ರೀತಿಯಲ್ಲಿ ತೊಂದರೆ ಆಗಬಾರದು ಎಂದು ದಿ. 27ರಂದು ಜಿಲ್ಲೆಯಾದ್ಯಂತ ಶಾಲೆಗಳಿಗೆ ರಜೆ ಘೋಷಿಸಿ ಹಾವೇರಿ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದರು.

ಅವರ ಆದೇಶವನ್ನು ಧಿಕ್ಕರಿಸಿ ಬಿಜೆಪಿ ಮುಖಂಡರ ಸುಪರ್ದಿಯಲ್ಲಿರುವ ಟ್ಯಾಗೋರ ಶಿಕ್ಷಣ ಸಂಸ್ಥೆ, ಕಾಂಗ್ರೆಸ್ ಮುಖಂಡರ ಸುಪರ್ದಿಯಲ್ಲಿರುವ ನ್ಯಾಷನಲ್ ಪಬ್ಲಿಕ್ ಸಂಸ್ಥೆಯವರು ಇಂದು ತಮ್ಮ ಎಲ್ಲಾ ಹಂತದ ಶಾಲೆಗಳನ್ನು ಚಾಲು ಮಾಡಿದ್ದಾರೆಂದು ವಿಷಯ ತಿಳಿದ ಶಿಕ್ಷಣಾಧಿಕಾರಿ ಎಂ.ಹೆಚ್. ಪಾಟೀಲ ಅವರು, ಶಾಲೆಗೆ ತೆರಳಿ ಬಂದ್ ಮಾಡಿಸಿ, ಕಾರಣ ಕೇಳಿ ನೋಟಿಸ್ ನೀಡಿದ್ದಾರೆಂದು ಗೊತ್ತಾಗಿದೆ.

ದಿ. 27ರಂದು ಅಧಿಕ ಮಳೆ ಬರಲಿದ್ದು, ರಸ್ತೆಯಲ್ಲಿ ಶಾಲಾ ಮಕ್ಕಳಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗಬಾರದು ಎಂದು ಹಾವೇರಿ ಜಿಲ್ಲೆಯ ಅಂಗನವಾಡಿ ಕೇಂದ್ರಗಳು, ಸರ್ಕಾರಿ ಹಾಗೂ ಖಾಸಗಿ ಪೂರ್ವ ಪ್ರಾಥಮಿಕ, ಪ್ರಾಥಮಿಕ, ಮಾಧ್ಯಮಿಕ ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ಜಿಲ್ಲಾಧಿಕಾರಿಗಳು ರಜೆ ಘೋಷಿಸಿ ಇಂದು ಬೆಳಿಗ್ಗೆ ಆದೇಶ ಹೊರಡಿಸಿದ್ದರು.

**ಪ್ರಿನ್ಸಿಪಾಲ್‌ಗೆ ಪ್ರಾಣ ಸಂಕಟ :** ಜಿಲ್ಲಾಧಿಕಾರಿಗಳ ಆದೇಶ ಧಿಕ್ಕರಿಸುವ ಇರಾದೆ ನನ್ನಲ್ಲಿಲ್ಲ. ಆದರೆ ಆಡಳಿತ (2ನೇ ಪುಟಕ್ಕೆ)

## ತುಂಗಭದ್ರಾ ನದಿಯಲ್ಲಿ ನೀರು ಇಳಿಮುಖ

ಮಲೇಬೆನ್ನೂರು, ಜು.27 - ಮಲೆನಾಡಿನಲ್ಲಿ ಮಳೆ ಅರ್ಭಟ ಬುಧವಾರವೂ ಕಡಿಮೆಯಾಗಿದ್ದು, ನದಿಗಳಲ್ಲಿ ನೀರಿನ ಹರಿವೂ ಇಳಿಮುಖವಾಗಿದೆ. ಭದ್ರಾ ಜಲಾಶಯಕ್ಕೆ ಗುರುವಾರ ಬೆಳಿಗ್ಗೆ 28,296 ಕ್ಯೂಸೆಕ್ಸ್ ಇದ್ದ ಒಳಹರಿವು ಸಂಜೆ ಕಡಿಮೆಯಾಗಿದೆ ಎಂದು ಹೇಳಲಾಗಿದೆ. ಜಲಾಶಯದ ನೀರಿನ ಮಟ್ಟ ಗುರುವಾರ ಸಂಜೆ 159 ಅಡಿಯಾಗಿತ್ತು.



ಉಕ್ಕಡಗಾತ್ರಿ - ಪತ್ತೇಪುರ ರಸ್ತೆ ಸಂಚಾರಕ್ಕೆ ಮುಕ್ತ

ಗಾಜನೂರಿನ ತುಂಗಾ ಜಲಾಶಯಕ್ಕೆ ಗುರುವಾರ ಬೆಳಿಗ್ಗೆ 39 ಸಾವಿರ ಕ್ಯೂಸೆಕ್ಸ್ ಇದ್ದ ಒಳಹರಿವು ಸಂಜೆ 22 ಸಾವಿರ ಕ್ಯೂಸೆಕ್ಸ್‌ಗೆ ಇಳಿಕೆ ಕಂಡಿದೆ. ತುಂಗಾ ಜಲಾಶಯದಿಂದ ಬುಧವಾರ (4ನೇ ಪುಟಕ್ಕೆ)

## ಕಾಶಿಪುರದ ಆಲೂರು ಬಸವರಾಜಪ್ಪ ನಿಧನ



ದಾವಣಗೆರೆ ತಾಲ್ಲೂಕು ಕಾಶೀಪುರ ಗ್ರಾಮದ ವಾಸಿ
**ದಿ. ಆಲೂರು ಹಾಲಪ್ಪನವರ ಪುತ್ರ**
**ಆಲೂರು ಬಸವರಾಜಪ್ಪ**
ಇವರು ದಿನಾಂಕ 27.07.2023ರ ಗುರುವಾರ ಸಂಜೆ 4.20ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 87 ವರ್ಷ ವಯಸ್ಸಾಗಿತ್ತು.

ಮೂವರು ಪುತ್ರರು, ಆರು ಜನ ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು - ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 28.07.2023ರ ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ದಾವಣಗೆರೆ ತಾಲ್ಲೂಕು ಕಾಶೀಪುರ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**
ಮೊ : 99028 51489, 99458 57747, 78995 13770

## ಶಾಮನೂರು ಸಣ್ಣಹಾಲಪ್ಪ ಕೇಶವ್ ನಿಧನ



ದಾವಣಗೆರೆ ಸಿಟಿ ಶಾಮನೂರು ವಾಸಿ
ಸಣ್ಣಹಾಲಪ್ಪ ಶ್ರೀಮತಿ ಅನಿತಾ, ಎಸ್. ಚಂದ್ರಶೇಖರಪ್ಪ ಅವರ ಪುತ್ರ
**ಎಸ್. ಸಿ. ಕೇಶವ್** ಅವರು
ದಿನಾಂಕ 27.07.2023ರ ಗುರುವಾರ ಬೆಳಿಗ್ಗೆ 5.30ಕ್ಕೆ ನಿಧನರಾದರು. ಮೃತರಿಗೆ 30 ವರ್ಷ ವಯಸ್ಸಾಗಿತ್ತು. ತಂದೆ-ತಾಯಿ, ಅಕ್ಕ-ಭಾವ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 28.07.2023ರ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**
ಸಣ್ಣಹಾಲಪ್ಪ ವಂಶಸ್ಥರು ಹಾಗೂ ಬಂಧು-ಮಿತ್ರರು. ಮೊ. 9620238469

# ಮಣಿಪುರದಲ್ಲಿ ರಾಷ್ಟ್ರಪತಿ ಆಡಳಿತಕ್ಕೆ ಆಗ್ರಹ



ಹರಿಹರದಲ್ಲಿ ಡಿಎಸ್‌ಎಸ್ ಪ್ರತಿಭಟನೆ

ಹರಿಹರ, ಜು. 27 - ಜನಾಂಗೀಯ ಸಂಘರ್ಷ ಮತ್ತು ಹಿಂಸಾಚಾರದಿಂದ ನಲುಗಿ ಹೋಗಿರುವ ಮಣಿಪುರದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ವಿಫಲವಾಗಿರುವ ಮುಖ್ಯಮಂತ್ರಿ ಬೀರೇನ್ ಸಿಂಗ್ ಸರ್ಕಾರವನ್ನು ವಜಾಗೊಳಿಸಿ, ರಾಷ್ಟ್ರಪತಿ ಆಡಳಿತ ಜಾರಿ ಮಾಡಲು ಆಗ್ರಹಿಸಿ ಬುಧವಾರ ನಗರದಲ್ಲಿ ದಸಂಸ (ಪ್ರೊ.ಬಿ. ಕೃಷ್ಣಪ್ಪ ಸ್ಥಾಪಿತ) ಯಿಂದ ತಹಶೀಲ್ದಾರ್ ಪೃಥ್ವಿ ಸಾನಿಕಂ ರವರ ಮೂಲಕ ರಾಷ್ಟ್ರಪತಿಯವರಿಗೆ ಮನವಿ ಅರ್ಪಿಸಲಾಯಿತು. ನಂತರ ದಸಂಸ ತಾಲ್ಲೂಕು ಸಂಚಾಲಕ ಪಿ.ಜೆ. ಮಹಾಂತೇಶ್ ಮಾತನಾಡಿ, ಈಶಾನ್ಯ ರಾಜ್ಯ ಮಣಿಪುರದಲ್ಲಿ ಮೂರು ತಿಂಗಳ ಹಿಂದೆ ಜನಾಂಗೀಯ ಸಂಘರ್ಷ ಮತ್ತು ಹಿಂಸಾಚಾರದಿಂದ ನಲುಗಿ ಹೋಗಿರುವ ಕುಕಿಜೋ ಬುಡಕಟ್ಟು ಸಮುದಾಯದ ಇಬ್ಬರು ಮಹಿಳೆಯರನ್ನು ಸಂಪೂರ್ಣ ಬೆತ್ತಲು ಮಾಡಿ ಅವರ ಮೇಲೆ ಗುಂಪೊಂದು ಲೈಂಗಿಕ ದೌರ್ಜನ್ಯ ನಡೆಸಿದ ವಿಡಿಯೋ ಹರಿದಾಡಿದೆ. ಇದು ಮಣಿಪುರ ಹಿಂಸಾಚಾರದ ಆಘಾತಕಾರಿ ಮುಖವನ್ನು ತೆರೆದಿಟ್ಟಿದೆ ಎಂದು ಕಿಡಿ ಕಾರಿದರು.

ಜನಾಂಗೀಯ ಸಂಘರ್ಷ ಮತ್ತು ಹಿಂಸಾಚಾರದಿಂದ ನಲುಗಿರುವ ಮಣಿಪುರ ಸರ್ಕಾರ ವಜಾಗೊಳಿಸಿ ರಾಷ್ಟ್ರಪತಿ ಆಡಳಿತ ಜಾರಿ ಮಾಡಬೇಕು. ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ವಿಫಲರಾಗಿರುವ ಮಣಿಪುರದ ಮುಖ್ಯಮಂತ್ರಿ ಬೀರೇನ್ ಸಿಂಗ್, ಕೇಂದ್ರ ಗೃಹ ಮಂತ್ರಿ ಅಮಿತ್ ಶಾ ಮತ್ತು ಪ್ರಧಾನಿ ನರೇಂದ್ರ ಮೋದಿಯವರು ನೈತಿಕ ಹೊಣೆ ಹೊತ್ತು ತಮ್ಮ ಸ್ಥಾನಗಳಿಗೆ ರಾಜೀನಾಮೆ ಸಲ್ಲಿಸಬೇಕೆಂಬುದು ಸಂಘಟನೆಯ ಆಗ್ರಹವಾಗಿದೆ ಎಂದರು.

ಈ ಸಂದರ್ಭದಲ್ಲಿ ಕಡ್ಲೆಗೊಂದಿ ಗ್ರಾ.ಪಂ. ಸದಸ್ಯ ತಿಮ್ಮಣ್ಣ, ಭಾನುವಳ್ಳಿ ಚೌಡಪ್ಪ ಸಿ., ಆನಂದ ಬೆಳ್ಳೂಡಿ, ಪ್ರವೀಣ್, ಲಿಂಗರಾಜ್, ಗುಳ್ಳಪ್ಪ, ನಿಂಗರಾಜ್, ಮಂಜುನಾಥ್, ಹನುಮಂತ, ಹರೀಶ್, ಯಲ್ಲಪ್ಪ, ಕೆ.ಎಚ್. ಹನುಮಂತಪ್ಪ ಎಚ್. ಪಕ್ಕೀರಪ್ಪ, ಈರಣ್ಣ ಬಿ.ಎ. ಹನುಮಜ್ಜ, ಹನುಮಕ್ಕ, ನಾಗಮ್ಮ, ಪುಷ್ಪ, ಭಾಗ್ಯಮ್ಮ, ಸುಶೀಲಮ್ಮ, ಹಾಲಮ್ಮ, ನಿರ್ಮಲಮ್ಮ, ಗುಳ್ಳಪ್ಪ ಹಾಗು ಇತರರಿದ್ದರು.

# ಐವರು ನೌಕರರ ವಿರುದ್ಧ ಕಾನೂನು ಕ್ರಮಕ್ಕೆ ಆಗ್ರಹ



ಹೊನ್ನಾಳಿ ಸರ್ಕಾರಿ ನೌಕರರಿಂದ ತಹಶೀಲ್ದಾರರಿಗೆ ಮನವಿ

ಹೊನ್ನಾಳಿ, ಜು.27- ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ಷಡಕ್ಷರಿ ಅವರ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಅಪಪ್ರಚಾರ ಮಾಡುತ್ತಿರುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ರಾಜ್ಯ ಸಂಘಟನಾ ಕಾರ್ಯದರ್ಶಿ ಮತ್ತು ನಿಕಟ ಪೂರ್ವ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಬಿ. ಕುಮಾರ್ ಒತ್ತಾಯಿಸಿದ್ದಾರೆ.

ಸರ್ಕಾರಿ ನೌಕರರ ವಿವಿಧ ಸಂಘಗಳ ವತಿಯಿಂದ ತಹಶೀಲ್ದಾರ್ ತಿರುಪತಿ ಪಾಟೀಲ್ ಅವರಿಗೆ ಮನವಿ ಸಲ್ಲಿಸಿ ಅವರು ಮಾತನಾಡಿದರು.

ಸಿ.ಎಸ್.ಷಡಕ್ಷರಿ ಅವರು ರಾಜ್ಯಾಧ್ಯಕ್ಷರಾದ ಮೇಲೆ ಹಲವಾರು ವರ್ಷಗಳ ಸರ್ಕಾರಿ ನೌಕರರ ಬೇಡಿಕೆಗಳು ಈಡೇರಿದ್ದು, ಈ ಎಲ್ಲಾ ಬೆಳವಣಿಗೆಗಳನ್ನು ಸಹಿಸದ ಕೆಲ ವ್ಯಕ್ತಿಗಳು ಷಡಕ್ಷರಿ ಅವರನ್ನು ತೇಜೋವಧೆ ಮಾಡಲು ಕುತಂತ್ರ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರಿ ನೌಕರರ ಸಂಘದ ಸಂಘಟನೆಯನ್ನು ದುರ್ಬಲಗೊಳಿಸುವ ಹುನ್ನಾರದಿಂದ, ಸಂಘವನ್ನು ಮತ್ತು ರಾಜ್ಯಾಧ್ಯಕ್ಷರನ್ನು ಗುರಿಯಾಗಿರಿಸಿಕೊಂಡು ನಕಲಿ ದಾಖಲೆಗಳನ್ನು ಸೃಷ್ಟಿಸಿ, ಸಂಘಕ್ಕೆ ಆಡಳಿತಾಧಿಕಾರಿಗಳನ್ನು ನೇಮಿಸುವಂತೆ ಒತ್ತಡ ತರುತ್ತಿರುವ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಅಧೀನ ಕಾರ್ಯದರ್ಶಿ ಶಾಂತಾರಾಮ್, ಸರ್ಕಾರದ ಸಚಿವಾಲಯದ ಶಾಖಾಧಿಕಾರಿ ಗುರುಸ್ವಾಮಿ, ರಾಯಚೂರಿನ ಜಾನುವಾರು ಅಭಿವೃದ್ಧಿ ಅಧಿಕಾರಿ ಎಂ. ಮೆಹಬೂಬ್ ಬಾಷಾ, ರಾಮನಗರದ ಅವ್ವೇರಹಳ್ಳಿಯ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ನಿಂಗೇಗೌಡ್ರು ಅವರುಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡುವಂತೆ ಆಗ್ರಹಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ನೂತನ ಅಧ್ಯಕ್ಷ ಆರ್.ಎಸ್.ಪಾಟೀಲ್, ಗೌರವಾಧ್ಯಕ್ಷ ಕೆ.ಬಿ.ಮುರುಗೇಶಪ್ಪ, ಕಾರ್ಯದರ್ಶಿ ಎಚ್.ಬಿ.ರವಿ, ನಿರ್ದೇಶಕರಾದ ಮಂಜುನಾಥ್ ಇಂಗಳಗೊಂದಿ, ಟಿ.ಪಿ.ರವಿ, ಸುರೇಶ್ ಮಾಳ್ಗಿ, ಹೊಸಕೇರಿ ಸಿದ್ದಪ್ಪ, ಎಂ.ಎಚ್. ಕೋಟ್ಯಪ್ಪ, ಕುಮಾರ್ ನಾಯ್ಕ್, ಖಜಾಂಚಿ ಮಹೇಂದ್ರಕುಮಾರ್ ಮತ್ತು ಇತರರು ಉಪಸ್ಥಿತರಿದ್ದರು.

## ಆಸ್ಟ್ರೇಲಿಯಾ : ಕಡಲ ತೀರದಲ್ಲಿ ಸಿಲುಕಿದ ತಿಮಿಂಗಿಲಗಳಿಗೆ ದಯಾ ಮರಣ

ಪರ್ತ್, ಜು. 27 - ಆಸ್ಟ್ರೇಲಿಯಾದ ಕಡಲ ತೀರಕ್ಕೆ ಬಂದು ಸಿಲುಕಿರುವ ಸುಮಾರು 100 ಪೈಲಟ್ ತಿಮಿಂಗಿಲಗಳನ್ನು ರಕ್ಷಿಸಿ ವಾಪಸ್ ಸಮುದ್ರಕ್ಕೆ ಕಳಿಸುವ ಪ್ರಯತ್ನ ವಿಫಲವಾಗಿದ್ದು, ಅವುಗಳಿಗೆ ದಯಾಮರಣ ನೀಡಲಾಗಿದೆ.

ಪೈಲಟ್ ತಿಮಿಂಗಿಲಗಳು ಮಂಗಳವಾರದಂದು ಚೆಯ್ನೆಸ್ ಕಡಲ ತೀರಕ್ಕೆ ಬಂದು ಸಿಲುಕಿದ್ದವು. ನೂರಕ್ಕೂ ಹೆಚ್ಚು ಅಧಿಕಾರಿಗಳು ಹಾಗೂ 250ಕ್ಕೂ ಹೆಚ್ಚು ಸ್ವಯಂ ಸೇವಕರು ತಿಮಿಂಗಿಲಗಳ ರಕ್ಷಣೆಗೆ ನಿರಂತರ ಪ್ರಯತ್ನ ನಡೆಸಿದರು. ಆದೂ, ಚಳಿಗೆ ಸಿಲುಕಿ 52 ತಿಮಿಂಗಿಲಗಳು ಕಡಲ ತೀರದಲ್ಲೇ ಸತ್ತಿವೆ.

ಉಳಿದ 45 ತಿಮಿಂಗಿಲಗಳಿಗೆ ದಯಾಮರಣ ನೀಡಲಾಗಿದೆ. ತಿಮಿಂಗಿಲಗಳು ಸುದೀರ್ಘ ಕಾಲ ಬಳಲುವುದನ್ನು ತಪ್ಪಿಸಲು ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಪೈಲಟ್ ತಿಮಿಂಗಿಲಗಳು ಅತಿ ಹೆಚ್ಚು ಸಮಾಜ ಜೀವಿಗಳಾಗಿವೆ. ಅವುಗಳು ಸಂಕೀರ್ಣ ಕೌಟುಂಬಿಕ ವ್ಯವಸ್ಥೆ ಹೊಂದಿರುತ್ತವೆ. ಹುಟ್ಟಿನಿಂದಲೂ ಅವು ಗುಂಪಿನಲ್ಲೇ ಬದುಕುತ್ತವೆ. ಈ ರೀತಿ ಗುಂಪಿನಲ್ಲಿ ಬಂದ ತಿಮಿಂಗಿಲಗಳು ಕಡಲ ತೀರಕ್ಕೆ ಬಂದು ಸಿಲುಕಿವೆ. ತಿಮಿಂಗಿಲಗಳ ಮಾದರಿಗಳನ್ನು ಪರೀಕ್ಷೆಗಾಗಿ ಪಡೆದುಕೊಳ್ಳಲಾಗಿದೆ. ಪರೀಕ್ಷೆಯ ನಂತರ ಇವುಗಳು ಕಡಲ ತೀರಕ್ಕೆ ಬಂದು ಸಿಲುಕಿದ ಕಾರಣ ತಿಳಿಯುವ ಸಾಧ್ಯತೆ ಇದೆ.

ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಸುಮಾರು 200 ಪೈಲಟ್ ತಿಮಿಂಗಿಲಗಳು ಪಶ್ಚಿಮ ಕರಾವಳಿಯ ತಸ್ಮಾನಿಯ ಎಂಬಲ್ಲಿನ ನಿರ್ಜನ ದ್ವೀಪಕ್ಕೆ ಬಂದು ಸತ್ತಿದ್ದವು.

ನಂತರದ ತಿಂಗಳಿನಲ್ಲಿ ಸುಮಾರು 500 ಪೈಲಟ್ ತಿಮಿಂಗಿಲಗಳು ನ್ಯೂಜಿಲ್ಯಾಂಡ್‌ನ ಎರಡು ದುರ್ಗಮ ದ್ವೀಪಗಳಲ್ಲಿ ಸತ್ತಿದ್ದವು.

## ಪೈರಸಿ ತಡೆ ಮಸೂದೆಗೆ ಅಂಗೀಕಾರ

**(1ನೇ ಪುಟದಿಂದ)** ನೀಡಲಾಗುತ್ತಿದೆ. ಇದನ್ನು ಕೈ ಬಿಟ್ಟು, ಶಾಶ್ವತ ಒಪ್ಪಿಗೆ ನೀಡಲು ಮಸೂದೆಯಲ್ಲಿ ತಿದ್ದುಪಡಿ ತರಲಾಗುತ್ತಿದೆ. ಯು.ಎ. ವರ್ಗದ ಪ್ರಮಾಣ ಪತ್ರದ ಚಿತ್ರಗಳನ್ನು ಯು.ಎ. 7+, ಯು.ಎ. 13+ ಹಾಗೂ ಯು.ಎ. 16+ ಎಂದು ವರ್ಗೀಕರಿಸಲು ತೀರ್ಮಾನಿಸಲಾಗಿದೆ. ಟಿವಿ ಹಾಗೂ ಇತರೆ ಮಾಧ್ಯಮಗಳಲ್ಲಿ ಚಿತ್ರ ಪ್ರಸಾರ ಮಾಡುವ ಸಲುವಾಗಿ ಸಿ.ಬಿ.ಎಫ್.ಸಿ. ಪ್ರತ್ಯೇಕ ಪ್ರಮಾಣ ಪತ್ರ ನೀಡಲೂ ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ. ಅನಧಿಕೃತವಾಗಿ ಚಲನಚಿತ್ರಗಳನ್ನು ದಾಖಲಿಸಿಕೊಳ್ಳುವ ಹಾಗೂ ಪ್ರದರ್ಶಿಸುವುದರ ಮೇಲೆ ನಿರ್ಬಂಧ ಹೇರಲಾಗಿದೆ. ಚಲನಚಿತ್ರ ಇಲ್ಲವೇ ಚಲನಚಿತ್ರದ ಭಾಗವನ್ನು ಅದೇ ಉಪಕರಣದಲ್ಲಿ ಮತ್ತೆ ನೋಡುವ ಸಲುವಾಗಿಯೂ ರೆಕಾರ್ಡ್ ಮಾಡುವುದನ್ನು ನಿಷೇಧಿಸಲಾಗುವುದು.

ಈ ಸಂದರ್ಭದಲ್ಲಿ ಮಾತನಾಡಿದ ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅನುರಾಗ್ ಠಾಕೂರ್, ಪೈರಸಿ ಕಾರಣದಿಂದ ಚಲನಚಿತ್ರೋದ್ಯಮಕ್ಕೆ ವರ್ಷಕ್ಕೆ 20 ಸಾವಿರ ಕೋಟಿ ರೂ. ನಷ್ಟವಾಗುತ್ತಿದೆ. ಈ ನಷ್ಟ ತಡೆಯಲು ಕಾಯ್ದೆ ರೂಪಿಸಲಾಗುತ್ತಿದೆ ಎಂದರು.

## ದಾವಣಗೆರೆ ವಿವಿಯಲ್ಲಿಂದು ಉಪನ್ಯಾಸ

ದಾವಣಗೆರೆ ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದಿಂದ ರಾಜ್ಯಶಾಸ್ತ್ರ ವಿಭಾಗದಲ್ಲಿ ಇಂದು ಮಧ್ಯಾಹ್ನ 2 ಗಂಟೆಗೆ ವಿಶೇಷ ಉಪನ್ಯಾಸ ನಡೆಯಲಿದೆ.

ಸಂಪನ್ಮೂಲ ವ್ಯಕ್ತಿಗಳಾಗಿ ಹುಲ್ಲುಮನಿ ತಿಮ್ಮಣ್ಣ (ಹೊನ್ನಾಳಿ ವಿಭಾಗ) ಆಗಮಿಸುವರು. ಮುಖ್ಯ ಅತಿಥಿಗಳಾಗಿ ಕುಲಸಚಿವರಾದ ಶ್ರೀಮತಿ ಸರೋಜಾ ಬಿ.ಬಿ. ಮತ್ತು ಡಾ. ವೆಂಕಟರಾವ್ ಎಂ. ಪಾಲಾಟಿ ಅವರು ಆಗಮಿಸುವರು. ಅಧ್ಯಕ್ಷತೆಯನ್ನು ಡಾ. ಅಶೋಕ್‌ಕುಮಾರ್ ವೀ. ಪಾಳೇದ ವಹಿಸುವರು.

## ಸಂಸ್ಥೆ ಬೆಳೆಯಬೇಕಾದರೆ ಜಾತಿ, ಪಕ್ಷ ಇರಬಾರದು

**(1ನೇ ಪುಟದಿಂದ)** ವ್ಯಾಪ್ತಿಯನ್ನು ಪಸರಿಸಿವೆ. ಜಾತಿ, ಧರ್ಮ, ಪಂಥ, ಭಾಷೆ ಮೀರಿ ಆರ್ಥಿಕ ಬದುಕನ್ನು ಹಸನು ಮಾಡಿವೆ ಎಂದರು.

ಈ ವೇಳೆ ನಿಟ್ಟೂರಿನ ಸಾವಯವ ಕೃಷಿ ತಜ್ಞರಾದ ಸರೋಜಮ್ಮ ಎನ್. ಪಾಟೀಲ್, ಭಾರತೀಯ ನೌಕಾಪಡೆಗೆ ಆಯ್ಕೆಯಾದ ಭೂಮಿಕಾ ಮತ್ತು ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು. 25 ನೇ ವಾರ್ಷಿಕ ಮಹಾಸಭೆಯನ್ನು ಅಧ್ಯಕ್ಷ ಬೆಳ್ಳೂಡಿ ಬಿ. ರಾಮಚಂದ್ರಪ್ಪನವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಈ ಸಂದರ್ಭದಲ್ಲಿ ಡಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಬಿ. ಹಾಲೇಶಪ್ಪ, ಶ್ರೀ ವಿಶ್ವಬಂಧು ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಉಪಾಧ್ಯಕ್ಷರಾದ ಡಿ. ವನಜಾಕ್ಷಮ್ಮ ಕುಂಬಳೂರು, ನಿರ್ದೇಶಕರಾದ ಕೆ. ಕುಮಾರ್ ಹೊಳೆ ಸಿರಿಗೆರೆ, ಹೆಚ್. ನಾಗರಾಜ್ ಅಮರಾವತಿ, ಹೆಚ್. ಶಾಂತವೀರಪ್ಪ ಯಲವಟ್ಟಿ, ಕೆ. ದೇವೇಂದ್ರಪ್ಪ ಹೊಳೆ ಸಿರಿಗೆರೆ, ಕೆ.ಜಿ. ಮೂರ್ತಿ ಕುಂಬಳೂರು, ಕೆ.ಎಸ್. ದೇವರಾಜ್ ಕುಂಬಳೂರು, ಪಾರ್ವತಮ್ಮ ಶೇಖರಪ್ಪ ಹರಿಹರ, ಜಿ. ಮಲ್ಲಪ್ಪ ಬೆಳ್ಳೂಡಿ, ಕಡೇಮನೆ ಪುಟ್ಟಪ್ಪ ಕುಂಬಳೂರು, ಎನ್.ಕೆ. ಪ್ರಕಾಶ್ ಬೆಳ್ಳೂಡಿ, ಎನ್ ನಾಗರಾಜ್ ಹೊಳೆ ಸಿರಿಗೆರೆ, ಮುಖ್ಯ ವ್ಯವಸ್ಥಾಪಕ ಕೆ.ಟಿ. ಶಂಭುಲಿಂಗಪ್ಪ, ಮಾಜಿ ಅಧ್ಯಕ್ಷ ಸುರೇಶಪ್ಪ, ಬಸಪ್ಪ, ವೆಂಕಟೇಶ, ಸಿಬ್ಬಂದಿಗಳಾದ ಬಿ.ಎಸ್. ರಾಘವೇಂದ್ರ, ಕೆ.ಹೆಚ್. ಉಮೇಶ್, ಬಿ. ಗಣೇಶ್, ಜಿ.ಎಂ. ರವಿಕುಮಾರ್, ಜಿ. ಎನ್. ನಿರ್ಮಲ ಇತರರು ಹಾಜರಿದ್ದರು.

ಪ್ರಾರ್ಥನೆಯನ್ನು ರವಿಭಟ್ ದಂಪತಿ, ಸ್ವಾಗತ ಕೆ. ಕುಮಾರ್ ಹೊಳೆಸಿರಿಗೆರೆ, ನಿರೂಪಣೆಯನ್ನು ವ್ಯವಸ್ಥಾಪಕ ಕೆ.ಟಿ. ಶಂಭುಲಿಂಗಪ್ಪ ನೆರವೇರಿಸಿದರು.

## ಕೇಂದ್ರದ ಹೊಸ ಗೊಬ್ಬರ ಬಿಡುಗಡೆ



ನಂದಿತಾವರೆ

ಮಲೇಬೆನ್ನೂರು, ಜು. 27- ನಂದಿತಾವರೆಯ ನಂದಿ ಫರ್ಟಿಲೈಜರ್ಸ್‌ನಲ್ಲಿ ಕೇಂದ್ರ ಸರ್ಕಾರ ಹಾಗೂ ಕೋರಮಂಡಲ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಕಂಪನಿಯ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಶಾಸಕ ಬಿ.ಪಿ. ಹರೀಶ್ ಅವರು ಯೂರಿಯಾ ಗೋಲ್ಡ್ - ಸಲ್ಫರ್ ಲೇಪಿತ ಹೊಸ ಯೂರಿಯಾ ರಸಗೊಬ್ಬರವನ್ನು ಬಿಡುಗಡೆ ಮಾಡಿದರು.

ನಂತರ ರೈತರನ್ನು ಉದ್ದೇಶಿಸಿ ಮಾತನಾಡಿದ ಹರೀಶ್ ಅವರು, ಪ್ರಧಾನಿ ನರೇಂದ್ರ ಮೋದಿ ಅವರು ರೈತರ ಪರವಾಗಿದ್ದು, ರೈತರ ಖಾತೆಗೆ ಪ್ರತಿ ವರ್ಷ 6 ಸಾವಿರ ರೂ.ಗಳನ್ನು ನೇರವಾಗಿ ಜಮೆ ಮಾಡುತ್ತಿದ್ದಾರೆ ಎಂದರು. ಇದೇ ಸಂದರ್ಭದಲ್ಲಿ ಪ್ರಧಾನ ಮಂತ್ರಿಗಳ ಉದ್ಘಾಟನಾ ಕಾರ್ಯಕ್ರಮದ ನೇರ ಪ್ರಸಾರದ ವ್ಯವಸ್ಥೆ ಮಾಡಲಾಗಿತ್ತು.

ಕಾರ್ಯಕ್ರಮದಲ್ಲಿ ಜಂಟಿ ಕೃಷಿ ಅಧಿಕಾರಿ ನಾರನಗೌಡ, ಕೋರಮಂಡಲ್ ಕಂಪನಿಯ ವತಿಯಿಂದ ಹಿರಿಯ ಬೇಸಾಯ ಶಾಸ್ತ್ರಜ್ಞ ಕಿರಣ್ ಕುಮಾರ್, ರಸಗೊಬ್ಬರ ಅಂಗಡಿಯ ಮಾಲೀಕ ಮಹದೇವಪ್ಪ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

## ದರ ಹೆಚ್ಚಳಕ್ಕೆ ಸಮ್ಮತಿ

**(1ನೇ ಪುಟದಿಂದ)** ಮಾಡಲಾಗಿದೆ. ಮೊಟ್ಟೆಯನ್ನು ವಿಭಾಗವಾರು ಖರೀದಿಸಿ ವಿತರಿಸಲು ನಿರ್ಣಯ ತೆಗೆದುಕೊಳ್ಳಲಾಗಿದೆ ಎಂದು ಸಚಿವರು ತಿಳಿಸಿದರು.

ಅಕ್ರಮ ಕಲ್ಲು ಗಣಿಗಾರಿಕೆಯ ಆಡಿಟ್ ಮಾಡಲಾಗುವುದು. ಅಕ್ರಮ ಸಾಗಣೆ ವಿರುದ್ಧ ಕ್ರಮಕ್ಕಾಗಿ ಮುಖ್ಯಮಂತ್ರಿ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ ಎಂದೂ ಸಚಿವರು ಹೇಳಿದರು.

ಹಿಂದುಳಿದ ಆಯೋಗದ ಸಲಹೆಯಂತೆ ಹಾಗೂ ನ್ಯಾಯಾಲಯದ ಸಲಹೆಯಂತೆ ಹಿಂದುಳಿದ ವರ್ಗದ 3ಎ ಪಟ್ಟಿಯಲ್ಲಿರುವ ಕೊಡಗರು ಎಂಬುದರ ಬದಲಾಗಿ ಕೊಡವ/ಕೊಡವರು ಎಂದು ಬದಲಾವಣೆ ಮಾಡಲು ನಿರ್ಧಾರ ಕೈಗೊಳ್ಳಲಾಗಿದೆ ಎಂದು ಅವರು ಹೇಳಿದರು. ಸನ್ನಡತೆ ಆಧಾರದಲ್ಲಿ 67 ಕೈದಿಗಳ ಬಿಡುಗಡೆಗೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ. ಸ್ವಾತಂತ್ರ್ಯ ದಿನಾಚರಣೆಯಂದು ಕೈದಿಗಳನ್ನು ಬಿಡುಗಡೆ ಮಾಡಲಾಗುವುದು ಎಂದು ಸಚಿವರು ತಿಳಿಸಿದರು.

## ದಿಕ್ಕರಿಸಿದ ಶಾಲೆಗಳು

**(1ನೇ ಪುಟದಿಂದ)** ಮಂಡಳಿಯ ಆದೇಶ ಧಿಕ್ಕರಿಸಿದರೆ ನನ್ನ ಪ್ರಿನ್ಸಿಪಾಲ್ ಖುರ್ಚಿಯಲ್ಲಿ ಕುಳಿತುಕೊಳ್ಳಲು ಸಾಧ್ಯವಿಲ್ಲ. ನಮ್ಮದು ಎರಡು ದಂಡೆಯ ಮೇಲೆ ಹೆಜ್ಜೆ ಹಾಕಬೇಕಾದ ಪರಿಸ್ಥಿತಿ. ನಾವು ಯಾವ ರೀತಿ ನೌಕರಿ ಮಾಡಬೇಕು ಎನ್ನುವುದು ತಿಳಿಯುತ್ತಿಲ್ಲ ಎನ್ನುವ ಸಂಕಟ ಓರ್ವ ಪ್ರಿನ್ಸಿಪಾಲ್‌ರದ್ದು..

**ಐ ವಿಲ್ ಫೇಸ್ :** ನನಗೆ ಆಡಳಿತ ಮಂಡಳಿ ಹೇಳಿದೆ. ನಾನು ಸ್ಕೂಲ್ ಪ್ರಾರಂಭಿಸಿದ್ದೇನೆ. ಜಿಲ್ಲಾಧಿಕಾರಿಗಳ ಕ್ರಮ ಏನೇ ಇರಲಿ ಅದನ್ನು ಎದುರಿಸುತ್ತೇನೆ ಎಂದು ಇನ್ನೊಬ್ಬ ಪ್ರಿನ್ಸಿಪಾಲ್ ಉದ್ಧಟತನದಿಂದ ಮಾತನಾಡಿದರೆಂದು ಹೇಳಲಾಗಿದ್ದು, ಪ್ರಿನ್ಸಿಪಾಲ್ ವರ್ತನೆ ಆಡಳಿತ ಮಂಡಳಿಯ ಗಮನಕ್ಕೆ ಬರುತ್ತಲೇ, ಆಡಳಿತ ಮಂಡಳಿಯ ಪರವಾಗಿ ಕಾರ್ಯದರ್ಶಿ ಹಾಗೂ ನಿರ್ದೇಶಕರಿಬ್ಬರು ಆಗಮಿಸಿ, ಪ್ರಿನ್ಸಿಪಾಲ್ ಪರವಾಗಿ ಕ್ಷಮೆ ಯಾಚಿಸಿದ ಪ್ರಸಂಗ ನಡೆಯಿತೆಂದು ತಿಳಿದು ಬಂದಿದೆ.

ಇನ್ನು ಕೆಲ ಖಾಸಗಿ ಶಾಲೆಗಳು ಪಾಠ ಪ್ರಾರಂಭಿಸಿದ್ದವೆಂದು, ಮೇಲಿನ ಎರಡೂ ಶಾಲೆಗಳಿಗೆ ಅಧಿಕಾರಿಗಳು ತೆರಳಿ ನೋಟಿಸ್ ನೀಡಿದ್ದನ್ನು ಅರಿತು ಇನ್ನಿತರರು ಎಚ್ಚೆತ್ತು ಮಕ್ಕಳನ್ನು ಮನೆಗೆ ಕಳುಹಿಸಿದರೆಂದು ತಿಳಿದು ಬಂದಿದೆ.

## ರಾಜ್ಯಮಟ್ಟದ ಕರಾಟೆ : ಮಲೇಬೆನ್ನೂರಿಗೆ 14 ಪದಕ



ಮಲೇಬೆನ್ನೂರು, ಜು.27- ಇಲ್ಲಿನ ಪಿಡಬ್ಲ್ಯೂಡಿ ಕಾಲೋನಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ 4 ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲೆಯ 3 ಹಾಗೂ ಪುರಸಭೆಯ ಎದುರುಗಡೆ ಇರುವ ಜಿಬಿಎಂ ಶಾಲೆ ಮತ್ತು ಕುಂಬಳೂರಿನ ಬಸವ ಗುರುಕುಲ ಶಾಲೆಯ ತಲಾ ಒಬ್ಬ ವಿದ್ಯಾರ್ಥಿ ಹಾಗೂ ಬಸಾಪುರದ ಬಳಿ ಇರುವ ಆಂಜನೇಯ ಓಎಸ್‌ಎಸ್ ಶಾಲೆಯ 4 ವಿದ್ಯಾರ್ಥಿಗಳು ಸೇರಿ ಒಟ್ಟು 15 ವಿದ್ಯಾರ್ಥಿಗಳು ಮಂಡ್ಯ ಜಿಲ್ಲೆಯ ಮಳವಳ್ಳಿಯಲ್ಲಿ ಭಾನುವಾರ ನಡೆದ ರಾಜ್ಯಮಟ್ಟದ ಓಪನ್ ಕರಾಟೆ ಚಾಂಪಿಯನ್ ಶಿಪ್‌ನಲ್ಲಿ ಭಾಗವಹಿಸಿ, ಕಟಾಸ್‌ನಲ್ಲಿ 11 ಪದಕ ಹಾಗೂ ಕುಮುತೆಯಲ್ಲಿ 4 ಪದಕ ಪಡೆದು ತರಬೇತಿ ಪಡೆದ ದಾವಣಗೆರೆಯ ಹೊರಟ್ಟಿ ಕ್ರೀಡಾ ಅಕಾಡೆಮಿಗೆ ಕೀರ್ತಿ ತಂದಿದ್ದಾರೆ.

## ಡೆಂಗ್ಯೂ ವಿರೋಧಿ ಮಾಸಾಚರಣೆ



ಬೆಳ್ಳೂಡಿ

ಮಲೇಬೆನ್ನೂರು, ಜು.27- ಬೆಳ್ಳೂಡಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ಷಂಶೀಪುರ ಉಪಕೇಂದ್ರದ ವ್ಯಾಪ್ತಿಯ ಶ್ರೀ ಲಕ್ಷ್ಮೀ ವೆಂಕಟೇಶ್ವರ ಶಾಲೆಯಲ್ಲಿ ಬುಧವಾರ ಡೆಂಗ್ಯೂ ವಿರೋಧಿ ಮಾಸಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ. ಉಮ್ಮಣ್ಣ ಮಾತನಾಡಿ, ಡೆಂಗ್ಯೂ ಜ್ವರದ ಬಗ್ಗೆ ಜಾಗೃತಿ ಮೂಡಿಸಿದರು. ವೈದ್ಯಾಧಿಕಾರಿ ಡಾ. ಶಿಲ್ಪಾ ನಾಯಕ್ ಅವರು ಡೆಂಗ್ಯೂ ಜ್ವರ ಪತ್ತೆ ಮಾಡುವ ಬಗ್ಗೆ ಮತ್ತು ಚಿಕಿತ್ಸೆ ಬಗ್ಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಆರೋಗ್ಯ ಕೇಂದ್ರದ ಪಂಚಾಕ್ಷರಿ, ಭಾನುಪ್ರಿಯ ಮತ್ತು ಶಾಲಾ ಮುಖ್ಯೋಪಾಧ್ಯಾಯ ತಿಪ್ಪೇಸ್ವಾಮಿ ಹಾಗೂ ಶಾಲಾ ಶಿಕ್ಷಕರು ಹಾಜರಿದ್ದರು.

## 25ನೇ ವಿಶ್ವ ಸ್ಕೌಟ್ ಜಾಂಬೂರಿಯಲ್ಲಿ ದಾವಣಗೆರೆ ವಿದ್ಯಾರ್ಥಿನಿ

ದಾವಣಗೆರೆ, ಜು, 27 - ದಕ್ಷಿಣ ಕೊರಿಯ ದೇಶದಲ್ಲಿ ಆಗಸ್ಟ್ 1ರಿಂದ 12ರ ವರೆಗೆ ನಡೆಯಲಿರುವ 25ನೇ ವಿಶ್ವ ಸ್ಕೌಟ್ ಜಾಂಬೂರಿಯಲ್ಲಿ ದಾವಣಗೆರೆ ಜಿಲ್ಲೆಯಿಂದ ಶ್ರೀ ತರಳಬಾಳು ಜಗದ್ಗುರು ಶಾಲೆಯ ವಿದ್ಯಾರ್ಥಿನಿ ಗೈಡ್ ಶ್ರೀರಕ್ಷ ಕೆ. ಭಾಗವಹಿಸಲಿದ್ದಾರೆ.

ಜಾಂಬೂರಿಯಲ್ಲಿ ಅಂತರರಾಷ್ಟ್ರೀಯ ಸೇವಾ ತಂಡದ ಸದಸ್ಯರಾಗಿ ಹರಿಹರದ ಸೆಂಟ್ ಮೇರಿಸ್ ಕಾನ್ವೆಂಟ್ ಶಾಲೆಯ ಹಿರಿಯ ವಿದ್ಯಾರ್ಥಿ ವಿಜಯ್ ಕುಮಾರ್ ಬಿ.ಪಿ ಹಾಗೂ ಮೇಳದಲ್ಲಿ ವಿಶ್ವದಾದ್ಯಂತ 216 ದೇಶಗಳಿಂದ ಸ್ಕೌಟ್ ಗೈಡ್ ಮಕ್ಕಳು ವಿವಿಧ ಸಾಂಸ್ಕೃತಿಕ ಮತ್ತು ಕೌಶಲ್ಯಾಧಾರಿತ ಕಾರ್ಯಕ್ರಮಗಳಲ್ಲಿ ಭಾಗವಹಿಸುವರು.

## ಅನುಮತಿ ಅಧಿಕಾರಿಗಳ ಬದಲಾವಣೆ

**(1ನೇ ಪುಟದಿಂದ)** ವರ್ತನೆ ಹೇಳತೀರದು. ಅದನ್ನು ಬಿಡಿಸಲು ಹೋದರೆ, ಇಲ್ಲಿಯ ವಾತಾವರಣವೇ ಕೆಡುತ್ತದೆ ಎಂದಿದ್ದಾರೆ. ಮುಂದೆ ನಮಗೆ ಲೋಕಸಭೆ, ಜಿಲ್ಲಾ ಪಂಚಾಯ್ತಿ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆ ಇದೆ. ಅವುಗಳನ್ನು ಎದುರಿಸುವುದಾದರೂ ಹೇಗೆ? ನೀಡಿದ ಗ್ಯಾರಂಟಿಗಳನ್ನು ಮುಖ್ಯಮಂತ್ರಿ ಅನುಷ್ಠಾನಗೊಳಿಸಿರುವುದಕ್ಕೆ ಅಭಿನಂದಿಸುತ್ತೇವೆ. ಆದರೆ, ಕ್ಷೇತ್ರದ ಅಭಿವೃದ್ಧಿಯೂ ಆಗಬೇಕಲ್ಲವೇ, ತಕ್ಷಣವೇ ಅನುದಾನ ನೀಡಿ ಎಂದು ಮನವಿ ಮಾಡಿದ್ದಾರೆ. ಇದರ ನಡುವೆಯೇ ವಿಧಾನ ಪರಿಷತ್ತಿನ ಸದಸ್ಯ ಹಾಗೂ ಹಿರಿಯ ನಾಯಕ ಬಿ.ಕೆ.ಹರಿಪ್ರಸಾದ್ ಹೇಳಿಕೆ, ಬಿ.ಆರ್.ಪಾಟೀಲ್ ಬರೆದ ಪತ್ರದ ಬಗ್ಗೆಯೂ ಚರ್ಚೆ ನಡೆಯಿತು.

# ಮಲೇಬೆನ್ನೂರಿನಲ್ಲಿ ಎ.ಆರ್.ಉಜ್ಜಿನಪ್ಪಗೆ ಶ್ರದ್ಧಾಂಜಲಿ



ಮಲೇಬೆನ್ನೂರು, ಜು. 27- ಇಲ್ಲಿನ ಲಯನ್ಸ್ ಭವನದಲ್ಲಿ ಲಯನ್ಸ್ ಕ್ಲಬ್ ಮತ್ತು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ಎ.ಆರ್. ಉಜ್ಜಿನಪ್ಪ ಅವರಿಗೆ ಶ್ರದ್ಧಾಂಜಲಿ ಸಭೆಯಲ್ಲಿ ಉಜ್ಜಿನಪ್ಪ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಅವರ ಸೇವೆಯನ್ನು ಸ್ಮರಿಸಲಾಯಿತು.

ಲಯನ್ಸ್ ಮಾಜಿ ಗೌರ್ನರ್ ಡಾ. ಟಿ. ಬಸವರಾಜ್ ಮಾತನಾಡಿ, ಮಲೇಬೆನ್ನೂರಿನಲ್ಲಿ ದೀರ್ಘ ಕಾಲ ಕಂದಾಯ ನಿರೀಕ್ಷಕರಾಗಿ ಮತ್ತು ಉಪ ತಹಶೀಲ್ದಾರ್ ಆಗಿ ಉತ್ತಮ ಸೇವೆ ಸಲ್ಲಿಸಿದ್ದಾರೆ. ಅಷ್ಟೇ ಅಲ್ಲ, ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ಉಜ್ಜಿನಪ್ಪ ಅವರು ಸೇವೆ ಸಲ್ಲಿಸದ ಕ್ಷೇತ್ರ ಉಳಿದಿಲ್ಲ ಎಂದರು.

ಲಯನ್ಸ್ ಕ್ಲಬ್ ಮಾಜಿ ಅಧ್ಯಕ್ಷ ಓ. ಜಿ. ರುದ್ರಗೌಡ್ರು ಮಾತನಾಡಿ, ಮಲೇಬೆನ್ನೂರು ಲಯನ್ಸ್ ಕ್ಲಬ್ ಗೆ ಉತ್ತಮ ಮಾರ್ಗದರ್ಶಕರಾಗಿದ್ದ ಉಜ್ಜಿನಪ್ಪ ಅವರ ಅಗಲಿಕೆಯಿಂದ ವಿವಿಧ ಕ್ಷೇತ್ರಗಳು ಬಡವಾಗಿವೆ ಎಂದರು.

ಉಪ ತಹಶೀಲ್ದಾರ್ ಆರ್. ರವಿ, ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ರೇವಣಸಿದ್ದಪ್ಪ ಅಂಗಡಿ ಮಾತನಾಡಿ, ಉಜ್ಜನಪ್ಪ ಅವರು ನಮ್ಮಂತಹ ಅನೇಕರನ್ನು ವಿವಿಧ ಕ್ಷೇತ್ರಗಳಲ್ಲಿ ಬೆಳೆಸಿದ್ದಾರೆ ಎಂದು ಸ್ಮರಿಸಿದರು.

ಲಯನ್ಸ್ ಕ್ಲಬ್ ಅಧ್ಯಕ್ಷ ಚಿಟ್ಟಕ್ಕಿ ನಾಗರಾಜ್ ಅಧ್ಯಕ್ಷತೆ ವಹಿಸಿದ್ದರು. ಲಯನ್ಸ್ ಕ್ಲಬ್ ಕಾರ್ಯದರ್ಶಿ ಭರ್ಮಳ್ಳಿ ಮಂಜುನಾಥ್, ಖಜಾಂಚಿ ಸಿರಿಗೆರೆ ಸಿದ್ದಪ್ಪ, ಲಯನ್ಸ್ ಕ್ಲಬ್ ಮಾಜಿ ಅಧ್ಯಕ್ಷರಾದ ಡಾ ಹೆಚ್.ಜೆ. ಚಂದ್ರಕಾಂತ್, ಎನ್. ಶಿವನಗೌಡ, ಹೆಚ್.ಜಿ. ಚಂದ್ರಶೇಖರ್, ಸದಸ್ಯರಾದ ಹುಳ್ಳಳ್ಳಿ ಸಿದ್ದೇಶ್, ಉಡೇದರ್ ಸಿದ್ದೇಶ್, ಎಪಿಎಂಸಿ ಮಾಜಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಜಿಲ್ಲಾ ಕಸಾಪ ಸಂಘಟನಾ ಕಾರ್ಯದರ್ಶಿ ಜಿಗಳಿ ಪ್ರಕಾಶ್, ಕಸಾಪ ಮಲೇಬೆನ್ನೂರು ಹೋಬಳಿ ಅಧ್ಯಕ್ಷ ದಂಡಿ ತಿಪ್ಪೇಸ್ವಾಮಿ, ಕಾರ್ಯದರ್ಶಿ ಹಾಗೂ ಲಯನ್ಸ್ ಶಾಲಾ ಮುಖ್ಯ ಶಿಕ್ಷಕ ಚಂದ್ರಶೇಖರ್, ತಾ. ಕಸಾಪ ಸಂಘಟನಾ ಕಾರ್ಯದರ್ಶಿ ಹೆಚ್.ಎಂ. ಸದಾನಂದ್ ಮತ್ತಿತರರು ಭಾಗವಹಿಸಿದ್ದರು.


10ನೇ ವರ್ಷದ ಪುಣ್ಯಸ್ಮರಣೆ



ದಿ|| ಬಿ.ಜಿ. ಶಕುಂತಲಮ್ಮ

ಮರಣ : 28.07.2013

ನೀವು ನಮ್ಮನ್ನಗಲಿ ಇಂದಿಗೆ ಹತ್ತು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ

ಪತಿ : ಬಿ.ಜಿ. ಮರುಳಸಿದ್ದನಗೌಡ

ಬಿ.ಇ.ಓ.(ನಿ) ಹಾಗೂ ಮಾಜಿ ಅಧ್ಯಕ್ಷರು, ನಿ. ಸರ್ಕಾರಿ ನೌಕರರ ಸಂಘ (ರಿ.) ದಾವಣಗೆರೆ.

ಶ್ರೀಮತಿ ಮಂಜುಳಾ ದಯಾನಂದ ಬಿ. ಅರಳಿ

ಶಾಂತಲಾ ಬಿ. ಪ್ರಕಾಶ್, ಕೋಮಲ ಬಿ. ಪ್ರಸನ್ನ,

ಮೊಮ್ಮಕ್ಕಳಾದ : ಡಾ|| ದೀಕ್ಷಾ, ಭೂಮಿಕಾ, ಶಶಾಂಕ್, ರಿಷಿಕ, ಋತ್ವಿಕ, ನೈನಿಕಾ


### ಸಿ.ಎಂ. ವಿಶ್ವನಾಥಯ್ಯ ನಿಧನ



ದಾವಣಗೆರೆ ಸಿಟಿ ಎಂ.ಸಿ.ಸಿ. 'ಬಿ' ಬ್ಲಾಕ್, 6ನೇ ಮೇನ್, 2ನೇ ಕ್ರಾಸ್, ಡೋರ್ ನಂ. 2643 ವಾಸಿ ಸಿ.ಎಂ. ವಿಶ್ವನಾಥಯ್ಯ (95) ಇವರು ದಿನಾಂಕ 27.07.2023ರ ಗುರುವಾರ ಮಧ್ಯಾಹ್ನ 12.30ಕ್ಕೆ ನಿಧನರಾದರು. ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 28.07.2023ರ ಶುಕ್ರವಾರ ಬೆಳಿಗ್ಗೆ 10.30ಕ್ಕೆ ದಾವಣಗೆರೆ ತಾಲ್ಲೂಕು ಬೆಳವನೂರು ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಲಿದೆ.

### ಬಾರಿಕರ ಹನುಮಕ್ಕ ನಿಧನ



ದಾವಣಗೆರೆ ಸಿಟಿ ಹೊಸ ಕುಂದವಾಡದ ಬಾರಿಕರ ಹನುಮಕ್ಕ (80) ಅವರು ದಿನಾಂಕ 27.07.2023ರ ತಡರಾತ್ರಿ 1.30ಕ್ಕೆ ನಿಧನರಾದರು. ಸಹೋದರರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 28.07.2023ರ ಶುಕ್ರವಾರ ಮಧ್ಯಾಹ್ನ 3 ಗಂಟೆಗೆ ಹೊಸ ಕುಂದವಾಡದಲ್ಲಿ ನಡೆಯಲಿದೆ.




ನಿಧನ : 12.07.1986

37ನೇ ವರ್ಷದ ಪುಣ್ಯಸ್ಮರಣೆ

ದಿ|| ಜಿ. ರುದ್ರಪ್ಪ

ಬಾಂಬೆ ಆರ್. ಸನ್ಸ್ ಕಂಪನಿಯ ಮಾಲೀಕರು, ದಾವಣಗೆರೆ.

*ನೀವು ನಮ್ಮನ್ನಗಲಿ (12.07.2023ಕ್ಕೆ) 37 ವರ್ಷಗಳಾದವು. ನಾವುಗಳೆಲ್ಲರೂ ನಿಮ್ಮ ಆಶೀರ್ವಾದವನ್ನು ಹೊತ್ತು, ನೀವು ತೋರಿಸಿದ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಾ ಬಂದಿರುವ ಹಾಗೂ ಸದಾ ನಿಮ್ಮ ಸ್ಮರಣೆಯಲ್ಲಿರುವ...*

ಮಗಳು-ಅಳಿಯ : ಶೋಭಾ ವೆಂಕೋಬಪ್ಪ

ನಿ. ಮ್ಯಾನೇಜರ್, ಸಿಂಡಿಕೇಟ್ ಬ್ಯಾಂಕ್, ದಾವಣಗೆರೆ.

ರಶ್ಮಿ ತಿಪ್ಪೇಸ್ವಾಮಿ, ಪೂಜಾ ಅಭಿಷೇಕ್ ಮತ್ತು ಮಕ್ಕಳು, ಸೊಸೆ, ಮೊಮ್ಮಕ್ಕಳು ಹಾಗೂ ಮರಿಮೊಮ್ಮಕ್ಕಳು, ವಿದ್ಯಾನಗರ, ದಾವಣಗೆರೆ.


### ಕಾಶೀಪುರದ ಬಸವರಾಜಪ್ಪ ನಿಧನ



ದಾವಣಗೆರೆ ತಾಲ್ಲೂಕು ಕಾಶೀಪುರ ಗ್ರಾಮದ ವಾಸಿ ದಿ. ಆಲೂರು ಹಾಲಪ್ಪನವರ ಪುತ್ರ ಆಲೂರು ಬಸವರಾಜಪ್ಪ (87) ಅವರು ದಿನಾಂಕ 27.07.2023ರ ಗುರುವಾರ ಸಂಜೆ 4.30ಕ್ಕೆ ನಿಧನರಾದರು. ಮೂವರು ಪುತ್ರರು, ಆರು ಜನ ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 28.07.2023ರ ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ದಾವಣಗೆರೆ ತಾಲ್ಲೂಕು ಕಾಶೀಪುರದ ಮೃತರ ಜಮೀನಿನಲ್ಲಿ ನೆರವೇರಲಿದೆ.

KA/SK/CTA-275/2021-2023. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಚಿನ್ನದ ಪದಕ ಮುಡಿಗೇರಿಸಿಕೊಂಡ ಸುಶ್ರುತ್ ಸಾಧನೆ ಅಮೋಘವಾದುದು



ದಾವಣಗೆರೆ, ಜು. 27- ಅಂತರರಾಷ್ಟ್ರೀಯ ಸೈಕ್ಲಿಂಗ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನದೊಂದಿಗೆ ಚಿನ್ನದ ಪದಕ ಪಡೆದಿರುವ ಸಂವೇದ ವಿಶೇಷ ಶಾಲೆ ವಿದ್ಯಾರ್ಥಿ ಎಂ.ಎಸ್. ಸುಶ್ರುತ್ ಸಾಧನೆ ಅಮೋಘವಾದುದು ಎಂದು ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಜಿ.ಡಿ. ರಾಘವನ್ ಹೇಳಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ಸಂವೇದ ತರಬೇತಿ ಹಾಗೂ ಸಂಶೋಧನಾ ಕೇಂದ್ರದ ವತಿಯಿಂದ ನಿನ್ನೆ ಹಮ್ಮಿಕೊಂಡಿದ್ದ ಜರ್ಮನಿಯ ಬರ್ಲಿನ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಸ್ಪೆಷಲ್ ಓಲಂಪಿಕ್ ಸಮ್ಮರ್ ವರ್ಲ್ಡ್ ಗೇಮ್ಸ್‌ನಲ್ಲಿ ಪ್ರಥಮ ಸ್ಥಾನದೊಂದಿಗೆ ಚಿನ್ನದ ಪದಕ ಪಡೆದ ನಗರದ ಸಂವೇದ ಶಾಲೆಯ ವಿದ್ಯಾರ್ಥಿ ಎಂ.ಎಸ್. ಸುಶ್ರುತ್ ಅವರ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಕೋಚ್ ದಾದಾಪೀರ್ ಅವರ ಗರಡಿಯಲ್ಲಿ ಪಳಗಿದ ಸಂವೇದ ವಿಶೇಷ ಶಾಲೆಯ ಮಕ್ಕಳು ಇನ್ನೂ ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡುವ ಮೂಲಕ ಚಿನ್ನದ ಪದಕ ಪಡೆದು ದೇಶ, ರಾಜ್ಯ, ನಗರಕ್ಕೆ, ಶಾಲೆಗೆ ಕೀರ್ತಿ ತರುವಂತೆ ಶುಭ ಹಾರೈಸಿದರು. ಆರೋಗ್ಯ ಇಲಾಖೆಯಿಂದ ನೀಡಬಹುದಾದ ಸಹಾಯ, ಸಹಕಾರ, ಬೆಂಬಲ ನೀಡಲು ಸದಾ ಸಿದ್ದ ಎಂದ ಅವರು, ಸಂವೇದ ವಿಶೇಷ ಶಾಲೆಯ ಕಾರ್ಯ ಚಟುವಟಿಕೆಗಳು ಶ್ಲಾಘನೀಯ ಎಂದು ಹೇಳಿದರು.

ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಕಲ್ಯಾಣಾಧಿಕಾರಿ ಡಾ.ಕೆ. ಪ್ರಕಾಶ್ ಮಾತನಾಡಿ, ಬೌದ್ಧಿಕ ಅಸಮರ್ಥತೆಯುಳ್ಳ ಮಕ್ಕಳ ಬಗ್ಗೆ ಪೋಷಕರಲ್ಲಿ ಕೀಳರಿಮೆ ಬೇಡ. ಅವರನ್ನು ಸಮಾನ ದೃಷ್ಟಿಯಿಂದ ನೋಡುವ ಮೂಲಕ ವಿಶೇಷ ಕಾಳಜಿ ವಹಿಸಬೇಕು ಎಂದು ಕರೆ ನೀಡಿದರು.

ವಿಶೇಷ ಚೇತನ ಮಕ್ಕಳಲ್ಲಿ ಕೌಶಲ್ಯಗಳನ್ನು ಬೆಳೆಸುವ ಮೂಲಕ ಸಮರ್ಥರನ್ನಾಗಿ ಬೆಳೆಸುವ ನಿಟ್ಟಿನಲ್ಲಿ ಸಂವೇದ ವಿಶೇಷ ಶಾಲೆ ಕೆಲಸ ಮಾಡುತ್ತಿದ್ದು, ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವಂತಹ ಸಾಧನೆ ಮಾಡಿರುವುದು ಹೆಮ್ಮೆಯ ವಿಷಯ ಎಂದರು.

ವಿಶೇಷ ಚೇತನ ಮಕ್ಕಳ ಉದ್ಯಾನವನ ನಿರ್ಮಾಣ, ವಿಶೇಷ ಚೇತನರ ಪೋಷಕರ ಸಂಘ ರಚನೆ ಮಾಡುವ ಉದ್ದೇಶ ಹೊಂದಲಾಗಿದೆ. ಸಂವೇದ ಶಾಲೆಗೆ ಇಲಾಖೆಯಿಂದ ಸಿಗಬಹುದಾದ ಅನುದಾನ ಪಡೆಯುವಂತೆ ತಿಳಿಸಿದರು.

ಇದೇ ವೇಳೆ ಅಂತರರಾಷ್ಟ್ರೀಯ ಸೈಕ್ಲಿಂಗ್‌ನಲ್ಲಿ ಪ್ರಥಮ ಸ್ಥಾನದೊಂದಿಗೆ ಬಂಗಾರದ ಪದಕ ಪಡೆದು ಕೀರ್ತಿ ತಂದಿರುವ ಎಂ.ಎಸ್. ಸುಶ್ರುತ್ ಹಾಗೂ ಅವರ ತಂದೆ-ತಾಯಿಯನ್ನು ಸಂವೇದ ಶಾಲೆಯ ವತಿಯಿಂದ ಸನ್ಮಾನಿಸಲಾಯಿತು.

ಸರ್.ಎಂ.ವಿ. ಪಿಯು ಕಾಲೇಜಿನ ಕಾರ್ಯದರ್ಶಿ ಎಸ್.ಜಿ. ಶ್ರೀಧರ್, ಬಾಪೂಜಿ ಆಸ್ಪತ್ರೆ ಮನೋರೋಗ ತಜ್ಞರಾದ ಡಾ.ಎಂ. ಅನುಪಮ, ಸಿಆರ್‌ಸಿ ನಿರ್ದೇಶಕ ಮಾರುತಿ ಕೃಷ್ಣೇಗೌಡ, ಡಾ. ಕಿರಣ್, ಕೋಚ್ ದಾದಾಪೀರ್ ಮತ್ತಿತರರು ಉಪಸ್ಥಿತರಿದ್ದರು.

ಸಂವೇದ ಶಾಲಾ ಮಕ್ಕಳು ಪ್ರಾರ್ಥಿಸಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಂವೇದ ವಿಶೇಷ ಶಾಲಾ ಕಾರ್ಯದರ್ಶಿ ಡಾ. ಸುರೇಂದ್ರನಾಥ ಪಿ. ನಿಶಾನಿಮಠ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಮುಖ್ಯ ಶಿಕ್ಷಕ ಎಸ್. ನಾಗರಾಜ್ ಸನ್ಮಾನಿತರ ಪರಿಚಯಿಸಿದರು.




# ಸ್ಕೌಟ್ಸ್ - ಗೈಡ್ಸ್ ಜಿಲ್ಲಾ ಸಂಸ್ಥೆಯಿಂದ ಕಾರ್ಗಿಲ್ ದಿನಾಚರಣೆ

ದಾವಣಗೆರೆ, ಜು. 27 - ನಗರದ ಜಿಲ್ಲಾ ಸಂಸ್ಥೆ ವತಿಯಿಂದ ಕಾರ್ಗಿಲ್ ವಿಜಯ ದಿವಸವನ್ನು ಅಮರ್ ಜವಾನ್ ಮೆಮೋರಿಯಲ್ ಪಾರ್ಕ್‌ನಲ್ಲಿ ಸಡಗರ ಮತ್ತು ಹೆಮ್ಮೆಯಿಂದ ಆಚರಿಸಲಾಯಿತು.

ಮುಖ್ಯ ಹಾಗೂ ವಿಶೇಷ ಅತಿಥಿಗಳಾಗಿ ನಿವೃತ್ತ ಏರ್ ಫೋರ್ಸ್ ಅಧಿಕಾರಿಗಳೂ, ಭಾರತ್ ಸ್ಕೌಟ್ ಗೈಡ್ ಮತ್ತು ಆಜೀವ ಸದಸ್ಯರೂ ಆದ ಎಂ. ಎಸ್. ರಾಮಚಂದ್ರಪ್ಪ ಅವರು ಆಗಮಿಸಿ ಸ್ಕೌಟ್ಸ್ ಮತ್ತು ಗೈಡ್ ಮಕ್ಕಳಿಗೆ ಕಾರ್ಗಿಲ್ ವಿಜಯ ದಿವಸ್ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಿದರು.

ಮಾಜಿ ಯೋಧರು ಸುರೇಶ್ ಉಪಸ್ಥಿತರಿದ್ದರು. ಶ್ರೀಮತಿ ಅನಸೂಯ ನಂದಗೋಕುಲ ಶಾಲೆಯ ಮುಖ್ಯೋಪಾಧ್ಯಾಯರು ಶ್ರೀಮತಿ ಸುಖವಾನೀ ಜಿಲ್ಲಾ ಜಂಟಿ ಕಾರ್ಯದರ್ಶಿ, ಕೊಟ್ರಯ್ಯ ಸ್ಕೌಟ್ ಮಾಸ್ಟರ್, ಶ್ರೀಮತಿ ನಳಿನ ಲೇಡೀ ಸ್ಕೌಟ್ ಮಾಸ್ಟರ್ ಮತ್ತು ಯುವ ಸಮಿತಿ ಸದಸ್ಯರಾದ ಮುಸ್ತಾಫ, ನವೀನ್ ಮತ್ತು ದೀಪಕ್ ಉಪಸ್ಥಿತರಿದ್ದರು.

ಶ್ರೀ ಸಿದ್ದಗಂಗಾ ಶಾಲೆ, ನಂದಗೋಕುಲ ಶಾಲೆ ಮತ್ತು ಜೈನ್ ವಿದ್ಯಾಲಯ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರೋವರ್ ಮತ್ತು ರೇಂಜರ್ , ಸ್ಕೌಟ್ಸ್ ಮತ್ತು ಗೈಡ್ಸ್, ಕಬ್ ಮತ್ತು ಬುಲ್ ಬುಲ್ಸ್ , ವಿದ್ಯಾರ್ಥಿಗಳಿಂದ ಈ ಕಾರ್ಯಕ್ರಮದ ರಂಗು ಹೆಚ್ಚಾಯಿತು ಶ್ರೀಮತಿ ಅಶ್ವಿನಿ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಸಂಘಟಿಸಿದ್ದರು.

# ಮಣಿಪುರದಲ್ಲಿ ರಾಷ್ಟ್ರಪತಿ ಆಡಳಿತಕ್ಕೆ ಡಿಎಸ್‌ಎಸ್ ಆಗ್ರಹ

ಹರಿಹರ, ಜು. 27 - ಮಣಿಪುರದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ವಿಫಲವಾಗಿರುವ ಮುಖ್ಯಮಂತ್ರಿ ಬೀರೇನ್ ಸಿಂಗ್ ಸರ್ಕಾರವನ್ನು ವಜಾಗೊಳಿಸಿ, ರಾಷ್ಟ್ರಪತಿ ಆಡಳಿತ ಜಾರಿ ಮಾಡಲು ಆಗ್ರಹಿಸಿ ದಸಂಸ (ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ) ದಿಂದ ತಹಶೀಲ್ದಾರ್ ಪೃಥ್ವಿ ಸಾನಿಕಂ ರವರ ಮೂಲಕ ರಾಷ್ಟ್ರಪತಿಯವರಿಗೆ ಮನವಿ ಅರ್ಪಿಸಲಾಯಿತು.

ಈ ಸಂದರ್ಭದಲ್ಲಿ ದಸಂಸ ತಾಲ್ಲೂಕು ಸಂಚಾಲಕ ಪಿ.ಜೆ.ಮಹಾಂತೇಶ್, ಕಡ್ಲೆಗೊಂದಿ ಗ್ರಾಪಂ ಸದಸ್ಯ ತಿಮ್ಮಣ್ಣ, ಭಾನುವಳ್ಳಿ ಚೌಡಪ್ಪ ಸಿ., ಆನಂದ ಬೆಳ್ಳೂಡಿ, ಪ್ರವೀಣ್, ಲಿಂಗರಾಜ್, ಗುಳ್ಳಪ್ಪ, ನಿಂಗರಾಜ್, ಮಂಜುನಾಥ್, ಹನುಮಂತ, ಹರೀಶ್, ಯಲ್ಲಪ್ಪ ಕೆ.ಎಚ್., ಹನುಮಂತಪ್ಪ ಎಚ್., ಪಕ್ಕೀರಪ್ಪ, ಈರಣ್ಣ ಬಿ.ಎ., ಹನುಮಜ್ಜ, ಹನುಮಕ್ಕ, ನಾಗಮ್ಮ, ಪುಷ್ಪ, ಭಾಗ್ಯಮ್ಮ, ಸುಶೀಲಮ್ಮ, ಹಾಲಮ್ಮ, ನಿರ್ಮಲಮ್ಮ, ಗುಳ್ಳಪ್ಪ ಮತ್ತಿತರರು ಉಪಸ್ಥಿತರಿದ್ದರು.

# ಇಂಡಿಯಾ ಎನ್ನುತ್ತೀರಿ, ಭಾರತದ ಹಿತ ಕೇಳುವುದಿಲ್ಲ

**ಪ್ರತಿಪಕ್ಷಗಳಿಗೆ ವಿದೇಶಾಂಗ ಸಚಿವ ಜೈಶಂಕರ್**

ನವದೆಹಲಿ, ಜು. 27 - ರಾಜ್ಯಸಭೆಯಲ್ಲಿ ತಮ್ಮ ಭಾಷಣಕ್ಕೆ ಅಡ್ಡಿಪಡಿಸಿದ ಪ್ರತಿಪಕ್ಷಗಳನ್ನು ತರಾಟೆಗೆ ತೆಗೆದುಕೊಂಡಿರುವ ವಿದೇಶಾಂಗ ಸಚಿವ ಎಸ್. ಜೈಶಂಕರ್, ನಿಮ್ಮನ್ನು ನೀವು 'ಇಂಡಿಯಾ' ಒಕ್ಕೂಟ ಎಂದು ಹೇಳಿಕೊಳ್ಳುತ್ತೀರಿ. ಆದರೆ, ಭಾರತದ ರಾಷ್ಟ್ರ ಹಿತದ ಕುರಿತು ಆಲಿಸಲು ಸಿದ್ಧವಿಲ್ಲ ಎಂದಿದ್ದಾರೆ.

ಭಾರತದ ವಿದೇಶಾಂಗ ನೀತಿಯ ಯಶಸ್ಸು ಹಾಗೂ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಇತ್ತೀಚೆಗೆ ವಿದೇಶ ಪ್ರವಾಸ ಕೈಗೊಂಡ ಬಗ್ಗೆ ಜೈಶಂಕರ್ ಸ್ವಯಂ ಪ್ರೇರಿತವಾಗಿ ಸದನದಲ್ಲಿ ಹೇಳಿಕೆ ನೀಡುತ್ತಿದ್ದರು. ಈ ಸಂದರ್ಭದಲ್ಲಿ ಸದನದ ಕಲಾಪಕ್ಕೆ ಪ್ರತಿಪಕ್ಷಗಳ ಸದಸ್ಯರು ಅಡ್ಡಿಪಡಿಸುತ್ತಿದ್ದರು. ಸದಸ್ಯರ ವರ್ತನೆಗೆ ಆಕ್ಷೇಪಿಸಿದ ಜೈಶಂಕರ್, ಇದು ಕೇವಲ ಸರ್ಕಾರದ ಸಾಧನೆಯಲ್ಲ. ದೇಶದ ಸಾಧನೆ ಎಂದರು.

# ಸರ್ಕಾರಿ ಶಾಲೆಗಳ ಅಭಿವೃದ್ಧಿಯೇ ನಮ್ಮ ಗುರಿ

## ಮೆದಿಕೆರೆ ಸರ್ಕಾರಿ ಶಾಲಾ ಕೊಠಡಿ ಗುದ್ದಲಿ ಪೂಜೆ ಕಾರ್ಯಕ್ರಮದಲ್ಲಿ ಶಾಸಕ ಶಿವಗಂಗಾ



ಚನ್ನಗಿರಿ, ಜು.27- ಬಹುತೇಕ ನಾವೆಲ್ಲಾ ಸರ್ಕಾರಿ ಶಾಲೆಗಳಲ್ಲಿಯೇ ಓದಿರುವುದು. ಸರ್ಕಾರಿ ಶಾಲೆಗಳಲ್ಲಿ ಸಿಗುವ ಸಂಸ್ಕಾರ, ಆಚಾರ - ವಿಚಾರ ಇಂದು ನಮ್ಮನ್ನು ದೊಡ್ಡವರನ್ನಾಗಿ ಮಾಡಿದೆ ಎಂದು ಶಾಸಕ ಬಸವರಾಜು ವಿ ಶಿವಗಂಗಾ ಅಭಿಮಾನದಿಂದ ನುಡಿದರು.

ತಾಲ್ಲೂಕಿನ ಮೆದಿಕೆರೆ ಗ್ರಾಮದಲ್ಲಿ ಸರ್ಕಾರಿ ಶಾಲೆ ಕೊಠಡಿ ನಿರ್ಮಾಣದ ಗುದ್ದಲಿ ಪೂಜೆ ನೆರವೇರಿಸಿದ ಅವರು, ಸರ್ಕಾರಿ ಶಾಲೆಗಳನ್ನು ಮಾದರಿ ಶಾಲೆಗಳನ್ನಾಗಿ ಮಾಡುತ್ತೇವೆ. ಮಕ್ಕಳಿಗೆ ಉತ್ತಮ ಶಿಕ್ಷಣದ ಜೊತೆಗೆ ಮೂಲಭೂತ ಎಲ್ಲಾ ಸೌಕರ್ಯಗಳನ್ನು ಕಲ್ಪಿಸುತ್ತೇವೆ ಎಂದರು.

ತಾಲ್ಲೂಕಿನಲ್ಲಿ ಸರ್ಕಾರಿ ಶಾಲೆಯ ಹಳೆ ಕೊಠಡಿಗಳ ಬದಲು ಹೊಸ ಕೊಠಡಿ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳುತ್ತೇವೆ. ಸರ್ಕಾರಕ್ಕೆ ಈಗಾಗಲೇ ಮನವಿ ಮಾಡಿದ್ದು, ಹೆಚ್ಚು ಅನುದಾನ ತಂದು ಅಭಿವೃದ್ಧಿ ಕಾರ್ಯ ಮಾಡುತ್ತೇವೆ ಎಂದರು. ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡಲು ಆದ್ಯತೆ ನೀಡಲಾಗುತ್ತಿದೆ. ನಿಮ್ಮ ಗ್ರಾಮದಲ್ಲಿ ಯಾವುದೇ ಸಮಸ್ಯೆ ಇದ್ದರು ನೇರವಾಗಿ ನನ್ನ ಗಮಕ್ಕೆ ತಂದರೆ ಸಮಸ್ಯೆ ಬಗೆಹರಿಸುವೆ ಎಂದರು.

ಈ ಸಂದರ್ಭದಲ್ಲಿ ಬಿಇಓ, ಶಾಲಾ ಶಿಕ್ಷಕರು ಸೇರಿದಂತೆ ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

# ನಗರದಲ್ಲಿ ಇಂದು ಚಿತ್ರಕಲಾ ಸ್ಪರ್ಧೆ

ವಿಶ್ವ ಪರಿಸರ ಸಂರಕ್ಷಣಾ ದಿನದ ಅಂಗವಾಗಿ ವಿನೋಬ ನಗರದ ಶ್ರೀ ಜಗದ್ಗುರು ಮುರುಘರಾಜೇಂದ್ರ ಪ್ರೌಢಶಾಲೆಯಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ಚಿತ್ರಕಲಾ ಸ್ಪರ್ಧೆ ನಡೆಯಲಿದೆ.

ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಉಳುಪಿನ ಕಟ್ಟೆ, ಆನಗೋಡು ಹಾಗೂ ಶಾಲಾ ಶಿಕ್ಷಣ ಇಲಾಖೆ ಸಂಯುಕ್ತಾಶ್ರಯದಲ್ಲಿ ಜಿಲ್ಲೆಯ ಸರ್ಕಾರಿ ಅನುದಾನಿತ ಮತ್ತು ಅನುದಾನ ರಹಿತ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ 'ಪ್ರಕೃತಿ ರಕ್ಷಿಸಿ ಜೀವ ಸಂಕುಲ ಉಳಿಸಿ' ವಿಷಯದ ಕುರಿತು ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಾಗಿದೆ.

# ಕೆರೆಗೆ ಜೀವ ನೀಡುತ್ತಿರುವ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಕಾರ್ಯ ಶ್ಲಾಘನೀಯ



**ಶಾಸಕ ಕೆ.ಎಸ್. ಬಸವಂತಪ್ಪ ಮೆಚ್ಚುಗೆ**

ದಾವಣಗೆರೆ, ಜು. 27- ಕೆರೆಗಳಿಗೆ ಜೀವ ನೀಡುತ್ತಿರುವ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಕಾರ್ಯ ಶ್ಲಾಘನೀಯವಾಗಿದೆ ಎಂದು ಮಾಯಕೊಂಡ ಶಾಸಕ ಕೆ.ಎಸ್.ಬಸವಂತಪ್ಪ ಮೆಚ್ಚುಗೆ ವ್ಯಕ್ತಪಡಿಸಿದರು.

ಮಾಯಕೊಂಡ ಕ್ಷೇತ್ರದ ವ್ಯಾಪ್ತಿಯ ಚನ್ನಗಿರಿ ತಾಲ್ಲೂಕಿನ ಕತ್ತಲಗೆರೆ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ 'ನಮ್ಮ ಊರು, ನಮ್ಮ ಕೆರೆ' ಯೋಜನೆಯಡಿ ಪುನಶ್ಚೇತನಗೊಳಿಸಿದ 525ನೇ ಕೆರೆ ಹಸ್ತಾಂತರ ಮತ್ತು ಬಾಗಿನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ಕೆರೆಗಳು ರೈತರ ಜೀವನಾಡಿ. ಅವುಗಳ ಪುನಶ್ಚೇತನಕ್ಕೆ ಸರ್ಕಾರ ಪ್ರತಿವರ್ಷ ಲಕ್ಷಾಂತರ ರೂಪಾಯಿ ಮೀಸಲಿಟ್ಟಿರುತ್ತದೆ. ಆದರೆ, ಕೆಲಸ ಅಷ್ಟಕ್ಕಷ್ಟೇ. ಧರ್ಮಸ್ಥಳದ ಡಾ. ಡಿ.ವೀರೇಂದ್ರ ಹೆಗ್ಗಡೆಯವರು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೂಲಕ ರಾಜ್ಯದ ಕೆರೆಗಳ ಪುನಶ್ಚೇತನ ಮಾಡುತ್ತಿರುವ ಕಾರ್ಯ ಶ್ಲಾಘನೀಯ' ಎಂದರು.

ಕೆರೆಗಳ ಪುನಶ್ಚೇತನದಿಂದ ಮಳೆ ನೀರು ಸಂಗ್ರಹವಾಗಿ ಜಾನುವಾರು ಹಾಗೂ ಕೃಷಿ ಚಟುವಟಿಕೆಗಳಿಗೆ ಉಪಯೋಗವಾಗಲಿದೆ. ಕೆರೆಗಳ ಪುನಶ್ಚೇತನಕ್ಕೆ ನಾನು ಜಿಪಂ ಸದಸ್ಯನಾಗಿದ್ದ ಸಂದರ್ಭದಲ್ಲಿ ಹೆಚ್ಚಿನ ಗಮನ ಹರಿಸಿದ್ದೆ. ಮಾಯಕೊಂಡ ಕ್ಷೇತ್ರದ ವ್ಯಾಪ್ತಿಯಲ್ಲಿ ಇನ್ನು ಸಾಕಷ್ಟು ಕೆರೆಗಳು ಇವೆ. ಅವುಗಳ ಪುನಶ್ಚೇತನಕ್ಕೆ ಧರ್ಮಸ್ಥಳ ಸಂಸ್ಥೆ ಮುಂದಾಗಬೇಕು. ನಿಮಗೆ ಬೇಕಾದ ಸಹಕಾರ ನೀಡುತ್ತೇನೆ ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಯೋಜನಾಧಿಕಾರಿಗಳಿಗೆ ಮನವಿ ಮಾಡಿದರು.

'21ನೇ ಶತಮಾನದಲ್ಲಿ ನಾವು ಎದುರಿಸುತ್ತಿರುವ ನೀರಿನ ಸವಾಲುಗಳಿಗೆ ಪ್ರಕೃತಿ ಆಧಾರಿತ ಪರಿಹಾರಗಳನ್ನು ಅನ್ವೇಷಿಸುವುದಾಗಿದೆ. ಪ್ರಕೃತಿಯನ್ನು ಉಳಿಸಿ ನೀರನ್ನು ಸಂರಕ್ಷಿಸಬೇಕಾಗಿದೆ. ಏಕೆಂದರೆ ವಿಶ್ವದ ಸಕಲ ಜೀವರಾಶಿಗಳಿಗೆ ನೀರು ಜೀವನಾಧಾರ. ಜಲವೇ ಸಂಜೀವಿನಿ' ಎಂದು ಹೇಳಿದರು.

'ಭೂಮಿಯಲ್ಲಿ ಸಿಹಿ ನೀರಿನ ಅಂಶ ಬಹಳ ಕಡಿಮೆ ಇದೆ. ಜನಸಂಖ್ಯೆ ಹೆಚ್ಚಳ, ಜಾಗತಿಕ ತಾಪಮಾನ, ಪರಿಸರ ಮಾಲಿನ್ಯ, ಕೈಗಾರಿಕೀಕರಣ, ಅರಣ್ಯ ನಾಶ ಕಾರಣಗಳಿಂದ ಅಂತರ್ಜಲ ಮಟ್ಟ ದಿನೇ ದಿನೇ ಕುಸಿಯುತ್ತಿದೆ. ನೀರನ್ನು ಅನವಶ್ಯಕವಾಗಿ ಪೋಲು ಮಾಡದೆ ಸಂರಕ್ಷಿಸುವುದು, ಮುಂದಿನ ಪೀಳಿಗೆಗೆ ಉಳಿಸುವುದು ಪ್ರತಿಯೊಬ್ಬರ ಕರ್ತವ್ಯ' ಎಂದು ಸಲಹೆ ನೀಡಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ರವಿಕುಮಾರ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಹಿರಿಯ ಜಿಲ್ಲಾ ನಿರ್ದೇಶಕ ರವಿಚಂದ್ರನ್ ನಾಗನಾಳ, ವಿಜಯಕುಮಾರ್, ಜಿಪಂ ಮಾಜಿ ಸದಸ್ಯ ತೇಜಸ್ವಿ ಪಟೇಲ್, ಕಾಂಗ್ರೆಸ್ ಮುಖಂಡ ಡಿ.ತಿಪ್ಪಣ್ಣ, ಗಣೇಶ್, ಷಣ್ಮುಖಪ್ಪ ಸೇರಿದಂತೆ ಇನ್ನಿತರರಿದ್ದರು.

## ಗ್ರಾಮ ಒನ್‌ಗಳಿಗೆ ಭೇಟಿ

ಚನ್ನಗಿರಿ ತಾಲ್ಲೂಕಿನ ನವಿಲೇಹಾಳ್, ಕಾರಿಗನೂರು, ನಲ್ಕುದರೆ ಗ್ರಾಮ ಒನ್ ಕಚೇರಿಗಳಿಗೆ ಭೇಟಿ ನೀಡಿದ ಶಾಸಕ ಕೆ.ಎಸ್. ಬಸವಂತಪ್ಪ, ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಲ್ಲಿ ಒಂದಾದ ಗೃಹಲಕ್ಷ್ಮಿ ಯೋಜನೆಗೆ ಅರ್ಜಿ ಸಲ್ಲಿಸಲು ಪರದಾಡುತ್ತಿದ್ದ ಜನರ ಸಮಸ್ಯೆಗಳನ್ನು ಆಲಿಸಿದರು.

ಬಳಿಕ ಖುದ್ದು ಕಂಪ್ಯೂಟರ್ ನಲ್ಲಿ ಅರ್ಜಿ ಸಲ್ಲಿಸುವ ವಿಧಾನ ಪರಿಶೀಲಿಸಿ, ಜನರಿಗೆ ಅರ್ಜಿ ಸಲ್ಲಿಸಲು ಯಾವುದೇ ರೀತಿಯ ತೊಂದರೆ ಆಗದಂತೆ ಎಚ್ಚರಿಕೆ ವಹಿಸುವಂತೆ ಗ್ರಾಮ ಒನ್ ಅಧಿಕಾರಿಗಳಿಗೆ ಸೂಚನೆ ನೀಡಿದರು. ಇದೇ ಸಂದರ್ಭದಲ್ಲಿ ಅರ್ಜಿ ಸಲ್ಲಿಸಿದ ಜನರಿಗೆ ಸ್ವೀಕೃತಿ ಪತ್ರವನ್ನು ವಿತರಿಸಿದರು.

# ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ.,

**ಆಡಳಿತ ಕಛೇರಿ, ಹರ್ಡೇಕರ್ ಮಂಜಪ್ಪ ರಸ್ತೆ, ದಾವಣಗೆರೆ- 577 001**

ನಮೂನೆ-12
ನಿಯಮ 14 (3) ರ ಪ್ರಕಾರ

## ಚುನಾವಣಾ ನೋಟೀಸು

ಮಾನ್ಯ ಸಹಕಾರ ಸಂಘಗಳ ಜಂಟಿ ನಿಬಂಧಕರು, ಹಾಗೂ ಚುನಾವಣಾಧಿಕಾರಿಗಳು ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ಇವರ ಆದೇಶ ಸಂಖ್ಯೆ: ಸಚುಪ್ರಾ/ಬೆಂ/ಜಂ.ನಿ/ದಾ.ಜಿ/ಆ.ಮಂ.ಚು-ರಿ.ಆನೇ/01/2023-24 ದಿನಾಂಕ 19.04.2023ರ ಅನ್ವಯ ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ನಿ., ದಾವಣಗೆರೆ ಇದರ ಆಡಳಿತ ಮಂಡಲಿಯ ಈ ಕೆಳಕಾಣಿಸಿದ ಒಟ್ಟು 13 ಸ್ಥಾನಗಳಿಗೆ ದಿನಾಂಕ 17.08.2023ರಂದು ಗುರುವಾರ ಬೆಳಿಗ್ಗೆ 9 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಬಾಪೂಜಿ ಬ್ಯಾಂಕ್ ಸಮುದಾಯ ಭವನ, ಶ್ಯಾಮನೂರು ರಸ್ತೆ, ದಾವಣಗೆರೆ ಇಲ್ಲಿ ಚುನಾವಣೆಯನ್ನು ನಡೆಸಲಾಗುವುದೆಂದು ಚುನಾವಣಾ ನೋಟೀಸ್ ನೀಡಲಾಗಿದೆ.

**ಚುನಾಯಿಸತಕ್ಕ ಆಡಳಿತ ಮಂಡಲಿ ಒಟ್ಟು 13 ಸ್ಥಾನಗಳ ಕ್ಷೇತ್ರ ವಿಂಗಡಣೆ ಹಾಗೂ ಮೀಸಲಾತಿ ವಿವರ:**
**ಸಾಮಾನ್ಯ-07, ಪರಿಶಿಷ್ಟ ಜಾತಿ-01, ಪರಿಶಿಷ್ಟ ಪಂಗಡ-01, ಹಿಂದುಳಿದ ವರ್ಗ ಎ-01, ಹಿಂದುಳಿದ ವರ್ಗ ಬಿ-01 ಹಾಗೂ ಮಹಿಳಾ ಮೀಸಲು -02 ಸ್ಥಾನ**

## ಚುನಾವಣಾ ವೇಳಾಪಟ್ಟಿ

| ಕ್ರಮ ಸಂಖ್ಯೆ | ಚುನಾವಣಾ ಕಾರ್ಯಸೂಚಿ | ದಿನಾಂಕ, ವಾರ, ಸಮಯ | ನಿಯಮ | ವಿವರ ಮತ್ತು ಸ್ಥಳ |
|---|---|---|---|---|
| 1 | ಇಚ್ಛೆಯುಳ್ಳ ಅಭ್ಯರ್ಥಿಗಳಿಂದ ನಾಮಪತ್ರ ಸ್ವೀಕರಿಸಲು ಪ್ರಾರಂಭದ ದಿನಾಂಕ | ದಿನಾಂಕ 02.08.2023ನೇ ಬುಧವಾರ ಬೆಳಿಗ್ಗೆ 11 ರಿಂದ ಮಧ್ಯಾಹ್ನ 3 ಗಂಟೆಯವರೆಗೆ | | ಬ್ಯಾಂಕಿನ ಕೇಂದ್ರ ಕಛೇರಿಯಲ್ಲಿ ರಿಟರ್ನಿಂಗ್/ಸಹಾಯಕ ರಿಟರ್ನಿಂಗ್ ಅಧಿಕಾರಿಗೆ |
| 2 | ಇಚ್ಛೆಯುಳ್ಳ ಅಭ್ಯರ್ಥಿಗಳಿಂದ ನಾಮಪತ್ರ ಸ್ವೀಕರಿಸಲು ಕೊನೆಯ ದಿನಾಂಕ | ದಿನಾಂಕ:09-08-2023 ನೇ ಬುಧವಾರ ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 3-00ಘಂಟೆಯವರೆಗೆ | 14 (ಎ) | ಬ್ಯಾಂಕಿನ ಕೇಂದ್ರ ಕಛೇರಿಯಲ್ಲಿ ರಿಟರ್ನಿಂಗ್/ಸಹಾಯಕ ರಿಟರ್ನಿಂಗ್ ಅಧಿಕಾರಿಗೆ |
| 3 | ಚುನಾವಣಾಧಿಕಾರಿಗಳಿಂದ ನಾಮಪತ್ರಗಳ ಪರಿಶೀಲನೆ | ದಿನಾಂಕ:10-08-2023 ನೇ ಗುರುವಾರ ಬೆಳಿಗ್ಗೆ 11.00 ರಿಂದ | 14 (ಬಿ) | ಬ್ಯಾಂಕಿನ ಕೇಂದ್ರ ಕಛೇರಿಯಲ್ಲಿ ಸೂಚನಾ ಫಲಕದಲ್ಲಿ |
| 4 | ಚುನಾವಣಾಧಿಕಾರಿಗಳಿಂದ ಕ್ರಮ ಬದ್ಧವಾಗಿ ನಾಮನಿರ್ದೇಶನಗೊಂಡ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ | ದಿನಾಂಕ:10-08-2023 ನೇ ಗುರುವಾರ ನಾಮ ಪತ್ರಗಳ ಪರಿಶೀಲನೆ ನಂತರ | 14 ಬಿ (4) | ಬ್ಯಾಂಕಿನ ಕೇಂದ್ರ ಕಛೇರಿಯಲ್ಲಿ ಸೂಚನಾ ಫಲಕದಲ್ಲಿ |
| 5 | ಸ್ಪರ್ಧಿಸಿರುವ ಅಭ್ಯರ್ಥಿಗಳಿಂದ ನಾಮಪತ್ರವನ್ನು ವಾಪಸ್ಸು ಪಡೆಯಲು ಕೊನೆಯ ದಿನಾಂಕ | ದಿನಾಂಕ:11-08-2023 ನೇ ಶುಕ್ರವಾರ ಮಧ್ಯಾಹ್ನ 3-00 ಘಂಟೆಯೊಳಗೆ | 14 (ಸಿ) | ಬ್ಯಾಂಕಿನ ಕೇಂದ್ರ ಕಛೇರಿಯಲ್ಲಿ ರಿಟರ್ನಿಂಗ್/ಸಹಾಯಕ ರಿಟರ್ನಿಂಗ್ ಅಧಿಕಾರಿಗೆ |
| 6 | ಚುನಾವಣಾಧಿಕಾರಿಗಳಿಂದ ಕ್ರಮ ಬದ್ಧವಾಗಿ ಸ್ಪರ್ಧೆಯಲ್ಲಿ ಉಳಿದ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ | ದಿನಾಂಕ:11-08-2023 ನೇ ಶುಕ್ರವಾರ ಮಧ್ಯಾಹ್ನ 3-00 ಘಂಟೆಯ ನಂತರ | 14 (ಡಿ) | ಬ್ಯಾಂಕಿನ ಕೇಂದ್ರ ಕಛೇರಿಯಲ್ಲಿ ಸೂಚನಾ ಫಲಕದಲ್ಲಿ |
| 7 | ಚುನಾವಣಾಧಿಕಾರಿಗಳಿಂದ (ಅವಶ್ಯಕವಿದ್ದಲ್ಲಿ) ಅಭ್ಯರ್ಥಿಗಳಿಗೆ ಚುನಾವಣಾ ಚಿಹ್ನೆಗಳನ್ನು ಹಂಚಿಕೆ ಮಾಡುವುದು | ದಿನಾಂಕ:11-08-2023 ನೇ ಶುಕ್ರವಾರ ಸಂಜೆ 04.30 ಘಂಟೆಗೆ | 14 (ಇ) | ಬ್ಯಾಂಕಿನ ಕೇಂದ್ರ ಕಛೇರಿಯಲ್ಲಿ ಸೂಚನಾ ಫಲಕದಲ್ಲಿ |
| 8 | ಮತದಾನದ ದಿನಾಂಕ ಮತ್ತು ಸಮಯ | ದಿನಾಂಕ:17-08-2023ನೇ ಗುರುವಾರ ಬೆಳಗ್ಗೆ 09-00ರಿಂದ ಸಂಜೆ 4-00 ಘಂಟೆಯವರೆಗೆ | | ಬಾಪೂಜಿ ಬ್ಯಾಂಕ್ ಸಮುದಾಯ ಭವನ, ಶ್ಯಾಮನೂರು ರಸ್ತೆ, ದಾವಣಗೆರೆ |
| 9 | ಮತಗಳ ಎಣಿಕೆ ದಿನಾಂಕ ಮತ್ತು ಸಮಯ | ದಿನಾಂಕ:17-08-2023 ನೇ ಗುರುವಾರ ಮತದಾನ ಮುಗಿದ ನಂತರ | | ಬಾಪೂಜಿ ಬ್ಯಾಂಕ್ ಸಮುದಾಯ ಭವನ, ಶ್ಯಾಮನೂರು ರಸ್ತೆ, ದಾವಣಗೆರೆ |
| 10 | ಚುನಾವಣಾಧಿಕಾರಿಗಳಿಂದ ಚುನಾವಣೆ ಫಲಿತಾಂಶ ಘೋಷಣೆ | ದಿನಾಂಕ:17-08-2023 ನೇ ಗುರುವಾರ ಮತಎಣಿಕೆ ಮುಗಿದ ನಂತರ | | ಬ್ಯಾಂಕಿನ ಕೇಂದ್ರ ಕಛೇರಿಯಲ್ಲಿ ಸೂಚನಾ ಫಲಕದಲ್ಲಿ |

**ವಿಶೇಷ ಸೂಚನೆಗಳು:**

1) ಚುನಾವಣೆಯು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1059, ನಿಯಮಗಳು 1960 ಹಾಗೂ ತಿದ್ದುಪಡಿ ಅಧಿನಿಯಮ 2014 ರ ಸಕಾರ ನಡೆಯುತ್ತದೆ. 2) ಯಾವೊಬ್ಬ ಸದಸ್ಯನು ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಿಗೆ ಮತ್ತು ಸ್ಥಾನಗಳಿಗೆ ಸ್ಪರ್ಧಿಸಲು ಅವಕಾಶವಿರುವುದಿಲ್ಲ. ನಾಮಪತ್ರಕ್ಕೆ ಮತ್ತೊಬ್ಬ ಮತದಾನದ ಹಕ್ಕುವುಳ್ಳ ಸದಸ್ಯನು ಸೂಚಿಸಿ ಸಹಿ ಮಾಡತಕ್ಕದ್ದು ಹಾಗೂ ಯಾವೊಬ್ಬ ಸದಸ್ಯನು ಅದೇ ಕ್ಷೇತ್ರದ ಒಬ್ಬರಿಗಿಂತ ಹೆಚ್ಚು ಅಭ್ಯರ್ಥಿಯ ನಾಮಪತ್ರಕ್ಕೆ ಸೂಚನೆ ಮಾಡತಕ್ಕದ್ದಲ್ಲ. ಅಭ್ಯರ್ಥಿಯು ಸ್ವತಃ ನಾಮಪತ್ರ ಸಲ್ಲಿಸತಕ್ಕದ್ದು. 3) ಆಡಳಿತ ಮಂಡಲಿಗೆ ಸ್ಪರ್ಧಿಸಬೇಕಾದಲ್ಲಿ ಸಹಕಾರಿ ಕಾಯ್ದೆ ನಿಯಮ ಮತ್ತು ಉಪವಿಧಿ (ಬೈಲಾ) ಪ್ರಕಾರ: ಅಗತ್ಯವಾಗಿ ಇರಬೇಕಾದ ಅರ್ಹತೆಗಳನ್ನು ಹೊಂದಿರತಕ್ಕದ್ದು. 4) ಆಡಳಿತ ಮಂಡಲಿಗೆ ಸ್ಪರ್ಧಿಸಬೇಕಾದಲ್ಲಿ ಸಹಕಾರಿ ಕಾಯ್ದೆ ನಿಯಮ ಮತ್ತು ಬೈಲಾ ಪ್ರಕಾರ ಯಾವುದೇ ಅನರ್ಹತೆಗಳನ್ನು ಹೊಂದಿರತಕ್ಕದ್ದಲ್ಲ. 5) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮೀಸಲು ಸ್ಥಾನಗಳಿಗೆ ಸ್ಪರ್ಧಿಸುವ ಅಭ್ಯರ್ಥಿಯು ಸಕ್ಷಮ ಪ್ರಾಧಿಕಾರದಿಂದ ಪಡೆದ ಜಾತಿ ಪ್ರಮಾಣ ಪತ್ರವನ್ನು ನಾಮಪತ್ರದೊಂದಿಗೆ ಲಗತ್ತಿಸತಕ್ಕದ್ದು. 6) ಹಿಂದುಳಿದ ವರ್ಗ "ಎ" ಹಾಗೂ ಹಿಂದುಳಿದ ವರ್ಗ "ಬಿ" ಮೀಸಲು ಸ್ಥಾನಕ್ಕೆ ಸಂಬಂಧಪಟ್ಟ ಜಾತಿ ಪ್ರಮಾಣ ಪತ್ರವು ಸಕ್ಷಮ ಪ್ರಾಧೀಕಾರದಿಂದ ಸಹಕಾರ ಬ್ಯಾಂಕಿನ ಚುನಾವಣೆಗೆಂದು ಪಡೆದ ಪ್ರಮಾಣ ಪತ್ರವನ್ನು ಮಾತ್ರ ಅಂಗೀಕರಿಸಲಾಗುವುದು. 7) ನಾಮಪತ್ರ ಸಲ್ಲಿಸುವಾಗ, ಚುನಾವಣಾ ಠೇವಣಿ ಬಾಪ್ತು ರೂ.2000-00 ಗಳನ್ನು ನಗದಾಗಿ ಅಥವಾ ಪೇ ಆರ್ಡರ್ ಅಥವಾ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಸಲ್ಲಿಸತಕ್ಕದ್ದು. ಪರಂತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗದ ಮೀಸಲು ಹಾಗೂ ಮಹಿಳಾ ಮೀಸಲು ಅಭ್ಯರ್ಥಿಗಳಿಗೆ ಮೇಲೆ ನಮೂದಿಸಿದ ಚುನಾವಣಾ ಠೇವಣಿಯಲ್ಲಿ ಶೇ.50 ರಷ್ಟು ವಿನಾಯಿತಿ ಇರುತ್ತದೆ. 8) ನಿಯಮ 14ಎಇ ಅನ್ವಯ ನಿಗದಿಪಡಿಸಿದ ಮತಗಳನ್ನು ಪಡೆಯದ ಅಭ್ಯರ್ಥಿಯ ಚುನಾವಣಾ ಠೇವಣಿಯನ್ನು ಬ್ಯಾಂಕಿಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. 9) ನಾಮಪತ್ರಗಳ ಪರಿಶೀಲನೆ ವೇಳೆ ಅಭ್ಯರ್ಥಿಗಳು ಅಥವಾ ಸೂಚಕರು ಹಾಜರಿರಬಹುದು 10) ನಾಮಪತ್ರಗಳ ನಮೂನೆಗಳನ್ನು ಬ್ಯಾಂಕಿನ ಕಚೇರಿ ವೇಳೆಯಲ್ಲಿ ರೂ.100/-ಗಳನ್ನು ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಿಗೆ ಪಾವತಿಸಿ ಪಡೆಯಬಹುದು. 11) ನಾಮಪತ್ರ ವಾಪಸ್ಸಾತಿ ಅರ್ಜಿಯನ್ನು ನಿಗದಿತ ನಮೂನೆಯಲ್ಲಿ ಸ್ವತಃ ಅಭ್ಯರ್ಥಿಯು ಹಾಜರಾಗಿ ರಿಟರ್ನಿಂಗ್ ಅಧಿಕಾರಿಗೆ ಸಲ್ಲಿಸತಕ್ಕದ್ದು. ಅರ್ಜಿ ನಮೂನೆಯನ್ನು ಬ್ಯಾಂಕಿನ ಕಚೇರಿ ವೇಳೆಯಲ್ಲಿ ಪಡೆಯಬಹುದು. 12) ರಾಜ್ಯ ಚುನಾವಣಾ ಆಯೋಗದಿಂದ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳಿಗೆ ನೀಡಲಾದ ಚಿಹ್ನೆಗಳನ್ನು ಹೊರತು ಪಡಿಸಿ ಉಳಿದ ಮುಕ್ತ ಚಿಹ್ನೆಗಳನ್ನು ಅಭ್ಯರ್ಥಿಯು ಆಯ್ಕೆ ಮಾಡಿಕೊಳ್ಳತಕ್ಕದ್ದು. ಬ್ಯಾಂಕಿನ ಸೂಚನಾ ಫಲಕದಲ್ಲಿ ಮುಕ್ತ ಚಿಹ್ನೆಗಳನ್ನು ಪ್ರಕಟಿಸಲಾಗಿದೆ. ಚಿಹ್ನೆಗಳನ್ನು ನೀಡುವ ಅಂತಿಮ ಅಧಿಕಾರ ಚುನಾವಣಾಧಿಕಾರಿಗೆ ಇರುತ್ತದೆ. 13) ಸದಸ್ಯರು ಮಾಡುವ ಪೂರ್ವದಲ್ಲಿ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಿಂದ ನೀಡಲ್ಪಟ್ಟ ಭಾವಚಿತ್ರಗಳನ್ನೊಳಗೊಂಡ ಗುರುತಿನ ಚೀಟಿಯನ್ನು ಹಾಜರುಪಡಿಸುವುದು ಕಡ್ಡಾಯವಾಗಿರುತ್ತದೆ. 14) ಸರ್ಕಾರಿ ಸಾರ್ವತ್ರಿಕ ರಜಾ ದಿನಗಳಿದ್ದರೂ ಬ್ಯಾಂಕಿನ ಕಚೇರಿ ತೆರೆದಿರುತ್ತದೆ. 15) ಅರ್ಹ ಅಂತಿಮ ಮತದಾರರ ಪಟ್ಟಿಯಲ್ಲಿರುವ ಸದಸ್ಯರಿಗೆ ಮಾತ್ರ ಚುನಾವಣೆಯಲ್ಲಿ ಸ್ಪರ್ಧಿಸುವ/ಮತದಾನ ಮಾಡುವ ಹಕ್ಕು ಇರುತ್ತದೆ. 16) ಚುನಾವಣೆಯಲ್ಲಿ ಉದ್ಭವಿಸುವ ಯಾವುದೇ ಸಮಸ್ಯೆಗಳಿಗೆ ರಿಟರ್ನಿಂಗ್ ಅಧಿಕಾರಿಯ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ.

ಸಹಿ/- **(ರಮೇಶ್ ಎಸ್)**, ರಿಟರ್ನಿಂಗ್ ಅಧಿಕಾರಿ
ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ನಿ.,
ಹಾಗೂ ಸಹಕಾರ ಅಭಿವೃದ್ಧಿ ಅಧಿಕಾರಿ, ಸ.ಸಂ.ಉ.ನಿ. ಕಚೇರಿ, ದಾವಣಗೆರೆ ಜಿಲ್ಲೆ

ದಿನಾಂಕ:27/07/2023
ಸ್ಥಳ: ದಾವಣಗೆರೆ

# ಮಳೆಗಾಲದಲ್ಲಿ ಆರೋಗ್ಯದ ಆರೈಕೆ : ಸವಾಲು, ಮುನ್ನೆಚ್ಚರಿಕೆ, ಪರಿಹಾರ

ಮಳೆಯೆಂದರೆ ಶುಭ ಸೂಚನೆ. ಬಾಡಿದ ಗಿಡಮರಗಳಿಗೆ ಚಿಗುರು ಮೂಡಿಸುವ ಪವಿತ್ರ ಹನಿಯೇ ಈ ಸೋನೆ. ಮಳೆ ಬಾರದಿದ್ದರೆ ಜೀವರಾಶಿಗೆ ಎಷ್ಟು ಸಂಕಷ್ಟವೋ ಅದೇ ರೀತಿ ಮಳೆಯಾಗುವಾಗ ಎಚ್ಚರದಿಂದ ಇರದಿದ್ದರೂ ಸಂಕಷ್ಟ ತಪ್ಪಿದ್ದಲ್ಲ.

ಬಿರುಬಿಸಿಲಿನ ಬೇಸಿಗೆಯ ಝಳದಿಂದ ಮುಕ್ತಿ ನೀಡಿ, ನಮ್ಮೆಲ್ಲರಲ್ಲೂ ಸಮಾಧಾನ ತಂದಿರುವ ಮಳೆ, ತನ್ನ ಜತೆಗೆ ಕೆಲವು ಆರೋಗ್ಯ ಸವಾಲುಗಳನ್ನೂ ಹೊತ್ತು ತಂದಿದೆ. ಮಳೆಗಾಲದ ಸಾಮಾನ್ಯ ರೋಗಗಳು ಯಾವುವು, ಅದಕ್ಕೆ ನಮ್ಮ ಮುನ್ನೆಚ್ಚರಿಕೆ ಹೇಗಿರಬೇಕು, ಪರಿಹಾರಗಳೇನು ಎಂಬೆಲ್ಲ ಮಾಹಿತಿಯುಕ್ತ ಅಕ್ಷರ ಸೋನೆಯಿದು.

● **ವೆಕ್ಟರ್ ಜನ್ಯ ರೋಗಗಳು** (Vector borne diseases) : ಸೊಳ್ಳೆ ಹಾಗು ಚಿಗಟ (fleas)ಗಳಿಂದ ಹರಡಲ್ಪಡುವ ರೋಗಗಳಿಗೆ ವೆಕ್ಟರ್ ಜನ್ಯ ರೋಗಗಳು ಎನ್ನುತ್ತೇವೆ. ಸಾಮಾನ್ಯವಾಗಿ ಸೊಳ್ಳೆಗಳಿಂದ ಮಳೆಗಾಲದಲ್ಲಿ ಡೆಂಘೀ, ಮಲೇರಿಯ, ಚಿಕನ್ ಗುನ್ಯಾದಂತ ರೋಗಗಳು ಹರಡುವುದನ್ನು ತಿಳಿದಿದ್ದೇವೆ.

**ಮುನ್ನೆಚ್ಚರಿಕೆ :** ಈ ರೋಗಗಳ ತಡೆಗೆ ಸೊಳ್ಳೆ ನಿವಾರಕಗಳು, ಸೊಳ್ಳೆ ಪರದೆ, ದೇಹವನ್ನು ಪೂರ್ಣವಾಗಿ ಮುಚ್ಚುವ ಬಟ್ಟೆಗಳನ್ನು ಧರಿಸುವುದು, ವಾಸಿಸುವ ಮನೆ, ತಾಣದ ಸುತ್ತ ಮುತ್ತ ನಿಶ್ಚಲವಾಗಿ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ಇದರಿಂದಾಗಿ ಸೊಳ್ಳೆಗಳ ಪ್ರಸರಣ ತಗ್ಗಿ, ಸಾಂಕ್ರಾಮಿಕ ರೋಗಗಳನ್ನು ತಡೆಯಲು ಅನುಕೂಲಕರ.

● **ಜಲ ಮೂಲದ ಸೋಂಕು :** ಮಳೆಗಾಲದಲ್ಲಿ ನೀರಿನ ಮೂಲಗಳು ಶೀಘ್ರವೇ ಕಲುಷಿತ ಆಗುತ್ತವೆ. ಅದೇ ನೀರನ್ನು ನಾವು ಕುಡಿಯುವುದರಿಂದ ಅಪಾಯಕಾರಿ ರೋಗಗಳಾದ ಟೈಫಾಯಿಡ್, ಕಾಲರಾ ಮತ್ತು ಹೆಪಟೈಟಿಸ್ ರೋಗಗಳಿಗೆ ದಾರಿ ಮಾಡಿಕೊಟ್ಟಂತಾಗುತ್ತದೆ.

**ಮುನ್ನೆಚ್ಚರಿಕೆ :** ಶುದ್ಧೀಕರಿಸಿದ ನೀರು ಸೇವಿಸಿ. ಕುದಿಸಿ ಆರಿಸಿದ ನೀರು ಸೇವಿಸಿ. ರಸ್ತೆ ಬದಿಯ ತಿನಿಸು ಸೇವಿಸದೇ ಇರುವುದೇ ಉತ್ತಮ. ಆಹಾರ ಸೇವಿಸುವ ಮೊದಲು, ಶೌಚಾಲಯ ಬಳಕೆ ನಂತರ ಸಾಬೂನಿನಿಂದ ಸ್ವಚ್ಛವಾಗಿ ಕೈ ತೊಳೆಯುವಂತಹ ಸರಳ ಅಭ್ಯಾಸಗಳಿಂದ ಹಲವು ರೋಗಗಳನ್ನು ದೂರವಿಡಬಹುದು.

● **ಉಸಿರಾಟದ ಸೋಂಕುಗಳು :** ಮಳೆಗಾಲದಲ್ಲಿ ಆರ್ದ್ರತೆ (Humidity)ಹೆಚ್ಚಿರುವ ಕಾರಣ ಬ್ಯಾಕ್ಟೀರಿಯಗಳ ಸಂತಾನೋತ್ಪತ್ತಿ ಸುಲಭ. ಇದರಿಂದ ಉಸಿರಾಟದ ಸೋಂಕಿನ ರೋಗಗಳು ಹೆಚ್ಚಲಿವೆ.

**ಮುನ್ನೆಚ್ಚರಿಕೆ :** ನಾವು ವಾಸಿಸುವ ಸ್ಥಳಗಳನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ಚೆನ್ನಾಗಿ ಗಾಳಿ ಬೆಳಕು ಇರುವಂತೆ ನಮ್ಮ ವಾಸಸ್ಥಾನವನ್ನು ಹೊಂದಿಸಿಕೊಳ್ಳಬೇಕು. ಅತಿ ತೇವಾಂಶವನ್ನು ಆದಷ್ಟು ಕಡಿಮೆ








ಇರುವಂತೆ ನೋಡಿಕೊಳ್ಳುವುದು ಉಸಿರಾಟದ ಸೋಂಕಿನ ರೋಗಗಳನ್ನು ದೂರವಿಡಲು ಉತ್ತಮ ಉಪಾಯ.

● **ಚರ್ಮ ರೋಗಗಳು :** ಶಿಲೀಂದ್ರ (Fungus)ಗಳಿಂದ ಹುಳುಕಡ್ಡಿ (Ring worm), ಪಾದದ ಬೆರಳು ಸಂದಿಗಳಲ್ಲಿ ಕಾಣಿಸುವ ಗಜಕರ್ಣ (Tenia Pedis) ರೋಗಗಳು ಮಳೆಗಾಲದ ಆರ್ದತೆಯಿಂದ ಹೆಚ್ಚಲಿವೆ. ಇದನ್ನು ತಡೆಯಲು ಸುಲಭ ಉಪಾಯವೆಂದರೆ ಚರ್ಮ ಹಸಿಯಾದಾಗ ತಕ್ಷಣ ಒಣಗಿಸಿಕೊಳ್ಳುವುದು ಮತ್ತು ಚರ್ಮವನ್ನು ಆದಷ್ಟು ಒಣಗಿರುವಂತೆ ಇರಿಸಿಕೊಳ್ಳುವುದಾಗಿದೆ.

● **ಉದರ ಮತ್ತು ಕರುಳಿನ ಸೋಂಕುಗಳು :** ಮಾನ್ಸೂನ್‌ನಲ್ಲಿ ಕಲುಷಿತ ಆಹಾರ ಸೇವನೆಯಿಂದ ಅತಿಸಾರ ಭೇದಿ, ಆಮಶಂಕೆ ಭೇದಿ ಹೆಚ್ಚಾಗಿ ಕಂಡು ಬರುತ್ತವೆ. ಇವುಗಳನ್ನು ತಡೆಯಲು ಪ್ರಧಾನ ಕ್ರಮವೇ ವೈಯಕ್ತಿಕ ಸ್ವಚ್ಛತೆ ಮತ್ತು ತಾಜಾ ಆಹಾರ ಸೇವನೆ. ಬೀದಿ ಬದಿಯ ಆಹಾರದಿಂದ ದೂರವಿದ್ದು, ತರಕಾರಿ ಮತ್ತು ಹಣ್ಣುಗಳನ್ನು ಉಪ್ಪು ನೀರಿನಿಂದ ಸ್ವಚ್ಛವಾಗಿ ತೊಳೆದ ನಂತರವೇ ಸೇವಿಸುವುದರಿಂದ ಉದರ ಮತ್ತು ಕರುಳಿನ ಸೋಂಕು ನಿವಾರಣೆ ಮಾಡಬಹುದು.

**ಕಣ್ಣಿಗಿರಲಿ ಆರೈಕೆ :** ನಮ್ಮಲ್ಲಿ ಬಹುತೇಕರು ಗಮನಿಸಿದಂತೆ ದಾವಣಗೆರೆಯಲ್ಲಿ ಇತ್ತೀಚೆಗೆ ಕಣ್ಣಿನ ಬೇನೆ 'ಮದ್ರಾಸ್ ಕಣ್ಣು' (Conjuntivitis) ವೇಗವಾಗಿ ಹರಡುತ್ತಿದೆ. ಅದರಲ್ಲೂ ಶಾಲಾ - ಕಾಲೇಜಿನ ವಿದ್ಯಾರ್ಥಿಗಳಲ್ಲಿ ಇದು ಹೆಚ್ಚು ಕಾಣಿಸಿಕೊಂಡಿದೆ. ಮದ್ರಾಸ್ ಐ ಎಂಬುದು ಬ್ಯಾಕ್ಟೀರಿಯ/ವೈರಸ್‌ನಿಂದ ಉಂಟಾಗುವ ಕಣ್ಣಿನ ಸೋಂಕು.

**ರೋಗ ಲಕ್ಷಣಗಳು?**

- ಕಣ್ಣಿನಲ್ಲಿ ಪಿಸುರು ಬರುವುದು
- ಕಣ್ಣು ಕೆಂಪಾಗಿ ಊದಿಕೊಳ್ಳುವುದು
- ಕಣ್ಣಿನ ಕಡಿತ
- ಕಣ್ಣು ಮಂಜಾಗುವುದು

**ಪರಿಹಾರ ಮಾರ್ಗ?**

- ದಿನಕ್ಕೆ 8 ರಿಂದ 10 ಬಾರಿ ಸಾಬೂನಿನಿಂದ ಕೈ ತೊಳೆಯಿರಿ.
- ಪದೇ ಪದೇ ಕಣ್ಣನ್ನು ಮುಟ್ಟಿಕೊಳ್ಳದಿರಿ.
- ಸ್ಯಾನಿಟೈಸರ್ ಬಳಕೆ ಮಾಡಿ,
- ಶುದ್ಧ ನೀರು ಕುಡಿಯುವುದು
- ಕರವಸ್ತ್ರಗಳ ಬದಲಿಗೆ ಟಿಶ್ಯೂ ಪೇಪರ್ ಬಳಸಿ.
- ಪ್ರತ್ಯೇಕ/ಸ್ವಂತದ ಟವೆಲ್ ಬಳಸಿ.

**ಮಳೆಗಾಲದಲ್ಲಿ ಆರೈಕೆ**

- ಸ್ವಚ್ಛವಾದ ನೀರು, ಸಮತೋಲನ ಆಹಾರ ಸೇವನೆ.
- ರೋಗ ನಿರೋಧಕ ಶಕ್ತಿ ವೃದ್ಧಿಗೆ ವಿಟಮಿನ್, ಮಿನರಲ್ ಪೂರಕ ಆಹಾರ.
- ಸರಿಯಾದ ಸಮಯಕ್ಕೆ ಸಾಕಷ್ಟು ನಿದ್ದೆ.
- ಮಳೆಯಲ್ಲಿ ವ್ಯಾಯಾಮ, ನಡಿಗೆ ಬೇಡ. ಮನೆಯಲ್ಲಿಯೇ ವ್ಯಾಯಾಮವಿರಲಿ.
- ಮೇಲ್ಕಂಡ ರೋಗಗಳಿಗೆ ಲಭ್ಯ ಲಸಿಕೆ ಪಡೆಯಿರಿ.
- ಮುಂಜಾಗ್ರತೆಯ ಬಳಿಕವೂ ರೋಗ ಲಕ್ಷಣಗಳು ಕಂಡಲ್ಲಿ ವೈದ್ಯರ ಭೇಟಿ.

ನಿಸರ್ಗದಲ್ಲಿ ಬೇಸಿಗೆ ಕಾಲ, ಮಳೆಗಾಲ. ಚಳಿಗಾಲ ಎಲ್ಲದಕ್ಕೂ ಅದರದ್ದೇ ಆದ ಒಳಿತು, ಕೆಡುಕುಗಳಿವೆ. ಕಾಲದ ಮಹತ್ವವನ್ನು ನಾವು ಸರಿಯಾಗಿ ಅರ್ಥ ಮಾಡಿಕೊಳ್ಳದೇ ಪ್ರಕೃತಿಯ ವಿರುದ್ಧವಾಗಿ ಹೋದಾಗ ಒಳಿತು ಕೂಡ ನಮಗೆ ವಿಷಮಯ ಆಗಬಹುದು. ಆದ್ದರಿಂದ ನಮ್ಮ ಮಾನಸಿಕ ಮತ್ತು ದೇಹಾರೋಗ್ಯದ ಆರೈಕೆಯನ್ನು ಸರಿಯಾಗಿ ಮಾಡಿಕೊಂಡು, ನಮ್ಮವರ ಆರೋಗ್ಯವನ್ನೂ ಆರೈಕೆ ಮಾಡೋಣ. ಸ್ವಾಸ್ಥ್ಯ ಬದುಕನ್ನು ನಮ್ಮದಾಗಿಸಿಕೊಳ್ಳೋಣ.

**- ಡಾ. ರವಿಕುಮಾರ್ ಟಿ.ಜಿ.,** ಆರೈಕೆ ಆಸ್ಪತ್ರೆ, ದಾವಣಗೆರೆ.

# ಮನೆಗೆ ಬೆಂಕಿ ಹಚ್ಚಿದವರಿಗೆ ಅಧ್ಯಕ್ಷರ ಸಾಥ್

## ನನ್ನ ವಿರುದ್ಧ ಪಿತೂರಿ ನಡೆಯುತ್ತಿದೆ ಎಂದ ಮಾಜಿ ಶಾಸಕ ಅಖಂಡ ಶ್ರೀನಿವಾಸ ಮೂರ್ತಿ

ಬೆಂಗಳೂರು, ಜು. 27 - ನಮ್ಮ ಮನೆಗೆ ಬೆಂಕಿ ಹಚ್ಚಿದವರನ್ನು ಪಕ್ಷದ ಅಧ್ಯಕ್ಷರು ಜೊತೆಯಲ್ಲಿಟ್ಟುಕೊಂಡು ಓಡಾಡುತ್ತಿದ್ದಾರೆ ಎಂದು ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿರುದ್ಧ ಮಾಜಿ ಶಾಸಕ ಅಖಂಡ ಶ್ರೀನಿವಾಸ ಮೂರ್ತಿ ಪರೋಕ್ಷವಾಗಿ ಆರೋಪ ಮಾಡಿದ್ದಾರೆ.

ಡಿಜೆ ಹಳ್ಳಿ, ಕೆಜಿ ಹಳ್ಳಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, 2020ರಲ್ಲಿ ನನ್ನ ಮನೆಗೆ ಬೆಂಕಿ ಹಚ್ಚಲಾಯಿತು. ನಂತರ ಹಿರಿಯ ನಾಯಕರು ಷಡ್ಯಂತ್ರ ಮಾಡಿ ಟಿಕೆಟ್ ತಪ್ಪಿಸಿದರು. ಈಗ ಪ್ರಕರಣದ ಆರೋಪಿಗಳನ್ನು ಬಿಡಿಸಲು ಪತ್ರ ಬರೆಯುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಕಳೆದ ಚುನಾವಣೆಯಲ್ಲಿ ಅತಿ ಹೆಚ್ಚು ಮತ ಪಡೆದೆ ಎಂಬ ಕಾರಣಕ್ಕೆ ನನ್ನ ಮೇಲೆ ಹಿರಿಯ ನಾಯಕರು ಷಡ್ಯಂತ್ರ ರೂಪಿಸಿದರು. ಈ ಚುನಾವಣೆಯಲ್ಲಿ ಟಿಕೆಟ್ ಕೂಡ ತಪ್ಪಿಸಿದರು. ನನ್ನನ್ನು ಸೋಲಿಸಲು ಪ್ರಯತ್ನಿಸಿದರು. ಉಳಿದ ಶಾಸಕರಿಗಾದರೂ ನ್ಯಾಯ ಕೊಡಿ. ಅವರಿಗೆ ಅನ್ಯಾಯ ಮಾಡಬೇಡಿ ಎಂದವರು ಹೇಳಿದರು.

2020 ರಲ್ಲಿ ನನ್ನ ಮನೆಗೆ ಬೆಂಕಿ ಹಾಕಿ ಪೊಲೀಸ್ ಠಾಣೆಗೂ ಬೆಂಕಿ ಹಚ್ಚಿದ್ದರು. ಗಾಡಿಗಳಿಗೂ ಬೆಂಕಿ ಹಾಕಿದ್ದರು. ಸಿಸಿಟಿವಿ ದೃಶ್ಯಗಳನ್ನು ನೋಡಿಯೇ ಆರೋಪಿಗಳನ್ನು ಹುಡುಕಿ ಕೇಸು ಹಾಕಿದ್ದಾರೆ. ಅಮಾಯಕರನ್ನು ಪ್ರಕರಣದಿಂದ ಕೈ ಬಿಡಲು ನಾನೇ ಈ ಹಿಂದೆ ಹೇಳಿದ್ದೆ. ಅಮಾಯಕರನ್ನೆಲ್ಲ ಪ್ರಕರಣದಿಂದ ಈಗಾಗಲೇ ಕೈ ಬಿಡಲಾಗಿದೆ ಎಂದು ಶ್ರೀನಿವಾಸ ಮೂರ್ತಿ ಹೇಳಿದರು.

ಸಿ.ಸಿ. ಕ್ಯಾಮರಾ ದೃಶ್ಯಗಳನ್ನು ನೋಡಿಯೇ ಪೊಲೀಸರು ಹಾಗೂ ಎನ್.ಐ.ಎ. ತಪ್ಪಿತಸ್ಥರನ್ನು ಬಂಧಿಸಿದ್ದಾರೆ. ಈಗ ಮೈಸೂರಿನವರಾದ ತನ್ವೀರ್ ಸೇಠ್ ಅವರು ಬೆಂಗಳೂರಿನ ಘಟನೆ ಬಗ್ಗೆ ಪತ್ರ ಬರೆಯುತ್ತಿದ್ದಾರೆ ಎಂದವರು ಆಕ್ಷೇಪಿಸಿದರು.

ನಾನು ದಲಿತ ಶಾಸಕ. ನನಗೆ ರಕ್ಷಣೆ ಕೊಡಲಿಲ್ಲ. ಅಂದು ನನ್ನ ವಿರುದ್ಧ ಪಿತೂರಿ ಮಾಡಿದ್ದಾರೆ. ತನ್ವೀರ್ ಸೇಠ್ ಪತ್ರದ ಹಿಂದೆ ಹಿರಿಯ ನಾಯಕರು ಇದ್ದಾರೆ ಎಂದು ಆರೋಪಿಸಿದ ಅವರು, ಈ ಬಗ್ಗೆ ಮುಖ್ಯಮಂತ್ರಿ ಹಾಗೂ ಗೃಹ ಸಚಿವರಿಗೆ ಮನವಿ ಸಲ್ಲಿಸುತ್ತೇನೆ. ನ್ಯಾಯಾಲಯದಲ್ಲೂ ಹೋರಾಟ ನಡೆಸುತ್ತೇನೆ ಎಂದರು.

ಆರೋಪಿಗಳನ್ನು ಬಿಡುಗಡೆ ಮಾಡುವ ಹುನ್ನಾರ ನಡೆಯುತ್ತಿದೆ ಎಂದು ಪರೋಕ್ಷವಾಗಿ ಡಿ.ಕೆ. ಶಿವಕುಮಾರ್ ಹಾಗೂ ಸಂಪತ್ ರಾಜು ವಿರುದ್ಧ ಅಖಂಡ ಶ್ರೀನಿವಾಸ ಮೂರ್ತಿ ಆರೋಪ ಮಾಡಿದರು.

# ಉಡುಪಿ ಘಟನೆಗೆ ಕೋಮು ಬಣ್ಣ ಬೇಡ

ಮಂಗಳೂರು, ಜು. 27 - ಉಡುಪಿ ಕಾಲೇಜಿನಲ್ಲಿ ನಡೆದ ವಿಡಿಯೋ ಪ್ರಕರಣಕ್ಕೆ ಸಂಬಂಧಿಸಿದಂತೆ ತರಾತುರಿಯಲ್ಲಿ ಕೋಮು ಬಣ್ಣ ಬಳಿಯಬಾರದು. ಈ ಪ್ರಕರಣದಲ್ಲಿ ಇನ್ನೂ ಸ್ಪಷ್ಟ ಸಾಕ್ಷಿಗಳು ದೊರೆತಿಲ್ಲ ಎಂದು ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯೆ ಖುಷ್ಬೂ ಸುಂದರ್ ಹೇಳಿದ್ದಾರೆ.



ಕಾಲೇಜಿಗೆ ಉಡುಪಿ ಪೊಲೀಸ್ ವರಿಷ್ಠಾಧಿಕಾರಿ ಅಕ್ಷಯ್ ಮಚ್ಚೀಂದ್ರ ಅವರ ಜೊತೆ ಭೇಟಿ ನೀಡಿದ ಖುಷ್ಬೂ, ಕಾಲೇಜಿನ ಆಡಳಿತ ಮಂಡಳಿ, ಸಂತ್ರಸ್ತೆ ಹಾಗೂ ಘಟನೆಯಲ್ಲಿ ಭಾಗಿಯಾದ ವಿದ್ಯಾರ್ಥಿನಿಯರ ಜೊತೆ ಮಾತನಾಡಿದರು.

ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಖುಷ್ಬೂ, ಪೊಲೀಸರು ವ್ಯಾಪಕ ತನಿಖೆ ನಡೆಸಿದ ನಂತರವೂ ಪ್ರಕರಣದ ಸ್ಪಷ್ಟ ಸಾಕ್ಷಿಗಳು ದೊರೆತಿಲ್ಲ ಎಂದರು. ಸಮಗ್ರ ತನಿಖೆ ನಡೆಯಬೇಕಿದೆ. ಪೊಲೀಸರು ಮೊಬೈಲ್ ಫೋನ್‌ಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳಿಸಿದ್ದಾರೆ. ಸ್ಪಷ್ಟ ಸಾಕ್ಷಿಗಳು ದೊರೆಯುವವರೆಗೂ ಆರೋಪ ಪಟ್ಟಿ ದಾಖಲಿಸಲಾಗದು ಎಂದು ಖುಷ್ಬೂ ಹೇಳಿದರು.

# ಏಕಗವಾಕ್ಷಿ ವ್ಯವಸ್ಥೆಗೆ ಸೂಚನೆ

**(1ನೇ ಪುಟದಿಂದ)** ಸೂಚಿಸಿದರು.

ರಾಜ್ಯದಲ್ಲಿ ಖನಿಜಾನ್ವೇಷಣೆಯನ್ನು ಭಾರತ ಸರ್ಕಾರಿ ಸ್ವಾಮ್ಯದ ಕೆಐಒಸಿಎಲ್ ಮತ್ತು ಎಂಇಸಿಎಲ್ ಮೂಲಕ ಕೈಗೊಳ್ಳಲು ಅನುಮತಿಗಾಗಿ ಭಾರತ ಸರ್ಕಾರಕ್ಕೆ ಪ್ರವೇಶ್ ಪೋರ್ಟಲ್ ನಲ್ಲಿ ಅರ್ಜಿ ಸಲ್ಲಿಸಲಾಗಿದೆ. ಈ ಅರ್ಜಿಗಳಿಗೆ ಇರುವ ಆಕ್ಷೇಪಣೆಗಳನ್ನು ಸರಿಪಡಿಸಿ ತ್ವರಿತವಾಗಿ ತೀರುವಳಿ ಪಡೆಯುವಂತೆ ಈ ಸಂಸ್ಥೆಗಳೊಂದಿಗೆ ಚರ್ಚಿಸಲು ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಹಿಂದೆ ಅಕ್ರಮ ಗಣಿಗಾರಿಕೆಯಿಂದ ಜಪ್ತಿ ಮಾಡಿರುವ 2.7 ದಶಲಕ್ಷ ಮೆಟ್ರಿಕ್ ಟನ್ ಅದಿರು ಅರಣ್ಯ ಪ್ರದೇಶದಲ್ಲಿದ್ದು, ಇವುಗಳ ವಿಲೇವಾರಿಗೆ ಕಾನೂನು ತಜ್ಞರ ಸಲಹೆ ಪಡೆದು ಕ್ರಮ ಕೈಗೊಳ್ಳಲು ಸೂಚಿಸಿದರು.

ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಟಾಸ್ಕ್ ಫೋರ್ಸ್ ಅಡಿ ಬರುವ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡುವಂತೆ ಸೂಚಿಸಿದರು. ಕಲ್ಲುಗಣಿ ಗುತ್ತಿಗೆದಾರರು ನಿಯಮಗಳ ಉಲ್ಲಂಘನೆ ಮಾಡಿರುವುದಕ್ಕೆ ವಿಧಿಸಿರುವ ದಂಡ ಸಂಗ್ರಹಿಸಲು ಯೋಜನೆ ಜಾರಿಗೆ ತರುವ ಕುರಿತ ಪ್ರಸ್ತಾವನೆಯನ್ನು ಸಚಿವ ಸಂಪುಟದ ಸಭೆಯಲ್ಲಿ ಮಂಡಿಸಲು ಸೂಚಿಸಿದರು.

# ಏರ್‌ಪೋರ್ಟ್ ಆರಂಭ

**(1ನೇ ಪುಟದಿಂದ)** ನೀಡಲು ಮೂರು ಏರ್ ಲೈನ್ಸ್ ಸಂಸ್ಥೆಗಳಿಗೆ ಅನುಮತಿ ಸಿಕ್ಕಿದೆ ಎಂದೂ ಸಚಿವರು ತಿಳಿಸಿದ್ದಾರೆ.

ಸ್ಪೈಸ್ ಜೆಟ್, ಸ್ಟಾರ್ ಏರ್ ಲೈನ್ಸ್ ಮತ್ತು ಅಲಯನ್ಸ್ ಏರ್ ಸಂಸ್ಥೆಗಳು ಈ ರಹದಾರಿಗಳಲ್ಲಿ ವಿಮಾನ ಸಂಚಾರ ಮಾಡುವ ಸಂಬಂಧ ಕರೆದಿದ್ದ ಟೆಂಡರ್‌ನಲ್ಲಿ ಭಾಗವಹಿಸಿ ಯಶಸ್ವಿಯಾಗಿವೆ. ಸದ್ಯಕ್ಕೆ ಹಗಲು ವೇಳೆಯ ವಿಮಾನ ಸಂಚಾರ ಮಾತ್ರ ಇರುತ್ತದೆ. ರಾತ್ರಿ ವೇಳೆ ಲ್ಯಾಂಡಿಂಗ್ ವ್ಯವಸ್ಥೆಗೆ ಸಂಬಂಧಿಸಿದ ಕಾಮಗಾರಿ ಪ್ರಗತಿಯಲ್ಲಿದ್ದು ಆದಷ್ಟು ಬೇಗ ಮುಗಿಯಲಿದೆ ಎಂದು ಅವರು ವಿವರಿಸಿದ್ದಾರೆ. ಉಡಾನ್ ಯೋಜನೆಯಡಿ ಅನುಮತಿ ಪಡೆದಿರುವ ವಿಮಾನಯಾನ ಸಂಸ್ಥೆಗಳು ವಿಮಾನ ಸಂಚಾರಕ್ಕೆ ಸಿದ್ಧತೆ ನಡೆಸಿದ್ದು, ನಾಗರಿಕ ವಿಮಾನಯಾನ ನಿರ್ದೇಶನಾಲಯದ ಅನುಮತಿ ಸಿಕ್ಕ ನಂತರ ಅವು ಕಾರ್ಯಾಚರಣೆ ನಡೆಸಲಿವೆ ಎಂದರು.

# ಮಣಿಪುರಕ್ಕೆ ವಿಪಕ್ಷ ಸಂಸದರ ಭೇಟಿ

ನವದೆಹಲಿ, ಜು. 27 - ಮಣಿಪುರದ ಪರಿಸ್ಥಿತಿ ಕುರಿತು ತಿಳಿಯಲು ಪ್ರತಿಪಕ್ಷಗಳ ಸಂಸದರು ಜುಲೈ 29 ಹಾಗೂ 30ರಂದು ರಾಜ್ಯಕ್ಕೆ ಭೇಟಿ ನೀಡಲಿದ್ದಾರೆ. 20ಕ್ಕೂ ಹೆಚ್ಚು ಸಂಸದರು ವಾರಾಂತ್ಯದಲ್ಲಿ ಮಣಿಪುರಕ್ಕೆ ತೆರಳಿ ಪರಿಸ್ಥಿತಿಯ ನೇರ ವಿವರ ಪಡೆಯಲಿದ್ದಾರೆ ಎಂದು ಲೋಕಸಭೆಯಲ್ಲಿ ಕಾಂಗ್ರೆಸ್ ಸಚೇತಕರಾಗಿರುವ ಮಾಣಿಕ್ಯಂ ಟ್ಯಾಗೋರ್ ಹೇಳಿದ್ದಾರೆ. ಪ್ರತಿಪಕ್ಷಗಳ ಒಕ್ಕೂಟವಾದ ಐ.ಎನ್.ಡಿ.ಐ.ಎ.ದ ಸದಸ್ಯ ಪಕ್ಷಗಳಿಂದ ತಲಾ ಒಬ್ಬರು ಸಂಸದರು ನಿಯೋಗದಲ್ಲಿ ಭಾಗವಹಿಸಲಿದ್ದಾರೆ. ಕಣಿವೆ ಹಾಗೂ ಬೆಟ್ಟದ ಪ್ರದೇಶಗಳೆರಡಕ್ಕೂ ನಿಯೋಗ ಭೇಟಿ ನೀಡಲಿದೆ ಎನ್ನಲಾಗಿದೆ.

# ತುಂಗಭದ್ರಾ : ನೀರು ಇಳಿಮುಖ

**(1ನೇ ಪುಟದಿಂದ)** 40 ಸಾವಿರ ಕ್ಯೂಸೆಕ್ಸ್ ನೀರನ್ನು ನದಿಗೆ ಬಿಡಲಾಗಿತ್ತು. ಗುರುವಾರ ಆ ಪ್ರಮಾಣ 20 ಸಾವಿರಕ್ಕೆ ಇಳಿದಿದೆ. ಇದರಿಂದಾಗಿ ಉಕ್ಕಡಗಾತ್ರಿ ಬಳಿ ತುಂಗಭದ್ರಾ ನದಿಯಲ್ಲಿ ಸುಮಾರು 4 ಅಡಿಯಷ್ಟು ನೀರು ಇಳಿದಿದೆ. ನದಿ ಹಿನ್ನೀರಿನಲ್ಲಿ ಮುಳುಗಡೆಯಾಗಿದ್ದ ಉಕ್ಕಡಗಾತ್ರಿ - ಪತ್ತೇಪುರ ಸಂಪರ್ಕ ಸೇತುವೆ ಗುರುವಾರ ಸಂಜೆ ಸಂಚಾರಕ್ಕೆ ಮುಕ್ತವಾಗಿದೆ.


**ಅಪಾರ್ಟ್‌ಮೆಂಟ್‌ನಲ್ಲಿ ಮನೆ ಭೋಗ್ಯಕ್ಕೆ ಇದೆ**
ದಾವಣಗೆರೆ ಸಿಟಿ ಎಸ್.ಎಸ್ ಬಡಾವಣೆ 'ಎ' ಬ್ಲಾಕ್ ನೇತಾಜಿ ಸುಭಾಷ್‌ಚಂದ್ರ ಬೋಸ್ ಇಂಡೋರ್ ಸ್ಟೇಡಿಯಂ ಹತ್ತಿರ, ಎಸ್. ಸ್ಕ್ವೇರ್ ಡ್ಯೂ ಫ್ಲವರ್ ಅಪಾರ್ಟ್‌ಮೆಂಟ್‌ನಲ್ಲಿ ವಾಸ್ತು ಪ್ರಕಾರ ಅಳವಡಿಸಿರುವ ಲಿಫ್ಟ್, ನೀರು ಹಾಗೂ ಎಲ್ಲಾ ಸೌಕರ್ಯವಿರುವ ಅಪಾರ್ಟ್‌ಮೆಂಟ್‌ನಲ್ಲಿ ಮನೆ ಭೋಗ್ಯಕ್ಕಿದೆ. - ಬಿ.ಎಸ್. ಸಂತೋಷ್
96322 67555

**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿ
20X30 ಪೂರ್ವ, 20X30 ಉತ್ತರ, 40X60 ದಕ್ಷಿಣ, 40X60 ಪಶ್ಚಿಮ, 50X80 ಉತ್ತರ, 30X50 ಪಶ್ಚಿಮ, 40X60 ಪೂರ್ವ, 30X50 ಪೂರ್ವ.
ಕಿರಣ್ ಭೂಸನೂರ್ (ಏಜೆಂಟ್)
97315-63409

**ಸೈಟುಗಳು ಮಾರಾಟಕ್ಕಿವೆ**
ಎಂ.ಬಿ ಸಿಟಿಯಲ್ಲಿ 40x60 East 1850/-. 2) ಕನ್ನಿಕಾ ಲೇಔಟ್‌ನಲ್ಲಿ 30x40 East. Rate : 2500/-. 3) ಡಾಲರ್ಸ್ ಕಾಲೋನಿಯಲ್ಲಿ 70x62 ಕಾರ್ನರ್
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಬಡಾವಣೆಯಲ್ಲಿ 30x50 ಪಶ್ಚಿಮ ಅಕ್ಕ-ಪಕ್ಕ, 30x50 ಉತ್ತರ ಅಕ್ಕ-ಪಕ್ಕ, 30x50 ಉತ್ತರ. ಬಾಟ್ಲಿ ಬಿಲ್ಡಿಂಗ್ ಹಿಂಭಾಗ ಗ್ಲಾಸ್ ಹೌಸ್ ಹತ್ತಿರ, 30x60 ಪಶ್ಚಿಮ, 30x50ದಕ್ಷಿಣ.
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**URGENT REQUIREMENT**
MATHS TEACHER (HIGHER PRIMARY)
B.Sc., B.Ed., PM Method
97410 52600
97401 37642

**ಬೇಕಾಗಿದ್ದಾರೆ**
ಮನಿಷಾ & ಶಿಫಾಲಿ ಸೆಕ್ಯೂರಿಟಿ ಸರ್ವೀಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ ಎಂಬ ಕಂಪನಿಯಲ್ಲಿ ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಕೂಡಲೇ ಬೇಕಾಗಿದ್ದಾರೆ. ಸಂಪರ್ಕಿಸಿ
98448 18900, 70227 92613

**ಮನೆ ಮಾರಾಟಕ್ಕೆ**
ಕಿರಣ್ ಭೂಸನೂರ್ (ಏಜೆಂಟ್)
97315-63409
ಆಂಜನೇಯ ಬಡಾವಣೆಯಲ್ಲಿ ಬಾಡಿಗೆ ಬರುವಂತಹ ಸೈಜ್ : 30x45 ಉತ್ತರ, 30x42 ದಕ್ಷಿಣ, 30x43 ಉತ್ತರ, 30x40 ದಕ್ಷಿಣ, 30x45 ಉತ್ತರ. (ಡ್ಯುಪ್ಲೆಕ್ಸ್ 3 BHK 30x45 ದಕ್ಷಿಣ ಸಿದ್ದವೀರಪ್ಪ ಬಡಾವಣೆ)

**EC / ಇಸಿ,**
E-swathu, Khatha Change Building Licence & Other Property Documents
96118-66449

**ಸೈಟು ಮಾರಾಟಕ್ಕೆ (ಬಂಗ್ಲೆ)**
ಶಿವ-ಪಾರ್ವತಿ ಲೇಔಟ್ ಶಾಮನೂರು
50x100 ಪೂರ್ವ
ಕಿರಣ್ ಭೂಸನೂರ್ (ಏಜೆಂಟ್)
97315-63409

**ಮನೆಯಲ್ಲಿ ನೀರಿನ ಲೀಕೇಜ್**
ಯಾವುದೇ ರೀತಿಯ ಮನೆಯ ಒಳಗಡೆ ಮತ್ತು ಹೊರಗಡೆಯಿಂದ ಮನೆಯ ಒಳಗಡೆ ನೀರು ಸೋರುತ್ತಿದ್ದರೆ (ಲೀಕೇಜ್) ಶಾಶ್ವತವಾಗಿ ನಿಲ್ಲಿಸಲಾಗುವುದು ಮತ್ತು 100% ಕೆಲಸದ ಗ್ಯಾರಂಟಿ ಇರುತ್ತದೆ.
96065 57066, 95913 10082

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಸೈಟು ಮಾರಾಟಕ್ಕಿದೆ**
30x40 ಹಾಗೂ 30x50 ಅಳತೆಯ ಪಿ.ಬಿ. ರಸ್ತೆಯ ಪಕ್ಕದಲ್ಲಿರುವ ಸೈಟು ನೇರವಾಗಿ ಮಾಲೀಕರಿಂದ ಮಾರಾಟಕ್ಕಿವೆ. ಸಂಪರ್ಕಿಸಿ. :
70262 30700

**REQUIRED**
For Computer Billing with 2 Years Tally Experienced (Female Only) Contact :
97317 48890, 94484 61674

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಲೇಟ್‌ನಲ್ಲಿ 40x70 ಕಾರ್ನರ್, 80x70 East, 40x70 East, 30x50 North
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 50x80 East, 50x80 West, 40x60 West, 40x60-40x60 South ಅಕ್ಕ-ಪಕ್ಕ. 30x50 West.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**WANTED**
SALESMAN DELIVERY BOY'S FOR COLGETE PALMOLIVE
VEERANARAYANA TRADERS
N.R. ROAD, DAVANGERE.
98860 97065

**ಮನೆ ಲೀಸ್‌ಗೆ ಇದೆ**
3BHK ಇಂಡಿಪೆಂಡೆಂಟ್ ಹೌಸ್, 5ನೇ ಮೇನ್, 5ನೇ ಕ್ರಾಸ್, ಸೇಂಟ್ ಪೌಲ್ಸ್ ಕಾನ್ವೆಂಟ್ ರೋಡ್, ಪಿ.ಜೆ. ಬಡಾವಣೆ, ದಾವಣಗೆರೆ.
88616 89590

**ಕೋಚಿಂಗ್**
LKG to 9th
SSLC & PUC, PCMB, Arts, Commerce
ಸಿಂಚನ ಅಕಾಡೆಮಿ
ರಾಮ್ ಅಂಡ್ ಕೋ ಸರ್ಕಲ್, ಚರ್ಚ್ ರೋಡ್, ದಾವಣಗೆರೆ.
ಫೋ. : 90195 80600

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಗೆ ಹುಡುಗ / ಹುಡುಗಿ ಕೆಲಸಕ್ಕೆ ಬೇಕಾಗಿದ್ದಾರೆ.
ಸಂಪರ್ಕಿಸಿ :
93414 58505

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ.
ಸ್ಥಳ : ದೊಡ್ಡಬಾತಿ
88920 08800

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**2 BHK HOUSE FOR LEASE / RENT**
Near Podar International School in J.H. Patel Badavane, Davanagere.
95358 41058
88617 11072

**ಅದ್ಭುತವಾದ ಹೊಸ ಮನೆ ಮಾರಾಟಕ್ಕಿದೆ**
30x40 ಉತ್ತರ ದಿಕ್ಕಿನಲ್ಲಿ ವಾಸ್ತು ಪ್ರಕಾರ ಕಟ್ಟಿರುವ 2 BHK ಮನೆ ಮಾರಾಟಕ್ಕಿದೆ. ಸಿದ್ದಗಂಗಾ ಬಡಾವಣೆ, ಎಸ್.ಎಸ್. ಹೈಟೆಕ್ ಹಾಸ್ಪಿಟಲ್ ಹಿಂಭಾಗದ, ದಾವಣಗೆರೆ.
95384 86666, 63605 94165

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
PUC or any Degree.
ವಿಳಾಸ : ಕಾವೇರಿ ಮೆಡಿಹೌಸ್ ಪ್ರೈ.ಲಿ., ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ - 577 002.

**HOUSE FOR SALE**
# 3367/336, SS Paradise Mahalaxmi Layout, Kundawada Road, Davangere.
99168 74969, 70266 41516

**AVOID MOSQUITOES**
Mosquito Nets For Doors & Windows
SRI GOWRI ENTERPRISES
#7C2, 4th Cross, Near, Shaneshwara Temple Karur Industrial-Area, P.B. Road, DVG-6.
72049 94628

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ,**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಗ್ಯಾಸ್ ಗೀಜರ್**
Fully Automatic 2990/- Rs.
R.O. +UV ವಾಟರ್ ಫಿಲ್ಟರ್, 5490/-
ಸೇಲ್ಸ್ & ಸರ್ವೀಸ್‌ಗಾಗಿ ಸಂಪರ್ಕಿಸಿ :
ಮರುತ್ ಎಂಟರ್ ಪ್ರೈಸಸ್
ವೈಎಂಸಿ ಕಾಂಪ್ಲೆಕ್ಸ್, ಹದಡಿ ರಸ್ತೆ, ಸ್ಟೇಡಿಯಂ ಎದುರು, ದಾವಣಗೆರೆ.
98868 96574, 98458 67574

**ಮಳಿಗೆಗಳು ಬಾಡಿಗೆಗೆ**
ನರಸರಾಜ ರಸ್ತೆ, ಚೌಕೀಪೇಟೆ ಕ್ರಾಸ್‌ನ ಪ್ರಭಯ್ಯ ಕಾಂಪ್ಲೆಕ್ಸ್‌ನಲ್ಲಿ 10x20 ಅಳತೆಯ 2, ನೆಲ ಮಳಿಗೆಗಳು ಮತ್ತು ಇವುಗಳ ಹಿಂದೆ 50x30 ಅಳತೆಯಲ್ಲಿ 3 ಗೋಡೌನ್‌ಗಳು ಬಾಡಿಗೆಗೆ ಇದೆ. ವಿಚಾರಿಸಿ :
98445 99922, 9844173831

**ಸೈಟುಗಳು ಮಾರಾಟಕ್ಕೆ**
ಬನಶಂಕರಿ ಬಡಾವಣೆ ಡಾಲರ್ಸ್ ಕಾಲೋನಿ ಶಿವ-ಪಾರ್ವತಿ, ಸಿದ್ದವೀರಪ್ಪ ಹಾಗೂ ದಾವಣಗೆರೆಯ ಎಲ್ಲಾ ಬಡಾವಣೆಗಳಲ್ಲಿ 30x40, 30x50, 40x60, 50x80, ಸೈಟುಗಳು ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ ಹಾಗೂ ಹೊಲಗಳಿಗೆ ವಿಚಾರಿಸಿ :
97315 12365

**Wanted Teacher for Home Tuition**
ICSE 4ನೇ ತರಗತಿ ವಿದ್ಯಾರ್ಥಿಗೆ ಮನೆಗೇ ಬಂದು ಪಾಠ ಮಾಡಲು ಅನುಭವಿ ಶಿಕ್ಷಕರು ಬೇಕಾಗಿದ್ದಾರೆ. ಸ್ಥಳ : ದೇವರಾಜ್ ಅರಸ್ ಬಡಾವಣೆ 'ಎ' ಬ್ಲಾಕ್ ಸಮಯ : ಸಂಜೆ 6 ರಿಂದ 8-30ರವರೆಗೆ. ಸಂಪರ್ಕಿಸಿ :
94805 93153

**WANTED**
We are Hiring telecallers
Good Communication Skill. Required : (Only for Girls, Womens) Salary : 6000, 7000 (Under Graduates) Salary : 8000, 9000, 10,000 (Post Graduates)
95350 51589, 78670 75786
Office Locatoon : Hasbahavi Circle, K.R. Market, Davangere.

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ದಾವಣಗೆರೆ.
**ರಾಷ್ಟ್ರೀಯ ಅಂಧತ್ವ ಮತ್ತು ದೃಷ್ಟಿದೋಷ ನಿಯಂತ್ರಣಾಧಿಕಾರಿಗಳ ಕಛೇರಿ, ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿಗಳ ಕಛೇರಿ, ದಾವಣಗೆರೆ ಜಿಲ್ಲೆ.**
ಎಸ್.ಎಸ್. ಆಸ್ಪತ್ರೆ ಹತ್ತಿರ, ಶ್ರೀರಾಮನಗರ ದಾವಣಗೆರೆ-577005
E-mail : dbcsdavangere@gmail.com
ಸಂಖ್ಯೆ/ ಡಿ.ಬಿ.ಸಿ.ಎಸ್/ಟೆಂಡರ್/35/2023-24 ದಿನಾಂಕ:26/07/2023
**ಇ-ಟೆಂಡರ್ ಪ್ರಕಟಣೆ**
**ರಾಷ್ಟ್ರೀಯ ಜಿಲ್ಲಾ ಅಂಧತ್ವ ಹಾಗೂ ದೃಷ್ಟಿದೋಷ ನಿಯಂತ್ರಣ ಕಾರ್ಯಕ್ರಮ.ದಾವಣಗೆರೆ ವತಿಯಿಂದ ದೃಷ್ಟಿದೋಷವಿರುವ ಶಾಲಾ ಮಕ್ಕಳಿಗೆ ನೀಡುವ ಕನ್ನಡಕಗಳು ಮತ್ತು ವಯೋವೃದ್ದರಿಗೆ ಸಮೀಪ ದೃಷ್ಟಿ ಕನ್ನಡಕಗಳನ್ನು ಖರೀದಿಸಿ ವಿತರಿಸಲು ಇ-ಟೆಂಡರ್ ಅಧಿಸೂಚನೆ ಹೊರಡಿಸಲಾಗಿದೆ.**
(1) ಇ-ಟೆಂಡರ್ ಪ್ರಕಟಿಸುವ ದಿನಾಂಕ **26/07/2023** (2) ಮಾದರಿ ಕನ್ನಡಕಗಳನ್ನು ಜಿಲ್ಲಾ ಕುಷ್ಠರೋಗ ನಿವಾರಣಾಧಿಕಾರಿಗಳು/ಜಿಲ್ಲಾ ಅಂಧತ್ವ ಮತ್ತು ದೃಷ್ಟಿದೋಷ ನಿಯಂತ್ರಣಾಧಿಕಾರಿಗಳ ಕಛೇರಿ, ದಾವಣಗೆರೆ, ಜಿಲ್ಲೆಗೆ, ಸಲ್ಲಿಸಲು ಕೊನೆಯ ದಿನಾಂಕ: **24/08/2023(ಸಂಜೆ 4.30. ಗಂಟೆಯೊಳಗೆ).** (3) ಇ-ಟೆಂಡರ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ **25/08/2023 (ಸಂಜೆ 5.00ಗಂಟೆಯೊಳಗೆ)** (4) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: **28/08/2023** (5) ಆರ್ಥಿಕ ಲಕೋಟೆ ತೆರೆಯುವ ದಿನಾಂಕ: **31/08/2023 ಬೆಳಗ್ಗೆ: 11.00 ಗಂಟೆಯಿಂದ** (6) ಇ-ಟೆಂಡರ್ ತೆರೆಯುವ ಸ್ಥಳ **ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿಗಳ ಕಛೇರಿ. ದಾವಣಗೆರೆ ಜಿಲ್ಲೆ** ಜಿಲ್ಲಾ ಕುಷ್ಠರೋಗ ನಿವಾರಣಾಧಿಕಾರಿಗಳ ಕಛೇರಿ/ಜಿಲ್ಲಾ ಅಂಧತ್ವ ಹಾಗೂ ದೃಷ್ಟಿದೋಷ ನಿಯಂತ್ರಣಾಧಿಕಾರಿಗಳ ಕಛೇರಿ, ದಾವಣಗೆರೆ ಜಿಲ್ಲೆ. (7) ದೃಷ್ಟಿದೋಷವಿರುವ ಶಾಲಾ ಮಕ್ಕಳಿಗೆ ನೀಡುವ ಕನ್ನಡಕಗಳ ಇ-ಟೆಂಡರ್ ಮೊತ್ತ **ರೂ.12.25.ಲಕ್ಷಗಳು** (8) ವಯೋವೃದ್ದರಿಗೆ ನೀಡುವ (ನಿಯರ್ ವಿಜನ್) ಕನ್ನಡಕಗಳ ಇ-ಟೆಂಡರ್ ಮೊತ್ತ **ರೂ.12.95.ಲಕ್ಷಗಳು**
**ಸಹಿ/-** ಜಿಲ್ಲಾ ಕುಷ್ಠರೋಗ ನಿವಾರಣಾಧಿಕಾರಿಗಳು ಹಾಗೂ ಅಂಧತ್ವ ಮತ್ತು ದಷ್ಟಿದೋಷ ನಿಯಂತ್ರಣಾಧಿಕಾರಿಗಳು, ದಾವಣಗೆರೆ ಜಿಲ್ಲೆ.
ವಾಸಾಇ/ಡಿವಿಜಿ/148/ ಕೆಸ್‌ಎಂಸಿಎ/2023-24

**ಮಾನ್ಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**
**ಜಿ & ಡಬ್ಲ್ಯೂಸಿ ನಂ. : 09/2023**
**ಅರ್ಜಿದಾರರು : 1) ಶ್ರೀಮತಿ ಸಬೀನಾಬಾನು ಕೋಂ. ಸೈಯದ್ ರಜಾಕ್ ಅಹ್ಮದ್ ವಯಸ್ಸು : ಸುಮಾರು 38 ವರ್ಷ, ಗೃಹಿಣಿ. 2) ಸೈಯದ್ ಮುಸ್ಕಾನ್ ತಂದೆ : ಸೈಯದ್ ರಜಾಕ್ ಅಹ್ಮದ್ ವಯಸ್ಸು ; ಸುಮಾರು 17 ವರ್ಷ, ವಿದ್ಯಾರ್ಥಿನಿ. 3) ಸೈಯದ್ ಜಾಫರ್ ಸಾಧಿಕ್ ಎಸ್.ಆರ್. ತಂದೆ : ಸೈಯದ್ ರಜಾಕ್ ಅಹ್ಮದ್, ವಯಸ್ಸು : ಸುಮಾರು 13 ವರ್ಷ, ವಿದ್ಯಾರ್ಥಿ. 1 ಮತ್ತು 2ನೇಯವರು ಅಪ್ರಾಪ್ತರಾಗಿದ್ದು, ಇವರ ನೈಸರ್ಗಿಕ ಸಂರಕ್ಷಕರಾದ ಶ್ರೀಮತಿ ಸಬೀನಾಬಾನು ಕೋಂ. ಸೈಯದ್ ರಜಾಕ್ ಅಹ್ಮದ್ ಎಲ್ಲರ ವಾಸ : ಡಿಸಿಎಂ ಟೌನ್‌ಶಿಪ್, ದಾವಣಗೆರೆ ವಿರುದ್ಧ : ಎದುರುದಾರರು : ಇಲ್ಲ.**
**ಸಿವಿಲ್ ಪ್ರಕರಣ ಕಲಂ 151ರ ಅಡಿಯಲ್ಲಿ ಅರ್ಜಿದಾರರ ಪರ ನೀಡಲಾದ ಸಾರ್ವಜನಿಕ ನೋಟೀಸು**
ಈ ಮೇಲ್ಕಂಡ ದಾವೆಯಲ್ಲಿ ಅರ್ಜಿದಾರರು ಕೆಳಕಂಡ ಷೆಡ್ಯೂಲ್‌ನಲ್ಲಿ ತೋರಿಸಿರುವ ಆಸ್ತಿಯನ್ನು ಶ್ರೀಮತಿ ಜಬೀನ್ ತಾಜಾ ಕೋಂ. ಮಹಮ್ಮದ್ ಜಾವೀದ್ ಎಸ್. ಇವರಿಗೆ ಕ್ರಯದ ಕರಾರು ಮಾಡಿದ್ದು, 2 ಮತ್ತು 3ನೇ ಅರ್ಜಿದಾರರು ಅಪ್ರಾಪ್ತ ವಯಸ್ಕರಿದ್ದು, ಅವರ ಪರವಾಗಿ ಆಸ್ತಿಯನ್ನು ಮಾರಾಟ ಮಾಡಲು ಮತ್ತು ಕ್ರಯಪತ್ರ ನೋಂದಣಿ ಮಾಡಿಕೊಡಲು ಘನ ನ್ಯಾಯಾಲಯದಿಂದ ಒಪ್ಪಿಗೆ ಪಡೆಯಲು ದಾವೆಯನ್ನು ಸಲ್ಲಿಸಿದ್ದು. ಈ ದಾವೆಯಲ್ಲಿ ಎದುರುದಾರರಾಗಿ ಸೇರಿಕೊಳ್ಳುವ ತಕರಾರುದಾರರು ದಿನಾಂಕ : 15.9.2023ರಂದು ಬೆಳಿಗ್ಗೆ 11.00 ಗಂಟೆಗೆ ನ್ಯಾಯಾಲಯಕ್ಕೆ ಖುದ್ದಾಗಿಯಾಗಲೀ ಅಥವಾ ವಕೀಲರ ಮುಖಾಂತರವಾಗಲೀ ಹಾಜರಾಗತಕ್ಕದ್ದು. ತಪ್ಪಿದಲ್ಲಿ ಯಾವುದೇ ತಕರಾರು ಇಲ್ಲವೆಂದು ತಿಳಿದು ಪ್ರಕರಣವನ್ನು ವಿಲೇವಾರಿ ಮಾಡಲಾಗುವುದು. ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ದಿನಾಂಕ : 21.3.2023 ರಂದು ಕೊಡಲ್ಪಟ್ಟಿದೆ.
ಷೆಡ್ಯೂಲ್ : ದಾವಣಗೆರೆ ತಾಲ್ಲೂಕು ಸಬ್‌ರಿಜಿಸ್ಟ್ರಾರ್‌ರವರ ಅಧಿಕಾರದ ವ್ಯಾಪ್ತಿಗೆ ಒಳಪಟ್ಟ ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಆವರೆಗೆರೆ ಗ್ರಾಮದ ರಿ.ಸರ್ವೆ ನಂ. 243/1ಬಿ, ಇದರ ವಿಸ್ತೀರ್ಣ : 04 ಎಕರೆ, 11-ಗುಂಟೆ ಜಮೀನನ್ನು ಚಿತ್ರದುರ್ಗ ಜಿಲ್ಲಾಧಿಕಾರಿಗಳಿಂದ ನಂ. ಎಎಲ್‌ಎನ್/ಸಿಆರ್/164/92-93 ದಿನಾಂಕ : 08.03.1993 ರಂದು ಭೂ ಪರಿವರ್ತನೆಯಾಗಿ ದಾವಣಗೆರೆ ನಗರ ಯೋಜನಾ ಪ್ರಾಧಿಕಾರ ಇವರಿಂದ ದಿನಾಂಕ : 05.09.1994ರಂದು ನಂ. 667/1994-95ರ ಪ್ರಕಾರ ವಸತಿ ವಿನ್ಯಾಸ ಅನುಮೋದನೆಯಾಗಿ ಆವರಗೆರೆ ವಿಭಾಗ ಅಂಬಿಕಾ ನಗರ "ಎ" ಬ್ಲಾಕ್‌ನಲ್ಲಿ ಬರತಕ್ಕ ಸೈಟ್ ನಂ. 30, ಡೋ.ನಂ. 385/30 A ಇದರ ಒಟ್ಟು ವಿಸ್ತೀರ್ಣ 30x40 ಅಡಿವುಳ್ಳ ಪೈಕಿ 15x40=600 ಚದುರಡಿವುಳ್ಳ ಖಾಲಿ ಜಾಗಕ್ಕೆ ಚೆಕ್ಕುಬಂದಿ : ಪೂರ್ವಕ್ಕೆ : 30 ಅಡಿ ಅಗಲದ ರಸ್ತೆ, ಪಶ್ಚಿಮಕ್ಕೆ : ಸೈಟ್ ನಂ. 15, ಉತ್ತರಕ್ಕೆ ಸೈ. ನಂ. 31, ದಕ್ಷಿಣಕ್ಕೆ : ಸೈಟ್ ನಂ. 29.
**ನ್ಯಾಯಾಲಯದ ಅಪ್ಪಣೆ ಮೇರೆಗೆ**
**ಶಿವಕುಮಾರ್ ಎಂ. ಪಾಟೀಲ್** ವಾದಿಗಳ ಪರ ವಕೀಲರು
**ಸಹಿ /- ಹಿರಿಯ ಶಿರಸ್ತೇದಾರರು, ಪ್ರಧಾನ ಹಿರಿಯ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**WANTED**
Banking Sector Tele Caller (Female Only)
Qualification : Any Degree
90715 55081
Interview time : 11AM

**SITE FOR SALE**
Behind Vaishnavi Chethana school
30x35
Contact:
96868 33444

**ಮನೆ ಮಾರಾಟಕ್ಕಿದೆ**
#3367, 336, ಎಸ್.ಎಸ್. ಪ್ಯಾರಾಡೈಸ್, ಮಹಾಲಕ್ಷ್ಮಿ ಬಡಾವಣೆ, ಕುಂದುವಾಡ ರೋಡ್, ದಾವಣಗೆರೆ.
99168 74969
7026641516

**ಬಾಡಿಗೆಗೆ ಇದೆ**
ನೆಲ ಮಹಡಿ 3500 ಚ.ಅ.
1ನೇ ಮಹಡಿ 3500 ಚ.ಅ.
2ನೇ ಮಹಡಿ 3500 ಚ.ಅ.
ಎನ್.ಆರ್. ರೋಡ್, ಜಗಳೂರು ಬಸ್ ಸ್ಟಾಂಡ್ ಹಿಂಭಾಗ
94483 39413, 98445 66415

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ನಮ್ಮಲ್ಲಿ ಅಡಮಾನದ ಲೋನ್ ಲಭ್ಯತೆ, ಮನೆ ಸಾಲ ಸೌಲಭ್ಯ**
ಮನೆ ಕಟ್ಟಲು, ಮನೆ ಖರೀದಿ ಮಾಡಲು ಬೇರೆ ಬ್ಯಾಂಕ್ ಅಥವಾ ಫೈನಾನ್ಸ್ ಕಂಪನಿಯಿಂದ ಇರುವ ಸಾಲ ತೀರುವಳಿ ಹಾಗೂ ಹೆಚ್ಚಿನ ಸಾಲ, ವಾಸದ ಮನೆ ಸಾಲ. (ಕಡಿಮೆ ದಾಖಲಾತಿ, ತ್ವರಿತ ಸಾಲ ಸೌಲಭ್ಯ)
77603 47247

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು.
99863 61250
80730 24690

**Name Clarification**
I. Nagamma c/o Nagendrachari, 38 years resident @ 109, Nagendra, Near Anjaneya Temple, Shamanur.
In My aadhar Card my name has been mentioned as Nagamma, but in Union Bank of India, my Name has been Mentioned as Nagarathna. above said two names are my only none are eles. In future I am Using my name as Nagamma before Notary, Davangere. on 17.07.2023.
Sd/- Nagamma

**Name Clarification**
I. G.P. Nimishamba w/o G.N. Pradeep 38 years resident @ Lokikere Road, KSSIDC Industrial area, Davangere.
All Educational Records my name as D.C. Divya after my Marriege name as change G.P. Nimishamba above two names are my only. none me else. I have been using and Signing my name as G.P. Nimishabmba and I Shall continue the same in future also I Swear in the name of god that this is my name and signature and that the contents of this affidavit are true and correct. dated 27.07.2023 before notary Davangere.
Sd/- G.P. Nimishamba

**SECURITY GUARD ಬೇಕಾಗಿದ್ದಾರೆ**
ಉತ್ತಮ ವೇತನ,
70012 87756, 97409 77785

**WANTED TEACHER**
B.Sc / M.Sc or Any Degree
99641 10736

# ಜಿಲ್ಲೆಯಲ್ಲಿ 7.8 ಮಿ. ಮೀ. ಸರಾಸರಿ ಮಳೆ 20.70 ಲಕ್ಷ ರೂ.ನಷ್ಟು ಅಂದಾಜು ಹಾನಿ

ದಾವಣಗೆರೆ, ಜು. 27 - ಜಿಲ್ಲೆಯಲ್ಲಿ ಜುಲೈ 26 ರಂದು ಬಿದ್ದ ಮಳೆಯ ವಿವರದನ್ವಯ 7.8 ಮಿ.ಮೀ. ಸರಾಸರಿ ಮಳೆಯಾಗಿದೆ. ಅಧಿಕ ಮಳೆಯಿಂದ ರೂ. 20.70 ಲಕ್ಷ ಅಂದಾಜು ನಷ್ಟ ಸಂಭವಿಸಿದೆ.

**ತಾಲ್ಲೂಕುವಾರು ಮಳೆ ಹಾಗೂ ಹಾನಿ ವಿವರ ಈ ಕೆಳಕಂಡಂತಿದೆ :** ಚನ್ನಗಿರಿಯಲ್ಲಿ ವಾಡಿಕೆ ಮಳೆ 4.8 ಮಿ.ಮೀ ಹಾಗೂ ವಾಸ್ತವ ಮಳೆ 6.4 ಮಿ.ಮೀ, ದಾವಣಗೆರೆ ತಾಲ್ಲೂಕಿನಲ್ಲಿ ವಾಡಿಕೆ ಮಳೆ 4.9 ಮಿ.ಮೀ ಹಾಗೂ ವಾಸ್ತವ ಮಳೆ 9.0 ಮಿ.ಮೀ, ಹರಿಹರದಲ್ಲಿ ವಾಡಿಕೆ ಮಳೆ 1.8 ಮಿ.ಮೀ ಹಾಗೂ ವಾಸ್ತವ ಮಳೆ 11.2 ಮಿ.ಮೀ, ಹೊನ್ನಾಳಿ ವಾಡಿಕೆ ಮಳೆ 3.1 ಮಿ.ಮೀ ಹಾಗೂ ವಾಸ್ತವ ಮಳೆ 8.5 ಮಿ.ಮೀ, ಜಗಳೂರು ವಾಡಿಕೆ ಮಳೆ 1.3 ಮಿ.ಮೀ ಹಾಗೂ ವಾಸ್ತವ ಮಳೆ 7.3 ಮಿ.ಮೀ, ನ್ಯಾಮತಿಯಲ್ಲಿ ವಾಡಿಕೆ ಮಳೆ 5.2 ಮಿ.ಮೀ ಹಾಗೂ ವಾಸ್ತವ ಮಳೆ 5.5 ಮಿ.ಮೀ ಮಳೆಯಾಗಿದೆ.

ದಾವಣಗೆರೆ ತಾಲ್ಲೂಕು ವ್ಯಾಪ್ತಿಯಲ್ಲಿ 16 ಮನೆಗಳು ಭಾಗಶಃ ಹಾನಿಯಾಗಿದ್ದು ರೂ. 4.80 ಲಕ್ಷ ಹಾಗೂ 2 ದನದ ಕೊಟ್ಟಿಗೆ ಹಾನಿಯಾಗಿ ರೂ. 20 ಸಾವಿರ ಅಂದಾಜು ನಷ್ಟ ಸಂಭವಿಸಿದೆ.

ಹರಿಹರ ತಾಲ್ಲೂಕು ವ್ಯಾಪ್ತಿಯಲ್ಲಿ 1 ಮನೆ ತೀವ್ರ ಹಾನಿಯಾಗಿದ್ದು ಅಂದಾಜು ರೂ. 2.00 ಲಕ್ಷ ಹಾಗೂ 4 ಮನೆ ಭಾಗಶಃ ಹಾನಿಯಾಗಿದ್ದು ರೂ. 1.20 ಲಕ್ಷ ಅಂದಾಜು ನಷ್ಟ ಸಂಭವಿಸಿದೆ.

ಜಗಳೂರು ತಾಲ್ಲೂಕು ವ್ಯಾಪ್ತಿಯಲ್ಲಿ 10 ಮನೆಗಳು ಭಾಗಶಃ ಹಾನಿಯಾಗಿದ್ದು ರೂ. 0.65 ಸಾವಿರ ಹಾಗೂ 2 ಎಕರೆ ಬೆಳೆ ಹಾನಿಯಾಗಿ ಅಂದಾಜು ರೂ. 50 ಸಾವಿರ ನಷ್ಟ, 1 ಜಾನುವಾರು ಜೀವ ಹಾನಿಯಾಗಿದ್ದು ಅಂದಾಜು ರೂ. 0.35 ಸಾವಿರ ನಷ್ಟ ಸಂಭವಿಸಿದೆ.

ಹೊನ್ನಾಳಿ ತಾಲ್ಲೂಕು ವ್ಯಾಪ್ತಿಯಲ್ಲಿ 2 ಮನೆ ತೀವ್ರ ಹಾನಿಯಾಗಿದ್ದು ಅಂದಾಜು ರೂ. 4.00 ಲಕ್ಷ ಹಾಗೂ 5 ಮನೆ ಭಾಗಶಃ ಹಾನಿಯಾಗಿದ್ದು ರೂ. 2.60 ಲಕ್ಷ ಅಂದಾಜು ನಷ್ಟ ಸಂಭವಿಸಿರುತ್ತದೆ.

ಚನ್ನಗಿರಿ ತಾಲ್ಲೂಕು ವ್ಯಾಪ್ತಿಯಲ್ಲಿ 1 ಮನೆ ತೀವ್ರ ಹಾನಿಯಾಗಿದ್ದು ಅಂದಾಜು ರೂ. 1.20 ಲಕ್ಷ ಹಾಗೂ 7 ಮನೆ ಭಾಗಶಃ ಹಾನಿಯಾಗಿದ್ದು, ರೂ. 2.80 ಲಕ್ಷ ಅಂದಾಜು ನಷ್ಟ, 1 ಜಾನುವಾರು ಜೀವ ಹಾನಿಯಾಗಿದ್ದು ಅಂದಾಜು ರೂ. 0.40 ಸಾವಿರ ನಷ್ಟ ಸಂಭವಿಸಿದೆ.

ಜಿಲ್ಲೆಯಲ್ಲಿ ಒಟ್ಟಾರೆ ರೂ. 20.70 ಲಕ್ಷ ಅಂದಾಜು ನಷ್ಟ ಸಂಭವಿಸಿರುತ್ತದೆ. ಸರ್ಕಾರದ ಮಾರ್ಗಸೂಚಿ ಅನ್ವಯ ಸಂತ್ರಸ್ತರಿಗೆ ಪರಿಹಾರ ವಿತರಿಸಲು ಕ್ರಮ ವಹಿಸಲಾಗುವುದೆಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ತಿಳಿಸಿದ್ದಾರೆ.

# ಶಿಕ್ಷಕರಿಗೆ ಬಿಎಲ್‌ಓ ಕೆಲಸದ ಹೊರೆ ತಪ್ಪಿಸಲು ಡಿಸಿಗೆ ಮನವಿ



ದಾವಣಗೆರೆ, ಜೂ. 27- ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರಿಗೆ ಬಿ.ಎಲ್.ಓ ಕೆಲಸವು ಹೆಚ್ಚು ಹೊರೆಯಾಗುತ್ತಿದ್ದು, ಅವರನ್ನು ಈ ಕೆಲಸದಿಂದ ವಿಮುಕ್ತಿಗೊಳಿಸುವಂತೆ ಜಿಲ್ಲಾ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ವೀರೇಶ್ ಒಡೆಯನಪುರ್ ಅವರ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಜಿಲ್ಲಾ ಸಂಘದ ಮಾಜಿ ಜಿಲ್ಲಾಧ್ಯಕ್ಷ ಪಾಲಾಕ್ಷ, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಮುಬಾರಕ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ರಾಮಣ್ಣ ಹಾಗೂ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳಾದ ಸ್ವಾಮಿ.ಕೆ.ಎಂ.ಹೆಚ್, ಶ್ರೀಮತಿ ಕಲ್ಪನಾ, ಪ್ರಧಾನ ಕಾರ್ಯದರ್ಶಿ ಗುರುಮೂರ್ತಿ, ರಂಗಸ್ವಾಮಿ, ಸಿದ್ದೇಶ್, ನಾಗರಾಜ್ ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಸಂಘದ ವತಿಯಿಂದ ನೂತನ ಜಿಲ್ಲಾಧಿಕಾರಿ ಡಾ.ಎಂ.ವಿ. ವೆಂಕಟೇಶ್ ಅವರನ್ನು ಸ್ವಾಗತಿಸಲಾಯಿತು. ಅಲ್ಲದೇ ವರ್ಗವಾಗಿರುವ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಅವರನ್ನು ಬೀಳ್ಕೊಡಲಾಯಿತು.

# ಕಾಂಗ್ರೆಸ್- ಸಿಪಿಐ ತತ್ವ, ಸಿದ್ಧಾಂತ ಒಂದೇ ನಾಣ್ಯದ 2 ಮುಖಗಳು

## ಕಮ್ಯುನಿಸ್ಟ್ ಪಕ್ಷದ ಕಚೇರಿಯಲ್ಲಿ ಮಾಯಕೊಂಡ ಶಾಸಕ ಬಸವಂತಪ್ಪ



ದಾವಣಗೆರೆ, ಜು. 27 - ಕಮ್ಯೂನಿಸ್ಟ್ ಪಕ್ಷ ಹಾಗೂ ಕಾಂಗ್ರೆಸ್ ಪಕ್ಷದ ತತ್ವ ಮತ್ತು ಸಿದ್ಧಾಂತಗಳು ಒಂದೇ ನಾಣ್ಯದ 2 ಮುಖಗಳಿದ್ದಂತೆ, ಜಾತ್ಯತೀತ ತತ್ವ ಹೊಂದಿರುವ ಪಕ್ಷಗಳೆಂದರೆ ಅವು ಕಾಂಗ್ರೆಸ್, ಕಮ್ಯೂನಿಸ್ಟ್ ಪಕ್ಷಗಳು ಎಂದು ಮಾಯಕೊಂಡ ವಿಧಾನ ಸಭಾ ಕ್ಷೇತ್ರದ ಶಾಸಕ ಎಸ್.ಕೆ. ಬಸವಂತಪ್ಪ ಹೇಳಿದರು.

ನಗರದ ಅಶೋಕ ರಸ್ತೆಯಲ್ಲಿನ ಕಮ್ಯೂನಿಸ್ಟ್ ಪಕ್ಷದ ಕಚೇರಿಯಲ್ಲಿ ನಡೆದ ಅನೌಪಚಾರಿಕ ಸರಳ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ನಾನು ಬಡ ಕುಟುಂಬದಿಂದ ಹೋರಾಟ ಮಾಡಿ ಜನರ ಸಮಸ್ಯೆಗಳಿಗೆ ಸ್ಪಂದಿಸಿ, ಈ ಹಂತಕ್ಕೆ ಅಂದರೆ ಶಾಸಕನಾಗಿ ಆಯ್ಕೆ ಆಗಿದ್ದೇನೆ. ಜನರ ಸಂಕಷ್ಟಗಳಿಗೆ ಸ್ಪಂದಿಸಿದರೆ ಉತ್ತಮ ಸ್ಥಾನ ದೊರೆಯುವುದು ಶತಸಿದ್ದ. ಕ್ಷೇತ್ರದ ಜನತೆ ನನ್ನ ಕೈ ಹಿಡಿದಿದ್ದು, ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಭಾರತೀಯ ಕಮ್ಯೂನಿಸ್ಟ್ ಪಾರ್ಟಿ ಹಾಗೂ ನಮ್ಮ ಸಂಬಂಧ ಅವಿನಾಭಾವ, ಪಂಪಾಪತಿ ಅವರ ಕಾಲದಿಂ ದಲೂ ನಾನು ಸಿಪಿಐ ಪಕ್ಷದ ಒಡನಾಟದಲ್ಲಿ ಇದ್ದೇನೆ. ಕಮ್ಯೂನಿಸ್ಟ್ ಪಾರ್ಟಿ ಎಂದು ಒಂದು ಕಾಲದಲ್ಲಿ ಶಿಸ್ತುಬದ್ಧ ಪಕ್ಷ ಎನ್ನುವಂತೆ ಇತ್ತು. ಯಾರಿಗೆ ಶಕ್ತಿ ಇಲ್ಲವೋ, ಯಾರಿಗೆ ಧ್ವನಿ ಇದ್ದಿಲ್ಲವೋ ಅವರಿಗೆ ಶಕ್ತಿ, ಧ್ವನಿ ನೀಡುವಂತ ಪಕ್ಷವಾಗಿತ್ತು. ಜನರ ಸಮಸ್ಯೆಗಳಿಗೆ ಸ್ಪಂದಿಸಿ, ಅವರ ಕಷ್ಟಗಳನ್ನು ಬಗೆಹರಿಸಿದ ಪಕ್ಷ ಕಮ್ಯೂನಿಸ್ಟ್ ಪಕ್ಷ ಎಂದು ಹೇಳಿದರು.

ಕಟ್ಟಡ ಕಾರ್ಮಿಕರ ರಾಜಾಧ್ಯಕ್ಷ ಆವರಗೆರೆ ಹೆಚ್.ಜಿ. ಉಮೇಶ್ ಮಾತನಾಡಿ, ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಕಾರ್ಮಿಕರಿಂದ ಪಡೆಯಲಾಗಿರುವ 4500 ಕೋಟಿ ಹಣ ಇದೆ. ಅಲ್ಲಿ ಭ್ರಷ್ಟಾಚಾರ ನಡೆದಿದೆ. ಈ ಕುರಿತು ಕಾರ್ಮಿಕ ಮಂತ್ರಿಗಳ ಗಮನಕ್ಕೆ ತರಲಾಗಿದೆ. ಕೃಷಿ, ಹಮಾಲರು ಸೇರಿದಂತೆ, ಎಲ್ಲಾ ವರ್ಗದ ಅಸಂಘಟಿತ ಕಾರ್ಮಿಕರ ಸೌಲಭ್ಯಕ್ಕಾಗಿ ಸೂಕ್ತ ಕ್ರಮವನ್ನು ಸರ್ಕಾರ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಸಿಪಿಐ ಖಜಾಂಚಿ ಆನಂದರಾಜ್ ಮಾತನಾಡಿ, ಯಾವುದೇ ಚುನಾವಣೆಯಾಗಲೀ ಕಾಂಗ್ರೆಸ್ ಪಕ್ಷಕ್ಕೆ ಕಮ್ಯೂನಿಸ್ಟ್ ಬೆಂಬಲ ನೀಡುತ್ತದೆ. ಕಮ್ಯೂನಿಸ್ಟ್ ಪಕ್ಷಕ್ಕೆ ಕಾಂಗ್ರೆಸ್ ಬೆಂಬಲ ನೀಡುತ್ತದೆ. ಬಿಜೆಪಿ ಪಕ್ಷದೊಂದಿಗೆ ನಮ್ಮ ತತ್ವ, ಸಿದ್ಧಾಂತಗಳು ಹೊಂದಾಣಿಕೆ ಆಗುವುದಿಲ್ಲ. ಕಾಂಗ್ರೆಸ್ ಪಕ್ಷದೊಂದಿಗೆ ಹೊಂದಾಣಿಕೆ ಆಗುತ್ತವೆ. ಆದಕಾರಣ ಅವರನ್ನು ಬೆಂಬಲಿಸುತ್ತೇವೆ ಎಂದು ಹೇಳಿದರು.

ಈ ವೇಳೆ ಆವರಗೆರೆ ಚಂದ್ರು, ಆವರಗೆರೆ ವಾಸು, ಶಾರದಮ್ಮ, ಸರೋಜ ಹಾಗೂ ಇತರರು ಇದ್ದರು.

# ಮಣಿಪುರ ಜನಾಂಗೀಯ ಗಲಭೆ: ಕ್ರಮಕ್ಕೆ ಪೀಪಲ್ಸ್ ಲಾಯರ್ಸ್ ಗಿಲ್ಡ್ ಒತ್ತಾಯ




ದಾವಣಗೆರೆ, ಜು. 27- ಮಣಿಪುರದ ಜನಾಂಗೀಯ ಗಲಭೆ ಹಾಗೂ ಮಹಿಳೆಯರ ಬೆತ್ತಲೆ ಮೆರವಣಿಗೆ ಪ್ರಕರಣದ ಹಿನ್ನೆಲೆಯಲ್ಲಿ ಪ್ರಧಾನಿ ಹಾಗೂ ಗೃಹ ಸಚಿವರ ವಿರುದ್ಧ ಕ್ರಮ ಜರುಗಿಸುವಂತೆ ಪೀಪಲ್ಸ್ ಲಾಯರ್ಸ್ ಗಿಲ್ಡ್ ಒತ್ತಾಯಿಸಿದೆ.

ಈ ಸಂಬಂಧ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ ಪದಾಧಿಕಾರಿಗಳು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಿರ್ಲಕ್ಷ್ಯತನವನ್ನು ಖಂಡಿಸಿದರು.

ನೀಚ ಹಾಗೂ ಹೇಯಕೃತ್ಯವನ್ನು ಗಮನಿಸಿದ ಸರ್ವೋಚ್ಚ ನ್ಯಾಯಾಲಯವು ಕೇಂದ್ರ ಸರ್ಕಾರಕ್ಕೆ ಚಾಟಿ ಏಟು ಬೀಸಿದ ನಂತರ ಎಚ್ಚೆತ್ತುಕೊಂಡ ಪ್ರಧಾನಿ ನರೇಂದ್ರ ಮೋದಿ ಅವರು, ಕೃತ್ಯದ ಬಗ್ಗೆ ಮೊದಲ ಬಾರಿಗೆ ಪತ್ರಕರ್ತರ ಮುಂದೆ ಹಾಜರಾಗಿ ತಮ್ಮ ಹೇಳಿಕೆಯನ್ನು ನೀಡಿರುವುದು ಕೇವಲ ಕಣ್ಣೊರೆಸುವ ತಂತ್ರವಾಗಿದೆ ಎಂದು ದೂರಿದರು.

ಒಂದು ವೇಳೆ ಕೇಂದ್ರ ಮತ್ತು ಸರ್ಕಾರಗಳು ಜನಾಂಗೀಯ ಗಲಭೆಗಳನ್ನು ಗಂಭೀರವಾಗಿ ಪರಿಗಣಿಸಿ, ಸೂಕ್ತ ಕ್ರಮ ಕೈಗೊಂಡಿದ್ದರೆ ಇಷ್ಟೊಂದು ದೊಡ್ಡ ಅನಾಹುತಗಳು ನಡೆಯುತ್ತಿರಲಿಲ್ಲ. ಇಡೀ ಪ್ರಪಂಚವೇ ತಲೆತಗ್ಗಿಸುವ ಪ್ರಸಂಗ ಉದ್ಭವವಾಗುತ್ತಿರಲಿಲ್ಲ. ಮಣಿಪುರದ ಘಟನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೇರ ಹೊಣೆಯಾಗಿವೆ ಎಂದರು.

ಪೀಪಲ್ಸ್ ಲಾಯರ್ಸ್ ಗಿಲ್ಡ್ ಅಧ್ಯಕ್ಷ ಅನಿಸ್ ಪಾಷ, ಆಂಜನೇಯ ಗುರೂಜಿ, ಪ್ರಕಾಶ್ ಪಾಟೀಲ್, ಭೈರೇಶ್ವರ ಬಿ.ಎಂ. ,ಲೋಕಿಕೆರೆ ಪ್ರದೀಪ್, ಹೆಚ್. ಎಂ.ನಾಯ್ಕ, ಎಸ್. ಸವಿತಾ, ಮಂಜುಳಾ, ನಾಗರಾಜ್, ವಾಗೀಶ್ ಕಟಗಿಹಳ್ಳಿ ಮಠ, ಪ್ರಕಾಶ್ ಬಾತಿ, ಚಕ್ರವರ್ತಿ, ರುದ್ರೇಶ್, ಹನೀಫ್, ಗುರುಮೂರ್ತಿ, ಅಜಯ್, ಅಂಜಿನಪ್ಪ, ಶಿವರಾಜ್, ಕರಿಯಪ್ಪ, ಮಾಲತೇಶ್, ಪಾಪಣ್ಣ, ಮುಸ್ತಾಫಾ ಮತ್ತಿತರರು ಇದ್ದರು.

# ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕರ ಕೊಡುಗೆ



ದಾವಣಗೆರೆ, ಜು. 27- ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳಿಗಾಗಿ ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮಕ್ಕೆ ಇದೆ ಶಾಲೆಯ ಮುಖ್ಯ ಶಿಕ್ಷಕರಾದ ಶ್ರೀಮತಿ ಇಶ್ರತ್ ಸುಲ್ತಾನ, ಸಹ ಶಿಕ್ಷಕರುಗಳಾದ ಕನ್ನಡ ಶಿಕ್ಷಕಿ ಶ್ರೀಮತಿ ಎಸ್. ಮಂಜುಳಾ, ಶ್ರೀಮತಿ ಶಾತಾಜ್ ಬಾನು, ಶ್ರೀಮತಿ ನಾಜಿಮಾ ಖಾನಂ, ಶ್ರೀಮತಿ ಸೈರಾ ಬಾನು, ಶ್ರೀಮತಿ ಶಾಹೀನ್ ಪರ್ವೀನ್ ಇವರುಗಳು 5000 ರೂ. ಬೆಲೆಬಾಳುವ ಮಿಕ್ಸರ್ ಅನ್ನು ಶಾಲೆಗಾಗಿ ಕೊಡುಗೆಯಾಗಿ ನೀಡಿದ್ದಾರೆ.

# ಇಂದು : ಕುರಿ, ಮೇಕೆ ಸಾಕಾಣಿಕೆ ತರಬೇತಿ

ದಾವಣಗೆರೆಯ ಪಶು ಆಸ್ಪತ್ರೆ ಆವರಣದಲ್ಲಿರುವ ಪಶು ಪಾಲನಾ ಮತ್ತು ಪಶುವೈದ್ಯ ಕೀಯ ತರಬೇತಿ ಕೇಂದ್ರದಲ್ಲಿ ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿಯು ಇಂದು ಮತ್ತು ನಾಳೆ ನಡೆಯಲಿದೆ. ವಿವರಕ್ಕೆ ಸಂಪರ್ಕಿಸುವ ದೂರವಾಣಿ : 08192-233787.

# ಹರಿಹರದಲ್ಲಿ ಕಾರ್ಗಿಲ್ ವಿಜಯೋತ್ಸವ

ಹರಿಹರ, ಜು. 27 - ನಗರದಲ್ಲಿ ಸೈನಿಕರ ಸಂಘ ಮತ್ತು ವಿವಿಧ ಸಂಘಟನೆಗಳ ವತಿಯಿಂದ ಕಾರ್ಗಿಲ್ ಯುದ್ಧದ ಸಮಯದಲ್ಲಿ ಮರಣ ಹೊಂದಿರುವ ಯೋಧರ ಸ್ಮರಣೆ, ವಿಜಯೋತ್ಸವ ಮತ್ತು ಪಂಜಿನ ಮೆರವಣಿಗೆ ಮಾಡಲಾಯಿತು.

ಪಂಜಿನ ಮೆರವಣಿಗೆ ಶಿವಮೊಗ್ಗ ರಸ್ತೆಯ ಗ್ರಾಮದೇವತೆ ದೇವಸ್ಥಾನ ಮುಂಭಾಗದಿಂದ ಆರಂಭಗೊಂಡು ರಾಣಿ ಚೆನ್ನಮ್ಮ ವೃತ್ತ, ಮುಖ್ಯರಸ್ತೆಯಲ್ಲಿ ಸಂಚರಿಸಿ ತಹಶೀಲ್ದಾರ್ ಕಚೇರಿಯ ಆವರಣದಲ್ಲಿ ಅಂತ್ಯಗೊಂಡಿತು.

ಈ ವೇಳೆ ಶಾಸಕ ಬಿ.ಪಿ. ಹರೀಶ್ ಮಾತನಾಡಿ, ದೇಶದ ರಕ್ಷಣೆ ಮಾಡುವ ಯೋಧರ ಕಾರ್ಯ ಅವಿಸ್ಮರಣೀಯ. ಸೈನಿಕರ ತ್ಯಾಗದಿಂದ ದೇಶದ ಪ್ರಜೆಗಳು ನೆಮ್ಮದಿ ಜೀವನ ಕಳೆಯುವುದಕ್ಕೆ ದಾರಿಯಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಹಾಲಿ ಮತ್ತು ನಿವೃತ್ತ ಯೋಧರು, ವಿವಿಧ ಸಂಘಟನೆಗಳ ಮುಖಂಡರು ಹಾಜರಿದ್ದರು.

# ನಗರದ ಭದ್ರಾ ವಾಣಿಜ್ಯ ಪಿಯು ಕಾಲೇಜಿನಲ್ಲಿ ಇಂದು ಸಾಂಸ್ಕೃತಿಕ ವೇದಿಕೆ ಉದ್ಘಾಟನೆ

ಭದ್ರಾ ವಾಣಿಜ್ಯ ಪದವಿ ಪೂರ್ವ ಕಾಲೇಜು ಮತ್ತು ಬೆಳಕು ಅಕಾಡಮಿ ಆಫ್ ಮೆಡಿಕಲ್ ಸೈನ್ಸ್ ವತಿಯಿಂದ ಸಾಂಸ್ಕೃತಿಕ ವೇದಿಕೆ ಉದ್ಘಾಟನೆ ಮತ್ತು ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಸ್ವಾಗತ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 10.30 ಗಂಟೆಗೆ ಕುವೆಂಪು ಕನ್ನಡ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಮುಖ್ಯ ಅತಿಥಿಗಳಾಗಿ ಎಂ. ಶಿವರಾಜು, ಪ್ರೊ. ಸಿ.ಹೆಚ್. ಮುರಿಗೇಂದ್ರಪ್ಪ ಆಗಮಿಸುವರು.

ಅಧ್ಯಕ್ಷತೆಯನ್ನು ಪ್ರಾಂಶುಪಾಲ ಚಂದ್ರಪ್ಪ ಡಿ. ವಹಿಸುವರು. ಕಾರ್ಯಕ್ರಮದಲ್ಲಿ ಪ್ರೊ. ಟಿ. ಮುರುಗೇಶ್, ಎಂ. ಸಂಕೇತ್ ಉಪಸ್ಥಿತರಿರುವರು.

# ರಾಜ್ಯ ಮಟ್ಟದ ಯೋಜನಾ ಪ್ರದರ್ಶನಕ್ಕೆ ಆಯ್ಕೆ

ದಾವಣಗೆರೆ, ಜು. 27- ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸಿಎಸ್‌ಇ ವಿಭಾಗದ ಡಾ. ಪ್ರಶಾಂತ್ ಜಿ ಆರ್ ಅವರ ಮಾರ್ಗದರ್ಶನದಲ್ಲಿ 'ರೈತರ ಸಹಾಯ ಕೇಂದ್ರ, ಎಪಿಎಂಸಿ ಅಪ್ಲಿಕೇಶನ್' ಎಂಬ ವಿದ್ಯಾರ್ಥಿಗಳ ಯೋಜನೆಯು ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಪರಿಷತ್ತಿನ ರಾಜ್ಯ ಮಟ್ಟದ ಯೋಜನಾ ಪ್ರದರ್ಶನಕ್ಕೆ ಆಯ್ಕೆಯಾಗಿದೆ.

ಬರುವ ಆಗಸ್ಟ್ 11 ಮತ್ತು 12 ರಂದು ಮೂಡುಬಿದಿರೆಯ ಆಳ್ವಾಸ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿಯಲ್ಲಿ ರಾಜ್ಯ ಮಟ್ಟದ ಯೋಜನಾ ಪ್ರದರ್ಶನ ನಡೆಯಲಿದೆ.

ಈ ಯೋಜನೆಯು ರೈತರ ಸಹಾಯ ಕೇಂದ್ರ, ಎಪಿಎಂಸಿ ಅಪ್ಲಿಕೇಶನ್ ಅನ್ನು ಅಭಿವೃದ್ಧಿಪಡಿಸುವ ಮೂಲಕ ರೈತರಿಗೆ ಸಹಾಯ ಮಾಡುವ ಗುರಿಯನ್ನು ಹೊಂದಿದೆ. ದಾವಣಗೆರೆಯ ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಆಡಳಿತ ಮಂಡಳಿ, ಪ್ರಾಂಶುಪಾಲ ಡಾ. ಡಿ.ಬಿ. ಗಣೇಶ್, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ರಾಜ್ಯ ಮಟ್ಟದ ವಸ್ತುಪ್ರದರ್ಶನಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳನ್ನು ಹಾಗೂ ಮಾರ್ಗದರ್ಶಕರನ್ನು ಅಭಿನಂದಿಸಿದ್ದಾರೆ.

# ವಿದ್ಯಾನಗರ ರೋಟರಿ, ಇನ್ನರ್ ವ್ಹೀಲ್‌ನಿಂದ ವೈದ್ಯರ ದಿನಾಚರಣೆ




ದಾವಣಗೆರೆ, ಜು.26- ರೋಟರಿ ಕ್ಲಬ್ ಮತ್ತು ಇನ್ನರ್ ವ್ಹೀಲ್ ಕ್ಲಬ್ ದಾವಣಗೆರೆ ವಿದ್ಯಾನಗರ, ಸಂಯುಕ್ತಾಶ್ರಯದಲ್ಲಿ ವೈದ್ಯರ ದಿನಾಚರಣೆಯನ್ನು ಮಂಗಳವಾರ ವಿದ್ಯಾನಗರದ ರೋಟರಿ ಕ್ಲಬ್‌ನಲ್ಲಿ ಆಚರಿಸಲಾಯಿತು. ಅತಿಥಿಗಳಾಗಿ ಡಾ. ಸಪನ್ ಪಾಟೀಲ್ ಮತ್ತು ಡಾ. ಮಂಗಳ ರವೀಂದ್ರ ಬಣಕಾರ್ ಭಾಗವಹಿಸಿದ್ದರು. ಈ ದಿನಾಚರಣೆಯ ಅಂಗವಾಗಿ ಉಚಿತ ಆರೋಗ್ಯ ತಪಾಸಣೆ ಮತ್ತು ರಕ್ತ ಪರೀಕ್ಷೆ ಮಾಡಲಾಯಿತು. ಕಲ್ಲಪ್ಪ ಹೆಚ್.ಕೆ., ರೋಟರಿ ಪರವಾಗಿ ಅಧ್ಯಕ್ಷತೆ ವಹಿಸಿದ್ದರು. ಇನ್ನರ್ ವ್ಹೀಲ್ ಪರವಾಗಿ ಶ್ರೀಮತಿ ಮಂಜುಳಾ ಕರ್ಜಗಿ ಭಾಗವಹಿಸಿದ್ದರು. ಕಾರ್ಯದರ್ಶಿಯಾಗಿ ಹೆಚ್. ಎಂ. ಜಯಣ್ಣ ಮತ್ತು ಇನ್ನರ್ ವ್ಹೀಲ್ ಕಾರ್ಯದರ್ಶಿ ಪ್ರೇಮಾ ಮಹೇಶ್ವರಪ್ಪ ಮತ್ತು ರೋಟರಿ ಇನ್ನರ್ ವ್ಹೀಲ್‌ನ ಎಲ್ಲಾ ಸದಸ್ಯರು ಭಾಗವಹಿಸಿದ್ದರು. ಗಿರಿಜಾ ಬಿಲ್ಲಳ್ಳಿ ಪ್ರಾರ್ಥನೆ, ವಿಜಯಾ ಕಡೇಕೊಪ್ಪ ಪರಿಚಯ ಮಾಡಿದರು. ಚಂದ್ರಪ್ಪ ನಿರೂಪಿಸಿದರು.

# ಇಂದಿನ ಶಿವಾನುಭವ ಸಂಪದ ಮುಂದೂಡಿಕೆ

ಹಾಲಕೆರೆ ಶ್ರೀ ಅನ್ನದಾನೇಶ್ವರ ಮಠದಲ್ಲಿ ಇಂದು ಸಂಜೆ 6-30 ಕ್ಕೆ ನಡೆಯಬೇಕಿದ್ದ 260 ನೇ ಶಿವಾನುಭವ ಸಂಪದ ಕಾರ್ಯಕ್ರಮವನ್ನು ಮುಂದೂಡಲಾಗಿದೆ ಎಂದು ಮಠದ ಅಧ್ಯಕ್ಷ ಅಥಣಿ ಎಸ್. ವೀರಣ್ಣ, ಪ್ರಧಾನ ಕಾರ್ಯದರ್ಶಿ ಎನ್. ಅಡಿವೆಪ್ಪ ತಿಳಿಸಿದ್ದಾರೆ.

## ಓದುಗರ ಪತ್ರ

# ರಸ್ತೆ ಸರಿಪಡಿಸಿ, ಗುಂಡಿ ಮುಚ್ಚಿಸಿ: ಸ್ಥಳೀಯರ, ಪ್ರಯಾಣಿಕರ ಮನವಿ



ಮಾನ್ಯರೇ,

ನಗರದ ಪಿ.ಬಿ. ರಸ್ತೆಯ ಆರ್.ಎಚ್.ಧರ್ಮಶಾಲೆ ಸಮೀಪದ ಬಿಎಸ್‌ಎನ್‌ಎಲ್ ಕಲ್ಲಿನ ಬಿಲ್ಡಿಂಗ್ ಮುಂಭಾಗ ಇರುವ ವೃತ್ತದಲ್ಲಿ ದೊಡ್ಡ ಗುಂಡಿಯಾಗಿದ್ದು ಬಹಳ ತೊಂದರೆಯಾಗಿದೆ. ಇಲ್ಲಿ ಇರುವ ಗುಂಡಿ ಯಾರಿಗೂ ಸಹ ಕಾಣುವುದಿಲ್ಲ. ಪ್ರತಿದಿನ ಲೆಕ್ಕವಿಲ್ಲದಷ್ಟು ವಾಹನಗಳು, ಸಾರ್ವಜನಿಕರು ಓಡಾಡುವ ಈ ಜಾಗದಲ್ಲಿ ಗುಂಡಿಯಾಗಿದ್ದು, ವಾಹನ ಸವಾರರಿಗೆ ಬಹಳ ತೊಂದರೆಯಾಗಿದೆ. ಈ ಕೂಡಲೇ ಸಂಬಂಧಿಸಿದ ಅಧಿಕಾರಿಗಳು ಸ್ಥಳ ಪರಿಶೀಲಿಸಿ ರಸ್ತೆಯ ಗುಂಡಿಯನ್ನು ಮುಚ್ಚುವ ಮೂಲಕ ಸಾರ್ವಜನಿಕರ ಶಾಪದಿಂದ ಮುಕ್ತರಾಗಬೇಕೆಂದು ಸ್ಥಳೀಯರು ಮನವಿ ಮಾಡಿದ್ದಾರೆ.

ಈ ರಸ್ತೆ ಮಾರ್ಗವಾಗಿ ಸರ್ಕಾರಿ, ಖಾಸಗಿ ಬಸ್ಸುಗಳು, ಶಾಲಾ-ಕಾಲೇಜಿಗೆ ಹೋಗುವ ಬಸ್‌ಗಳು, ಶಾಲಾ-ಕಾಲೇಜು ಮಕ್ಕಳು ಸೇರಿದಂತೆ, ಸುತ್ತಮುತ್ತಲ ಗ್ರಾಮಗಳಿಂದ ಬರುವ ಜನರೂ ಸಹ ಇದೇ ಮಾರ್ಗವಾಗಿ ತೆರಳುತ್ತಾರೆ.ಈಗ ಮಳೆಗಾಲವಾದ ಕಾರಣ ಪ್ರತಿದಿನ ಬಿಟ್ಟೂಬಿಡದೇ ಮಳೆ ಸುರಿಯುತ್ತಿದ್ದು, ಈ ಗುಂಡಿಯಲ್ಲಿ ನೀರು ನಿಂತಿರುವುದು ಯಾರಿಗೂ ಸಹ ಕಾಣುವುದಿಲ್ಲ. ಇಲ್ಲಿ ಪ್ರತಿದಿನ ಹಲವಾರು ಅಪಘಾತಗಳು ಸಂಭವಿಸುತ್ತಿವೆ.

ವಾಹನ ಸವಾರರು ಬಿದ್ದು ಗಾಯ ಮಾಡಿಕೊಂಡಿದ್ದಾರೆ. ಕಾರುಗಳು, ದ್ವಿಚಕ್ರ ವಾಹನ, ಆಟೋಗಳೂ ಸಹ ಇಲ್ಲಿ ಸಿಕ್ಕಿಕೊಂಡು ಚಾಲಕರು ಬಹಳ ತೊಂದರೆ ಅನುಭವಿಸಿದ್ದಾರೆ. ತಕ್ಷಣವೇ ಸಂಬಂಧಿಸಿದ ಅಧಿಕಾರಿಗಳು ಈ ಸಮಸ್ಯೆಯನ್ನು ಗಮನಿಸಿ ಸೂಕ್ತ ರೀತಿಯಾಗಿ ರಸ್ತೆ ಸರಿಪಡಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು.

- ಸ್ಥಳೀಯ ನಾಗರಿಕರು

# ಮಳೆಗಾಲದಲ್ಲಿ ಕಾಡುವ ಶೀತ, ಜ್ವರಕ್ಕೆ ಮನೆ ಮದ್ದು : ಡಾ. ದೇವರಾಜ ಪಟಗೆ



ದಾವಣಗೆರೆ, ಜು. 27 - ಮಳೆಗಾಲದಲ್ಲಿ ಶೀತ, ಜ್ವರ, ಕೆಮ್ಮು ಬರುವುದು ಸಾಮಾನ್ಯವಾಗಿದ್ದು ಜನರು ಮನೆಮದ್ದನ್ನೇ ಬಳಸಿ ಗುಣ ಪಡಿಸಿಕೊಳ್ಳಬಹುದು ಎಂದು ದಾವಣಗೆರೆ ತಾಲ್ಲೂಕು ಆರೋಗ್ಯಾಧಿಕಾರಿ ಡಾ. ದೇವರಾಜ ಪಿ. ಪಟಗೆ ತಿಳಿಸಿದರು.

ಗುರುವಾರ ದಾವಣಗೆರೆ ತಾಲ್ಲೂಕು ಆರೋಗ್ಯಾಧಿಕಾರಿಗಳ ಕಚೇರಿಯಲ್ಲಿ ಜರುಗಿದ ವಸತಿ ನಿಲಯ ಪಾಲಕರಿಗೆ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಕುರಿತು ತರಬೇತಿ ಕಾರ್ಯಾಗಾರವನ್ನು ಉದ್ದೇಶಿಸಿ ಅವರು ಮಾತನಾಡಿದರು.

ಆರೋಗ್ಯ ಇಲಾಖೆಯಿಂದ ಹಲವಾರು ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದ್ದು ಈಗ ಮಳೆಗಾಲವಾಗಿರುವುದರಿಂದ ಶೀತ, ಜ್ವರ, ಕೆಮ್ಮಿನ ಪ್ರಕರಣಗಳೂ ಹೆಚ್ಚಾಗುತ್ತಿವೆ ಹಾಗೂ ಮದ್ರಾಸ್ ಐ ಪ್ರಕರಣಗಳೂ ಬಹಳ ಕಂಡು ಬರುತ್ತಿದ್ದು ಜನರು ಭಯ ಪಡಬೇಕಾಗಿಲ್ಲ ಎಂದರು.

ತಾಲ್ಲೂಕು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಹೆಚ್. ಉಮಾಪತಿ, ಡಾ. ಸ್ನೇಹಾ ಪಿ. ನಾಯ್ಕ್, ಹಾಲಸ್ವಾಮಿ ಎನ್.ಸಿ, ತಂಬಾಕು ನಿಯಂತ್ರಣಾ ಘಟಕದ ದೇವರಾಜ ಉಪಸ್ಥಿತರಿದ್ದರು.

# ರಾಣೇಬೆನ್ನೂರಿನ ಬಿಎಜೆಎಸ್‌ಎಸ್‌ನಲ್ಲಿ ಇಂದು ಪತ್ರಿಕಾ ದಿನಾಚರಣೆ

ಬಿಎಜೆಎಸ್‌ಎಸ್ ಕಾಲೇಜಿನ ಸನದಿ ಸಭಾ ಭವನದಲ್ಲಿ ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದಿಂದ ಇಂದು ಬೆಳಿಗ್ಗೆ ಪತ್ರಿಕಾ ದಿನಾಚರಣೆ ಆಚರಿಸಲಾಗುತ್ತಿದೆ. ಉಪಸಭಾಪತಿ ರುದ್ರಪ್ಪ ಲಮಾಣಿ, ಶಾಸಕ ಪ್ರಕಾಶ ಕೋಳಿವಾಡ ಜೊತೆಗೂಡಿ ಕಾರ್ಯಕ್ರಮದ ಉದ್ಘಾಟನೆ ಮಾಡುವರು. ಸಂಘದ ಅಧ್ಯಕ್ಷ ಎಸ್.ಟಿ. ವೇದಮೂರ್ತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಅತಿಥಿಗಳಾಗಿ ಮಾಜಿ ಶಾಸಕರಾದ ಅರುಣಕುಮಾರ್ ಪೂಜಾರ, ಆರ್. ಶಂಕರ, ಜಿ.ಪಂ. ಮಾಜಿ ಸದಸ್ಯ ಸಂತೋಷ್‌ಕುಮಾರ ಪಾಟೀಲ್, ನಗರಸಭೆ ಮಾಜಿ ಸದಸ್ಯ ಮಂಜುನಾಥ ಗೌಡ ಶಿವಣ್ಣನವರ ಆಗಮಿಸುವರು. ಕಾಲೇಜು ಆಡಳಿತಾಧಿಕಾರಿ ಆರ್.ಎಂ.ಕುಬೇರಪ್ಪ, ಕಾನಿಪ ರಾಜ್ಯ ಕಾರ್ಯದರ್ಶಿ ನಿಂಗಪ್ಪ ಚಾವಡಿ, ಜಿಲ್ಲಾಧ್ಯಕ್ಷ ನಾಗರಾಜ ಕುರುವತ್ತೇರ ಭಾಗವಹಿಸುವರು. ಕನ್ನಡಪ್ರಭ ಪತ್ರಿಕೆ ಸ್ಥಳೀಯ ಸಂಪಾದಕ ಮಲ್ಲಿಕಾರ್ಜುನ ಸಿದ್ದಣ್ಣ ಪತ್ರಿಕೋದ್ಯಮ ಕುರಿತು ಮಾತನಾಡುವರು.


## ನಮೂನೆ-126 ನಿಯಮ 14 (3)

## ಚುನಾವಣಾ ಸೂಚನೆ

ಶ್ರೀ ವಿಶ್ವಬಂಧು ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ, ಹರಿಹರ, ದಾವಣಗೆರೆ ಜಿಲ್ಲೆ, ಇದರ ಆಡಳಿತ ಮಂಡಲಿಗೆ ದಿನಾಂಕ : 13.08.2023 ರಿಂದ ಮುಂದಿನ ಐದು (5) ವರ್ಷಗಳ ಅವಧಿಗೆ ಚುನಾವಣೆ ನಡೆಸಲು ಮಾನ್ಯ ಸಹಕಾರ ಸಂಘಗಳ ಜಂಟಿ ನಿಬಂಧಕರು ಹಾಗೂ ಚುನಾವಣಾಧಿಕಾರಿಗಳು, ಬೆಂಗಳೂರು ಪ್ರಾಂತ, ಬೆಂಗಳೂರು ಇವರ ಆದೇಶ ಸಂಖ್ಯೆ : ಜೆಆರ್‌ಬಿ/ಚುನಾವಣೆ/ ರಿಆನೇ/67/2023-24 ದಿನಾಂಕ : 09.06.2023 ರನ್ವಯ ಸಂಘದ ಚುನಾವಣೆಯನ್ನು ದಿನಾಂಕ : 13.08.2023 ರಂದು ಸಂಘದ ಕಛೇರಿಯಲ್ಲಿ ಬೆಳಿಗ್ಗೆ 9.00 ಗಂಟೆಯಿಂದ ಸಾಯಂಕಾಲ 04.00 ಗಂಟೆವರೆಗೆ ಜರುಗಿಸಲಾಗುವುದೆಂದು ನೀಡಲಾದ ನೋಟೀಸ್

## ಚುನಾವಣಾ ವೇಳಾಪಟ್ಟಿ

**ಚುನಾಯಿಸತಕ್ಕ ಆಡಳಿತ ಮಂಡಲಿ ನಿರ್ದೇಶಕರುಗಳ ಒಟ್ಟು 15 ಸ್ಥಾನಗಳು**

ಚುನಾಯಿಸತಕ್ಕ ನಿರ್ದೇಶಕರುಗಳ ಒಟ್ಟು 15 ಸ್ಥಾನಗಳು, ಇದರಲ್ಲಿ ಸಾಮಾನ್ಯ-09 ಸ್ಥಾನಗಳು, ಪರಿಶಿಷ್ಟ ಜಾತಿ - 01 ಸ್ಥಾನ, ಪರಿಶಿಷ್ಟ ಪಂಗಡ-01 ಸ್ಥಾನ, ಮಹಿಳಾ -02 ಸ್ಥಾನಗಳು, ಹಿಂದುಳಿದ ಪ್ರವರ್ಗದಲ್ಲಿ ಎ-1 ಸ್ಥಾನ, ಬಿ-1 ಸ್ಥಾನ, ಮೀಸಲಿರಿಸಲಾಗಿದೆ.

| ಕ್ರ.ಸಂ. | ಚುನಾವಣಾ ಕಾರ್ಯಸೂಚಿ | ದಿನಾಂಕ, ವಾರ, ಸಮಯ | ನಿಯಮ | ವಿವರ ಮತ್ತು ಸ್ಥಳ |
|---|---|---|---|---|
| 01 | ಇಚ್ಛೆಯುಳ್ಳ ಅಭ್ಯರ್ಥಿಗಳಿಂದ ನಾಮ ಪತ್ರ ಸಲ್ಲಿಸಲು ಆರಂಭ ದಿನಾಂಕ. | ದಿ. : 29.07.2023ನೇ ಶನಿವಾರ ಬೆಳಿಗ್ಗೆ 11 .00 ರಿಂದ ಮಧ್ಯಾಹ್ನ 3.00 ಘಂಟೆಯವರೆಗೆ. | | ಸಂಘದ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿ/ ಸಹಾಯಕ ರಿಟರ್ನಿಂಗ್ ಅಧಿಕಾರಿಗಳಿಗೆ. |
| 02 | ಇಚ್ಛೆಯುಳ್ಳ ಅಭ್ಯರ್ಥಿಗಳಿಂದ ನಾಮ ಪತ್ರ ಸಲ್ಲಿಸಲು ಕೊನೆಯ ದಿನಾಂಕ | ದಿ. : 05.08.2023ನೇ ಶನಿವಾರ ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 3.00 ಘಂಟೆಯವರೆಗೆ. | 14 (ಎ) | ಸಂಘದ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿ/ ಸಹಾಯಕ ರಿಟರ್ನಿಂಗ್ ಅಧಿಕಾರಿಗಳಿಗೆ. |
| 03 | ರಿಟರ್ನಿಂಗ್ ಅಧಿಕಾರಿಗಳಿಂದ ನಾಮಪತ್ರಗಳ ಪರಿಶೀಲನೆ. | ದಿ. : 06.08.2023ನೇ ಭಾನುವಾರ ಬೆಳಿಗ್ಗೆ 11.00 ರಿಂದ ಪರಿಶೀಲನೆ ಮುಗಿಯುವವರೆಗೆ. | 14 (ಬಿ) | ಸಂಘದ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಗಳಿಂದ. |
| 04 | ರಿಟರ್ನಿಂಗ್ ಅಧಿಕಾರಿಗಳಿಂದ ಕ್ರಮಬದ್ಧವಾಗಿ ನಾಮ ನಿರ್ದೇಶನ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ. | ದಿ. : 06.08.2023ನೇ ಭಾನುವಾರ ನಾಮನಿರ್ದೇಶನ ಪತ್ರಗಳ ಪರಿಶೀಲನೆ ನಂತರ. | 14 ಬಿ (4) | ಸಂಘದ ಸೂಚನಾ ಫಲಕದಲ್ಲಿ ರಿಟರ್ನಿಂಗ್ ಅಧಿಕಾರಿಗಳಿಂದ. |
| 05 | ಸ್ಪರ್ಧಿಸಿರುವ ಅಭ್ಯರ್ಥಿಗಳಿಂದ ಉಮೇದುವಾರಿಕೆಯನ್ನು ವಾಪಸ್ಸು ಪಡೆಯಲು ಕೊನೆ ದಿನಾಂಕ : | ದಿ. : 07.08.2023ನೇ ಸೋಮವಾರ ಮಧ್ಯಾಹ್ನ 3.00 ಘಂಟೆಯೊಳಗೆ. | 14 (ಸಿ) | ಸಂಘದ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಗಳಿಗೆ. |
| 06 | ರಿಟರ್ನಿಂಗ್ ಅಧಿಕಾರಿಗಳಿಂದ ಸ್ಪರ್ಧೆಯಲ್ಲಿರುವ ಸ್ಪರ್ಧಿ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ. | ದಿ. : 07.08.2023ನೇ ಸೋಮವಾರ ಮಧ್ಯಾಹ್ನ 3.00 ಘಂಟೆಯ ನಂತರ. | 14 (ಡಿ) | ಸಂಘದ ಕಛೇರಿಯ ಸೂಚನಾ ಫಲಕದಲ್ಲಿ ರಿಟರ್ನಿಂಗ್ ಅಧಿಕಾರಿಗಳಿಂದ. |
| 07 | ರಿಟರ್ನಿಂಗ್ ಅಧಿಕಾರಿಗಳಿಂದ ಅಭ್ಯರ್ಥಿಗಳಿಗೆ ಚುನಾವಣಾ ಚಿಹ್ನೆಗಳನ್ನು ಹಂಚಿಕೆ ಮಾಡುವುದು | ದಿ. : 07.08.2023ನೇ ಸೋಮವಾರ ಮಧ್ಯಾಹ್ನ 4.30 ಘಂಟೆ ನಂತರ. | 14(ಇ) | ಸಂಘದ ಕಛೇರಿಯ ಸೂಚನಾ ಫಲಕದಲ್ಲಿ ರಿಟರ್ನಿಂಗ್ ಅಧಿಕಾರಿಗಳಿಂದ. |
| 08 | ಸ್ಪರ್ಧೆಯಲ್ಲಿರುವ ಸ್ಪರ್ಧಿ ಅಭ್ಯರ್ಥಿಗಳ ಪಟ್ಟಿಯನ್ನು ಚುನಾವಣಾ ಚಿಹ್ನೆಯೊಂದಿಗೆ ಪ್ರಕಟಿಸುವುದು. | ದಿ. : 08.08.2023ನೇ ಮಂಗಳವಾರ ಮಧ್ಯಾಹ್ನ 4.30 ಘಂಟೆ ನಂತರ. | 14 (ಇ) ಮತ್ತು (ಎಫ್) | ಸಂಘದ ಕಛೇರಿಯ ಸೂಚನಾ ಫಲಕದಲ್ಲಿ ರಿಟರ್ನಿಂಗ್ ಅಧಿಕಾರಿಗಳಿಂದ. |
| 09 | ಮತದಾನದ ದಿನಾಂಕ ಮತ್ತು ಸಮಯ | ದಿ. : 13.08.2023ನೇ ಭಾನುವಾರ ಬೆಳಿಗ್ಗೆ 09.00 ರಿಂದ ಮಧ್ಯಾಹ್ನ 4.00 ಘಂಟೆಯವರೆಗೆ. | | ಸಂಘದ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಗಳಿಂದ ಹಾಗೂ ನೇಮಿಸಲ್ಪಟ್ಟ ಸಿಬ್ಬಂದಿಯವರಿಂದ. |
| 10 | ಮತಗಳ ಎಣಿಕೆ ದಿನಾಂಕ ಮತ್ತು ಸಮಯ | ದಿನಾಂಕ : 13.08.2023ನೇ ಭಾನುವಾರ ಮತದಾನ ಮುಗಿದ ನಂತರ. | | ಸಂಘದ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಗಳಿಂದ ಹಾಗೂ ನೇಮಿಸಲ್ಪಟ್ಟ ಸಿಬ್ಬಂದಿಯವರಿಂದ. |
| 11 | ರಿಟರ್ನಿಂಗ್ ಅಧಿಕಾರಿಗಳಿಂದ ಚುನಾವಣೆ ಫಲಿತಾಂಶ ಘೋಷಣೆ | ದಿನಾಂಕ : 13.08.2023ನೇ ಭಾನುವಾರ ಮತ ಎಣಿಕೆ ಮುಗಿದ ನಂತರ. | | ಸಂಘದ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಗಳಿಂದ. |

ಸಹಿ/- (ಸುನೀತ ಹೆಚ್.)

ಸ್ಥಳ : ಹರಿಹರ.
ದಿನಾಂಕ : 26.07.2023

ರಿಟರ್ನಿಂಗ್ ಅಧಿಕಾರಿ, ಶ್ರೀ ವಿಶ್ವಬಂಧು ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿ. ಹರಿಹರ.
ಹಾಗೂ ಸಹಕಾರ ಅಭಿವೃದ್ಧಿ ಅಧಿಕಾರಿ, ಹರಿಹರ.

# ಧಾನ್ಯಗಳ ಮೇಲೆ ರಷ್ಯಾದ ಬಾಂಬ್..!

**ಜಾಗತಿಕವಾಗಿ ಆಹಾರ ಬೆಲೆ ಏರುಮುಖ**

ನವದೆಹಲಿ, ಜು. 27 - ಭಾರತ ಬಾಸ್ಮತಿ ಯೇತರ ಅಕ್ಕಿ ರಫ್ತು ನಿಷೇಧಿಸಿದಾಗ ಅಮೆರಿಕದಲ್ಲಿ ಭಾರತೀಯ ಮೂಲದವರು ಅಕ್ಕಿ ಗಾಗಿ ನೂಕು ನುಗ್ಗಲು ನಡೆಸಿದ್ದು ಸುದ್ದಿ ಮಾಡಿತ್ತು. ಇದೇ ವೇಳೆ, ಉಕ್ರೇನ್ ಧಾನ್ಯಗಳ ಮೇಲೆ ರಷ್ಯಾ ಉರಿದು ಬಿದ್ದಿರುವುದು ವಿಶ್ವದೆಲ್ಲೆಡೆ ಪರಿಣಾಮ ಬೀರುವ ಸಾಧ್ಯತೆ ಕಂಡು ಬರುತ್ತಿದೆ.

ಆಹಾರ ಧಾನ್ಯಗಳಿಗೆ ಸಂಬಂಧಿಸಿದಂತೆ ರಷ್ಯಾ ಹಾಗೂ ಉಕ್ರೇನ್‌ಗಳು ಒಪ್ಪಂದ ಮಾಡಿಕೊಂಡಿ ದ್ದವು. ಇದು ಜಾಗತಿಕವಾಗಿ ಆಹಾರ ಧಾನ್ಯಗಳ ಸ್ಥಿರತೆಗೆ ನೆರವಾಗಿತ್ತು. ಆದರೆ, ಕಳೆದ ಜುಲೈ 17ರಂದು ಒಪ್ಪಂದದಿಂದ ರಷ್ಯಾ ಹೊರ ಬಂದಿತ್ತು.

ನಂತರ ಸಾವಿರಾರು ಟನ್ ಆಹಾರ ಧಾನ್ಯದ ಮೇಲೆ ರಷ್ಯಾ ಬಾಂಬ್ ಸುರಿದಿದೆ. ಉಕ್ರೇನ್ ಬಂದರುಗಳಿಂದ ಆಹಾರ ಧಾನ್ಯ ಹೊರ ತರುವುದು ಕಠಿಣವಾಗುತ್ತಿದೆ. ಇದು ಜಾಗತಿಕವಾಗಿ ಆಹಾರ ಧಾನ್ಯದ ಮೇಲೆ ಒತ್ತಡ ಹೆಚ್ಚಿಸಿದೆ.

**ಆಹಾರ ಕಣಜ :** ಯುರೋಪ್‌ಗೆ ಉಕ್ರೇನ್ ಆಹಾರ ಧಾನ್ಯದ ಕಣಜದಂತಿದೆ. ಬಾರ್ಲಿ, ಸೂರ್ಯಕಾಂತಿ, ಮೆಕ್ಕೆಜೋಳ ವನ್ನು ಉಕ್ರೇನ್ ಪ್ರಮುಖವಾಗಿ ರಫ್ತು ಮಾಡುತ್ತಿದೆ.

ಮಧ್ಯ ಪ್ರಾಚ್ಯ, ಉತ್ತರ ಆಫ್ರಿಕಾ ಹಾಗೂ ಚೀನಾಗಳಿಗೂ ಉಕ್ರೇನ್ ಆಹಾರ ತಲುಪುತ್ತಿದೆ. 2022ಕ್ಕೆ ಮುಂಚೆ ಸುಮಾರು 40 ಕೋಟಿ ಜನರು ಆಹಾರ ಧಾನ್ಯಗಳಿಗಾಗಿ ಉಕ್ರೇನ್ ಅವಲಂಬಿಸಿದ್ದರು. ವಿಶ್ವದ ಮೂರನೇ ಒಂದರಷ್ಟು ಫಲವತ್ತಾದ ಭೂಮಿ ಉಕ್ರೇನ್‌ನಲ್ಲಿದೆ ಎಂದು ಅಂದಾಜಿಸಲಾಗಿದೆ.

ಕೊರೊನಾ ಹಾಗೂ ಉಕ್ರೇನ್ ಸಮರದ ನಂತರ ಜಾಗತಿಕವಾಗಿ ಹಸಿವಿನ ಸಮಸ್ಯೆ ಹೆಚ್ಚಾಗಿದೆ. 2000ದ ನಂತರ ಹಸಿವಿನ ಪ್ರಮಾಣ ಅತಿ ಹೆಚ್ಚಿನ ಹಂತಕ್ಕೆ ತಲುಪಿದೆ ಎಂದು ವಿಶ್ವ ಸಂಸ್ಥೆಯ ಇತ್ತೀಚಿನ ವರದಿ ತಿಳಿಸಿದೆ.

**ರಷ್ಯಾ ಪಟ್ಟು :** ಜೂನ್ 2022ರಲ್ಲಿ 25 ದಶಲಕ್ಷ ಟನ್ ಆಹಾರ ಧಾನ್ಯ ಉಕ್ರೇನ್‌ನಲ್ಲಿ ಸಿಲುಕಿತ್ತು. ಈ ಸಮಸ್ಯೆ ಬಗೆಹರಿಸಲು ವಿಶ್ವಸಂಸ್ಥೆ ಹಾಗೂ ಟರ್ಕಿಗಳು ಮಧ್ಯಸ್ಥಿಕೆ ವಹಿಸಿ ಉಕ್ರೇನ್ ಹಾಗೂ ರಷ್ಯಾ ನಡುವೆ ಆಹಾರ ಧಾನ್ಯ ಒಪ್ಪಂದ ಮಾಡಿಸಿದ್ದವು. ಇದರಿಂದಾಗಿ ಜುಲೈ 2022ರ ನಂತರ ಉಕ್ರೇನ್ ಆಹಾರ ಧಾನ್ಯ ಪೂರೈಕೆ ಸುಗಮವಾಗಿತ್ತು. ಮೂಲ ಒಪ್ಪಂದ ಕೇವಲ 120 ದಿನಗಳದ್ದಾಗಿತ್ತಾದರೂ, ನಂತರ ಹಲವು ಬಾರಿ ನವೀಕರಿಸಲಾಗಿತ್ತು.

ಆದರೆ, ತಾನು ಹೆಚ್ಚು ಧಾನ್ಯ ಹಾಗೂ ರಸಗೊಬ್ಬರ ರಫ್ತು ಮಾಡಲು ಅವಕಾಶ ನೀಡಬೇಕು ಎಂದು ರಷ್ಯಾ ಪಟ್ಟು ಹಿಡಿದಿದೆ. ಅಲ್ಲದೇ, ಆಹಾರ ಧಾನ್ಯಗಳು ಬಡ ದೇಶಗಳಿಗೆ ತಲುಪುತ್ತಿಲ್ಲ, ಇದರಿಂದಾಗಿ ಒಪ್ಪಂದದ ಮೂಲ ಉದ್ದೇಶವೇ ಈಡೇರಿಲ್ಲ ಎಂದು ರಷ್ಯಾ ಹೇಳಿದೆ. ಒಪ್ಪಂದದ ಹಿಂದೆ ಸರಿದ ನಂತರ ಉಕ್ರೇನ್ ಗೋದಾಮುಗಳು ಹಾಗೂ ಆಹಾರ ಧಾನ್ಯ ರಫ್ತು ಮಾಡುವ ಬಂದರುಗಳ ಮೇಲೆ ದಾಳಿಯನ್ನೂ ನಡೆಸಿದೆ.

**ಬೆಲೆ ಏರಿಕೆ :** ನಂತರದಲ್ಲಿ ಜಾಗತಿಕವಾಗಿ ಗೋಧಿ ಹಾಗೂ ಮೆಕ್ಕೆಜೋಳದ ಬೆಲೆ ಶೇ.20ರವರೆಗೆ ಏರಿಕೆ ಕಂಡಿದೆ. ಆಹಾರ ಧಾನ್ಯಗಳ ಪೂರೈಕೆ ಬಗ್ಗೆ ಅನಿಶ್ಚಿತತೆಯೂ ಉಂಟಾಗಿದೆ.

ಜಾಗತಿಕವಾಗಿ ಗೋಧಿ ಮಾರುಕಟ್ಟೆಯಲ್ಲಿ ಉಕ್ರೇನ್ ಶೇ.10ರ ಪಾಲು ಹೊಂದಿದೆ. ಮೆಕ್ಕೆಜೋಳ ಮಾರುಕಟ್ಟೆಯಲ್ಲಿ ಶೇ.15 ಹಾಗೂ ಬಾರ್ಲಿ ಮಾರುಕಟ್ಟೆಯಲ್ಲಿ ಶೇ.13ರ ಪಾಲು ಹೊಂದಿದೆ ಎಂದು ಯುರೋಪ್ ಆಯೋಗ ತಿಳಿಸಿದೆ. ಇದರಲ್ಲಿ ಅತಿ ಹೆಚ್ಚಿನ ಭಾಗ ಕಪ್ಪು ಸಮುದ್ರ ಬಂದರಿನ ಮೂಲಕ ರವಾನೆಯಾಗುತ್ತದೆ. ಈ ಬಂದರುಗಳ ಮೇಲೆ ದಾಳಿ ನಡೆಸಿರುವುದು ಸಮಸ್ಯೆ ಹೆಚ್ಚಿಸಿದೆ.

**ಪರ್ಯಾಯ ದುಬಾರಿ :** ಸಮುದ್ರ ಮಾರ್ಗ ಹೊರತಾಗಿಯೂ ರಸ್ತೆ, ನದಿ ಹಾಗೂ ರೈಲುಗಳ ಮೂಲಕ ಆಹಾರ ಧಾನ್ಯಗಳ ಪೂರೈಕೆ ಸಾಧ್ಯವಿದೆ. ಉಕ್ರೇನ್ ಗಡಿಯಲ್ಲಿರುವ ಪೋಲ್ಯಾಂಡ್, ಸ್ಲೋವೇಕಿಯಾ, ಹಂಗೇರಿ, ರೊಮೇನಿಯ ಹಾಗೂ ಬಲ್ಗೇರಿಯಾಗಳು ಧಾನ್ಯ ಪೂರೈಕೆಗೆ ಸಹಕರಿಸುವು ದಾಗಿ ಹೇಳಿವೆ. ಆದರೆ, ಈ ಮಾರ್ಗಗಳ ಮೂಲಕ ಆಹಾರ ಪೂರೈಕೆ ದುಬಾರಿಯಾಗಲಿದೆ.

# ಹರಪನಹಳ್ಳಿ ತಾಲ್ಲೂಕಿನಲ್ಲಿ ಮಳೆ, ಬೆಳೆ ಹಾನಿ

## ನದಿ ತೀರದ ಗ್ರಾಮಗಳಿಗೆ ಶಾಸಕರಾದ ಲತಾ ಭೇಟಿ, ಬೆಳೆ ಹಾನಿ ಪರಿಶೀಲನೆ





ಹರಪನಹಳ್ಳಿ, ಜು. 27 - ಕಳೆದ ಒಂದು ವಾರದಿಂದ ಸತತವಾಗಿ ಸುರಿಯುತ್ತಿರುವ ಮಳೆಯಿಂದಾಗಿ ತಾಲ್ಲೂಕಿನ ವಿವಿಧೆಡೆ 50ಕ್ಕೂ ಹೆಚ್ಚು ಮನೆಗಳು ಜಖಂಗೊಂಡಿದ್ದು, ಅಲ್ಪ ಪ್ರಮಾಣದಲ್ಲಿ ಬೆಳೆ ಹಾನಿಯಾಗಿವೆ.

ಹಲುವಾಗಲು 11, ಕಡತಿ 12, ದುಗ್ಗಾವತಿ 4 ಸೇರಿದಂತೆ 50ಕ್ಕೂ ಹೆಚ್ಚು ಮನೆಗಳು ಭಾಗಶಃ ಜಖಂಗೊಂಡಿವೆ. ಜಂಬುಲಿಂಗನಹಳ್ಳಿಯಲ್ಲಿ ದಾಸಪ್ಪ ಎನ್ನುವವರ ಮನೆ ಗೋಡೆ ಕುಸಿದಿದ್ದು ಈ ವೇಳೆ ಮನೆಯಲ್ಲಿ ಭಾಗ್ಯಮ್ಮ ಗಾಯಗೊಂಡು ದಾವಣಗೆರೆ ಜಿಲ್ಲಾ ಆಸ್ಪತ್ರೆಗೆ ದಾಖಲಾಗಿದ್ದಾರೆ.

ದುಗ್ಗಾವತಿ ಬಳಿ 1 ಎಕರೆ ಟೊಮ್ಯಾಟೊ ಬೆಳೆಗೆ ಹಾನಿಯಾಗಿದೆ ಹಾಗೂ ತಾವರಗುಂದಿ ಬಳಿ 1 ಎಕರೆ ಬೆಂಡೆಕಾಯಿ ಬೆಳೆಗೆ ಹಾನಿಗೀಡಾಗಿದೆ. ಯರಬಾಳು ಹಾಗೂ ಮತ್ತೂರು ಗ್ರಾಮಗಳ ಬಳಿ ಸಾಕಷ್ಟು ಮೆಕ್ಕೆಜೋಳ ಬೆಳೆ ಹಾನಿಯಾಗಿದ್ದು, ತಾಲೂಕಿನಾದ್ಯಂತ ಒಟ್ಟು 198 ಶಾಲಾ ಕೊಠಡಿಗಳು ಶಿಥಿಲಗೊಂಡು ಸೋರುತ್ತಿವೆ.

**ಶಾಸಕರ ಭೇಟಿ :** ಶಾಸಕರಾದ ಶ್ರೀಮತಿ ಎಂ.ಪಿ. ಲತಾ ಮಲ್ಲಿಕಾರ್ಜುನ್ ಅವರು ಬುಧವಾರ ದುಗ್ಗಾವತಿ, ವಟ್ಲಹಳ್ಳಿ, ಕಡತಿ, ನಂದ್ಯಾಲ, ನಿಟ್ಟೂರು, ನಿಟ್ಟೂರು ಬಸಾಪುರ, ತಾವರಗುಂದಿ, ಹಲುವಾಗಲು ಗರ್ಭಗುಡಿ, ಕಣಿವಿ ಸೇರಿದಂತೆ ನದಿ ತೀರದ ಹಲವು ಗ್ರಾಮಗಳಿಗೆ ಭೇಟಿ ನೀಡಿ, ಮಳೆ ಹಾನಿಯನ್ನು ಪರಿಶೀಲಿಸಿದರು.

ದುಗ್ಗಾವತಿಯಲ್ಲಿ ಶಿಥಿಲಗೊಂಡ ಓವರ್‌ಹೆಡ್ ಟ್ಯಾಂಕ್ ನೋಡಿದ ಅವರು, ಸ್ಥಳೀಯ ಗ್ರಾಪಂ ಪಿಡಿಓ ಅವರಿಗೆ ಮುಂಜಾಗೃತಾ ಕ್ರಮವಾಗಿ ಓವರ್ ಹೆಡ್ ಟ್ಯಾಂಕನ್ನು ನೆಲಸಮಗೊಳಿಸಲು ಸೂಚಿಸಿದರು. ಹಲುವಾಗಲು ಬಳಿ ಸಹ ಶಿಥಿಲಗೊಂಡ ಓವರ್‌ಹೆಡ್ ಟ್ಯಾಂಕನ್ನು ಪರಿಶೀಲಿಸಿದರು.

ವಟ್ಲಹಳ್ಳಿ ಸೇರಿದಂತೆ ನದಿ ತೀರದ ಗ್ರಾಮಗಳ ಸರ್ಕಾರಿ ಶಾಲೆಗಳಲ್ಲಿನ ಶಿಥಿಲಗೊಂಡ ಕೊಠಡಿಗಳನ್ನು ವೀಕ್ಷಿಸಿ, ಈ ಕೊಠಡಿಗಳ ದುರಸ್ತಿಯನ್ನು ಪ್ರಕೃತಿ ವಿಕೋಪದಡಿ ಮಾಡಿಸಲು ಪಂಚಾಯತ್ ರಾಜ್ ಇಂಜಿನಿಯರ್ ಉಪವಿಭಾಗದ ಎಇಇ ನಾಗಪ್ಪ ಅವರಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕರು, ಬೆಳೆಹಾನಿ ಸಮೀಕ್ಷೆಯನ್ನು ನಡೆಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಮನೆ ಮತ್ತು ಬೆಳೆ ಹಾನಿಗೆ ಸಂಬಂಧಿಸಿದಂತೆ ಪರಿಹಾರಕ್ಕೆ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದಿದ್ದೇನೆ ಎಂದು ಹೇಳಿದರು.

ಮಳೆ ಇನ್ನೂ ಎರಡು ದಿನಗಳು ಬರುವ ನಿರೀಕ್ಷೆ ಇದ್ದು, ನದಿ ತೀರದ ಜನರು ಎಚ್ಚರಿಕೆಯಿಂದ ಇರಬೇಕು ಹಾಗೂ ಶಾಲೆಗಳಲ್ಲಿ ಶಿಥಿಲಗೊಂಡ ಕೊಠಡಿಗಳಲ್ಲಿ ಮಕ್ಕಳನ್ನು ಕೂರಿಸದಂತೆ ಅಧಿಕಾರಿಗಳು ಹಾಗೂ ಶಿಕ್ಷಕರು ಮುಂಜಾಗೃತಾ ಕ್ರಮವಹಿಸಬೇಕು ಎಂದು ಅವರು ಹೇಳಿದರು.

ನದಿ ತೀರದ ಗ್ರಾಮಗಳಲ್ಲಿ ಗ್ರಾಮಸ್ಥರು ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕೈಗೊಳ್ಳಲು ಮನವಿ ಮಾಡಿಕೊಂಡಾಗ ಶಾಸಕರು ಈ ಬಗ್ಗೆ ಹಂತ ಹಂತವಾಗಿ ಅಭಿವೃದ್ಧಿ ಕೈಗೊಳ್ಳಲು ಕ್ರಮ ವಹಿಸುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ತಾಪಂ ಇಓ ಕೆ.ಆರ್. ಪ್ರಕಾಶ್, ಸಹಾಯಕ ಕೃಷಿ ನಿರ್ದೇಶಕ ಮಂಜುನಾಥ ಗೊಂದಿ, ಕ್ಷೇತ್ರ ಶಿಕ್ಷಣಾಧಿಕಾರಿ ಯು. ಬಸವರಾಜಪ್ಪ, ಪಂಚಾಯತ್ ರಾಜ್ ಇಲಾಖೆಯ ಎಇಇ ನಾಗಪ್ಪ, ವಲಯ ಅರಣ್ಯಾಧಿಕಾರಿ ಮಲ್ಲಪ್ಪ, ಪಿಡಬ್ಲ್ಯೂಡಿ ಎಇಇ ಸತೀಶ್ ಪಾಟೀಲ್, ತೋಟಗಾರಿಕೆ ಸಹಾಯಕ ನಿರ್ದೇಶಕ ಜಯಸಿಂಹ, ರವಿಕುಮಾರ, ಇಸಿಓ ಮಂಜುನಾಥ ಗಿರಜ್ಜಿ, ಹಲುವಾಗಲು ಪಿಎಸ್ಐ ಆರ್.ನಾಗರತ್ನ, ಗ್ರಾಪಂ ಅಭಿವೃದ್ಧಿ ಅಧಿಕಾರಿಗಳು, ಗ್ರಾಮಲೆಕ್ಕಾಧಿಕಾರಿಗಳು ಸೇರಿದಂತೆ, ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

## ಬ್ಯಾಂಕ್ ಅಧಿಕಾರಿ ಎಂದು ಹೇಳಿ ವಂಚನೆ

ದಾವಣಗೆರೆ, ಜು. 27 - ಎಸ್.ಬಿ.ಐ. ಬ್ಯಾಂಕ್ ಅಧಿಕಾರಿ ಎಂದು ಕರೆ ಮಾಡಿ ವ್ಯಕ್ತಿಯೊಬ್ಬರನ್ನು ನಂಬಿಸಿ, 89,999 ರೂ.ಗಳನ್ನು ವಂಚಿಸಿದ ಘಟನೆ ನಡೆದಿದೆ.

ಜಗಳೂರು ತಾಲ್ಲೂಕು ಹೊಸಕೆರೆ ಗ್ರಾಮದ ಮಂಜುನಾಥ್ ವಂಚನೆಗೊಳಗಾದ ವ್ಯಕ್ತಿ. ಇವರ ಮೊಬೈಲ್‌ಗೆ ಕರೆ ಮಾಡಿದ ಅಪರಿಚಿತ ವ್ಯಕ್ತಿ ತಾನು ಎಸ್‌ಬಿಐ ಬ್ಯಾಂಕ್ ಅಧಿಕಾರಿಯಾಗಿದ್ದು, ನಿಮ್ಮ ಕ್ರೆಡಿಟ್ ಕಾರ್ಡ್ ಶಾಶ್ವತವಾಗಿ ಮುಕ್ತಾಯ ಮಾಡುತ್ತೇನೆ ಎಂದು ಹೇಳಿ, ಅವರಿಂದ ಕಾರ್ಡ್ ಮಾಹಿತಿ ಹಾಗೂ ಒಟಿಪಿ ಪಡೆದು ಹಣ ವರ್ಗಾವಣೆ ಮಾಡಿಕೊಂಡಿದ್ದಾರೆ. ಈ ಕುರಿತು ಸಿಇಎನ್ ಅಪರಾಧ ಠಾಣೆಯಲ್ಲಿ ದೂರು ದಾಖಲಾಗಿದೆ.

**ಭದ್ರಾ ಜಲಾಶಯ**

ಇಂದಿನ ಮಟ್ಟ : 158 ಅಡಿ
ಒಳ ಹರಿವು: 28296 ಕ್ಯೂಸೆಕ್ಸ್
ಹೊರ ಹರಿವು : 183 ಕ್ಯೂಸೆಕ್ಸ್
ಹಿಂದಿನ ವರ್ಷ : 184' 6 ಇಂಚು

# ಆಮಿಷದಿಂದ ಯುವ ಸಮೂಹ ದುಡಿಮೆಯಿಂದ ವಿಮುಖ

## ಜಗಳೂರಿನ ಕಾರ್ಯಕ್ರಮದಲ್ಲಿ ಹೆಬ್ಬಾಳು ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ ಕಳವಳ



ಜಗಳೂರು, ಜು.27 - ದೇಶದ ಪ್ರಸ್ತುತ ರಾಜಕೀಯ ವ್ಯವಸ್ಥೆಯಲ್ಲಿ ತಮ್ಮ ಸ್ವಾರ್ಥಕ್ಕಾಗಿ ಹಣ, ಹೆಂಡ ಆಮಿಷವೊಡ್ಡಿ ಚುನಾವಣೆ ನಡೆಸುತ್ತಾರೆ. ಇದರಿಂದ ಯುವ ಸಮೂಹ ದುಡಿಮೆಯಿಂದ ವಿಮುಖಗೊಂಡು. ನಿರುದ್ಯೋಗಿ, ಸೋಮಾರಿಗಳಾಗುತ್ತಿರುವುದು ಆತಂಕಕಾರಿ ಬೆಳವಣಿಗೆ ಎಂದು ಹೆಬ್ಬಾಳ್ ವಿರಕ್ತಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ ಕಳವಳ ವ್ಯಕ್ತಪಡಿಸಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿದ್ದ ಮದ್ಯವರ್ಜನೆ ಶಿಬಿರದ ಸಮಾರೋಪ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಯುವ ಸಮೂಹ ಆಮಿಷಕ್ಕೊಳಗಾಗಿ ದುಶ್ಚಟಕ್ಕೆ ಬಲಿಯಾಗದೇ ನಿತ್ಯ ಕಾಯಕದಲ್ಲಿ ತೊಡಗಿಕೊಂಡು ದುಡಿಮೆ ಹಣದಿಂದ ಸುಂದರ ಬದುಕು ಕಟ್ಟಿಕೊಳ್ಳಬೇಕು ಎಂದು ಶ್ರೀಗಳು ಕಿವಿಮಾತು ಹೇಳಿದರು.

ಧರ್ಮಸ್ಥಳ ಸಂಘದ ಆರ್ಥಿಕ ಸಾಲಸೌಲಭ್ಯದ ಜೊತೆಗೆ ಸಮಾಜಮುಖಿ ಕಾರ್ಯಗಳು ಶ್ಲಾಘನೀಯ. ಧರ್ಮಸ್ಥಳ ಸಂಘ ಋಷಿ ಆಶ್ರಮವಿದ್ದಂತೆ, ಸುಜ್ಞಾನಿಗಳ ಸಂಘ ಮಾಡಿ ಮದ್ಯವ್ಯಸನಿಗಳು ಅಂಧಕಾರದ ಬದುಕಿನಿಂದ ಬೆಳಕಿನೆಡೆಗೆ ಸಾಗಬೇಕು.

12ನೇ ಶತಮಾನದ ಬಸವಣ್ಣನವರ ಅನುಭವ ಮಂಟಪ ಆಧುನಿಕ ಸಮಾಜಕ್ಕೆ ಮಾದರಿಯಾಗಬೇಕು. ಸಂಘ, ಸಂಸ್ಥೆಗಳು ಲಾಭಾಂಶದಲ್ಲಿ ದೀನ, ದುರ್ಬಲರಿಗೆ ನೆರವಾಗಬೇಕು ಎಂದು ಕರೆ ನೀಡಿದರು.

ಮಾಜಿ ಶಾಸಕ ಟಿ. ಗುರುಸಿದ್ದನಗೌಡ ಮಾತನಾಡಿ, ದೇಶದಲ್ಲಿ ಯುವ ಸಮೂಹ ಹೆಚ್ಚಾಗಿದ್ದು, ಸದೃಢ ದೇಶ ನಿರ್ಮಾಣ ಮಾಡುವ ಯುವ ಶಕ್ತಿ ಸಬಲವಾಗಬೇಕು. ದುಶ್ಚಟಗಳಿಂದ ದೂರ ಇರಬೇಕು ಎಂದರು.

ಉದ್ದೇಶಪೂರ್ವಕವಾಗಿ ಯಾರೊಬ್ಬರೂ ಮದ್ಯವ್ಯಸನಿಯಾಗುವುದಿಲ್ಲ. ಕೆಲ ಪರಿಸ್ಥಿತಿಗಳ ಕೈಗೊಂಬೆಯಾಗಿ, ಸಮಾಜದಲ್ಲಿನ ಸಹವಾಸ, ಸಮಸ್ಯೆಗಳಿಂದ ದುಶ್ಚಟಗಳಿಗೆ ಬಲಿಯಾಗುತ್ತಾರೆ. ಸ್ವಯಂ ಪ್ರೇರಿತರಾಗಿ ನಿಮ್ಮ ಜೀವನ ರೂಪಿಸಿಕೊಳ್ಳುವ ಹಾದಿಯಲ್ಲಿ ಸಾಗಬೇಕು ಎಂದು ಅವರು ಹಿತ ನುಡಿದರು.

ಜನಜಾಗೃತಿ ವೇದಿಕೆ ಜಿಲ್ಲಾಧ್ಯಕ್ಷ ಷಡಕ್ಷರಪ್ಪ ಮಾತನಾಡಿ, ಮದ್ಯವ್ಯಸನಗಳಿಂದ ಆರ್ಥಿಕ ಸಮಸ್ಯೆಗಳು ಉದ್ಭವವಾಗಿ ಬೇರೊಬ್ಬರನ್ನು ಹಣ ಬೇಡುವ ಪರಿಸ್ಥಿತಿ ಎದುರಾಗುತ್ತವೆ. ಉತ್ತಮ ಹವ್ಯಾಸಗಳನ್ನು ಅಳವಡಿಸಿಕೊಂಡರೆ, ಕುಟುಂಬದಲ್ಲಿ ನೆಮ್ಮದಿ ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಸಮಾರಂಭದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘದ ಪ್ರಾದೇಶಿಕ ನಿರ್ದೇಶಕರಾದ ಬಿ.ಗೀತಾ, ಫಾದರ್ ವಿಲಿಯಂ ಮಿರಾಂದ, ಮದ್ಯವರ್ಜನೆ ಶಿಬಿರದ ಅಧ್ಯಕ್ಷ ಜಿ.ಎಸ್. ಚಿದಾನಂದ, ಗೌರವ ಅಧ್ಯಕ್ಷ ಸಿ.ತಿಪ್ಪೇಸ್ವಾಮಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘದ ಜಿಲ್ಲಾ ನಿರ್ದೇಶಕ ಜನಾರ್ದನ್, ಬಿಇಓ ಸುರೇಶ್ ರೆಡ್ಡಿ, ಟಿ.ಎಚ್.ಓ ಡಾ. ನಾಗರಾಜ್, ತಾಲ್ಲೂಕು ಯೋಜನಾಧಿಕಾರಿ ಗಣೇಶ್, ಶಿಬಿರಾಧಿಕಾರಿ ನಾಗರಾಜ್, ಮದ್ಯವರ್ಜನೆ ಸಮಿತಿ ಸದಸ್ಯರಾದ ಬಿ. ಲೋಕೇಶ್, ಓ.ಮಂಜಣ್ಣ, ಹೊನ್ನೂರು ಸ್ವಾಮಿ, ಜಿಲ್ಲಾ ಜಾಗೃತಿ ಸಮಿತಿ ಸದಸ್ಯ ಪಿ.ಎಸ್.ಅರವಿಂದನ್ ಸೇರಿದಂತೆ ಇತರರು ಭಾಗವಹಿಸಿದ್ದರು.

## ಹರಪನಹಳ್ಳಿ ಪಿಎಸ್‌ಐಯಾಗಿ ಹೆಚ್.ಸಿ. ಹಿರೇಮಠ್



ಹರಪನಹಳ್ಳಿ, ಜು. 27 - ಪಟ್ಟಣದ ಪೊಲೀಸ್ ಠಾಣೆಗೆ ಪಿಎಸ್‌ಐ ಆಗಿ ಹೆಚ್.ಸಿ. ಹಿರೇಮಠ್ ಅಧಿಕಾರ ಸ್ವೀಕರಿಸಿದರು.

ಈ ಹಿಂದೆ ಶಾಂತಮೂರ್ತಿ ಅವರು ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿದ್ದು, ಅವರು ಬಳ್ಳಾರಿ ಜಿಲ್ಲೆಯ ತೆಕ್ಕಲಕೋಟೆ ಠಾಣೆಗೆ ವರ್ಗಾವಣೆಯಾಗಿದ್ದಾರೆ. ಹೆಚ್.ಸಿ. ಹಿರೇಮಠ್, ಜಿಲ್ಲೆಯ ಕಮಲಾಪುರ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿದ್ದರು. ಶಾಂತಮೂರ್ತಿ ಅವರಿಗೆ ಸಿಪಿಐ ಕಮ್ಮಾರ ನಾಗರಾಜ ಹಾಗೂ ಠಾಣೆಯ ಸಿಬ್ಬಂದಿಯವರು ಬೀಳ್ಕೊಟ್ಟರು.

## ರಾಣೇಬೆನ್ನೂರಿನಲ್ಲಿ ಗುಡ್ಡಾಪುರ ಶ್ರೀ ದಾನಮ್ಮದೇವಿ ಪುರಾಣ



ವಾಗೀಶ ನಗರದ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಅಧಿಕ ಮಾಸದ ನಿಮಿತ್ಯ ಗುಡ್ಡಾಪುರ ಶ್ರೀ ದಾನಮ್ಮದೇವಿಯ ಪುರಾಣವಿದೆ. ಇಂದಿನಿಂದ ಬರುವ ಆಗಸ್ಟ್ 15 ರವರೆಗೆ ನಡೆಯಲಿದೆ. ಪ್ರತಿದಿನ ಸಂಜೆ 6 ರಿಂದ ರಾತ್ರಿ 8 ರವರೆಗೆ ಪುರಾಣವನ್ನು ನೆಗಳೂರಿನ ಗದಿಗೆಯ್ಯ ಹಿರೇಮಠ ಶಾಸ್ತ್ರಿಗಳು ನಡೆಸಿಕೊಡುವರು.

## ಕಲಾಕುಂಚ ಮಹಿಳಾ ತಂಡದಿಂದ ಮುತ್ತೈದೆಯರಿಗೆ ಉಡಿ



ದಾವಣಗೆರೆ, ಜು. 27 - ಅಧಿಕ ಶ್ರಾವಣ ಮಾಸದ ಪವಿತ್ರ ದಿನದಂದು ನಗರದ ಶ್ರೀ ಸುಕೃತೀಂದ್ರ ಕಲಾಮಂದಿರದಲ್ಲಿ ಏರ್ಪಾಡಾಗಿದ್ದ ಶ್ರೀ ಗಾಯತ್ರಿ ಮಹಾಯಜ್ಞ, ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆಯ ವಿಶೇಷ ಸಂದರ್ಭದಲ್ಲಿ 33 ಕೋಟಿ ದೇವತೆಗಳನ್ನು ಸ್ಮರಿಸಿ 33 ಮುತ್ತೈದೆಯರಿಗೆ ಶಾಸ್ತ್ರೋಕ್ತವಾಗಿ ಕಂಕಣಕಟ್ಟಿ, ಅರಿಸಿಣ ಕುಂಕುಮ, ಹಸಿರು ಗಾಜಿನ ಬಳೆ, ಶ್ರೀ ಗಾಯತ್ರಿ ಶ್ಲೋಕದ ಪುಸ್ತಕ, ರವಿಕೆ ಬಟ್ಟೆಯ ಜತೆಗೆ ತೆಂಗಿನಕಾಯಿ ಉಡುಗೊರೆ ಕೊಟ್ಟು ಗೌರವಿಸಿದ ಅವಿಸ್ಮರಣೀಯ ಮಧುರ ಕ್ಷಣ ಎಂದು ಶ್ರೀ ಗಾಯತ್ರಿ ಪರಿವಾರದ ಅಧ್ಯಕ್ಷರಾದ ಡಾ|| ಸುಶೀಲಮ್ಮ ಹೇಳಿದರು.

ಕಲಾಕುಂಚ ಮಹಿಳಾ ವಿಭಾಗದ ಸಂಸ್ಥಾಪಕರಾದ ಶ್ರೀಮತಿ ಜ್ಯೋತಿ ಗಣೇಶ್ ಶೆಣೈ ನೇತೃತ್ವದಲ್ಲಿ ನಡೆದ ಈ ಸಾಂಪ್ರದಾಯಿಕ ಪರಂಪರೆಯ ವೇದಿಕೆಯಲ್ಲಿ ಕಲಾಕುಂಚ ಮಹಿಳಾ ವಿಭಾಗದ ಗೌರವ ಅಧ್ಯಕ್ಷರಾದ ಶ್ರೀಮತಿ ವಸಂತಿ ಮಂಜುನಾಥ, ಅಧ್ಯಕ್ಷರಾದ ಶ್ರೀಮತಿ ಹೇಮಾ ಶಾಂತಪ್ಪ ಪೂಜಾರಿ, ಕಲಾಕುಂಚ ಸಿದ್ದವೀರಪ್ಪ ಬಡಾವಣೆ ಶಾಖೆ ಅಧ್ಯಕ್ಷರಾದ ಶ್ರೀಮತಿ ಲಲಿತಾ ಕಲ್ಲೇಶ್, ಹಿರಿಯ ಗಾಯಕಿ ವಿದುಷಿ ಶ್ರೀಮತಿ ಸಾವಿತ್ರಮ್ಮ ಶಂಕರನಾರಾಯಣ ಶಾಸ್ತ್ರೀ ಜತೆಗೆ ಕಲಾಕುಂಚ ವಿವಿಧ ಬಡಾವಣೆ ಶಾಖೆಗಳ ಪದಾಧಿಕಾರಿಗಳು ಸದಸ್ಯರು ಉಪಸ್ಥಿತರಿದ್ದರು.

## ಕೆ.ಪಿ. ವರುಣ್‌ಗೆ ಕನ್ನಡ ಕಲಾ ಕೌಸ್ತುಭ ಪ್ರಶಸ್ತಿ



ಚಿತ್ರದುರ್ಗ, ಜು. 27 - ನಗರದ ವಿದ್ಯಾವಿಕಾಸ ಪ್ರೌಢಶಾಲೆಯ ವಿದ್ಯಾರ್ಥಿ 2023ರ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಪ್ರಥಮ ಭಾಷೆ ಕನ್ನಡದಲ್ಲಿ 125 ಕ್ಕೆ 125 ಅಂಕ ಗಳಿಸಿದ ಕೆ.ಪಿ ವರುಣ್ ಅವರನ್ನು ದಾವಣಗೆರೆಯ ಕಲಾ ಕುಂಚ ಸಾಂಸ್ಕೃತಿಕ ಸಂಸ್ಥೆ ಕನ್ನಡ ಕೌಸ್ತುಭ ಪ್ರಶಸ್ತಿಗೆ ಆಯ್ಕೆ ಮಾಡಿದೆ. ವರುಣ್ ಅವರು ಡಯಟ್ ಉಪನ್ಯಾಸಕ ಕೆ.ಜಿ. ಪ್ರಶಾಂತ್ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮೇಲ್ವಿಚಾರಕರಾದ ಶ್ರೀಮತಿ ಮಂಜುಳಾ ದಂಪತಿ ಪುತ್ರ.

## ಸೆ.15ರವರೆಗೆ ಇ.ಡಿ. ನಿರ್ದೇಶಕರ ಅವಧಿ ವಿಸ್ತರಣೆ

ನವದೆಹಲಿ, ಜು. 27 - ಜಾರಿ ನಿರ್ದೇಶನಾಲಯ (ಇ.ಡಿ.)ದ ನಿರ್ದೇಶಕ ಸಂಜಯ್ ಕುಮಾರ್ ಮಿಶ್ರಾ ಅವರ ಅಧಿಕಾರವಧಿಯನ್ನು ಸುಪ್ರೀಂ ಕೋರ್ಟ್ ಸೆಪ್ಟೆಂಬರ್ 15, 2023ರ ರವರೆಗೆ ವಿಸ್ತರಿಸಿದೆ.

ಮಿಶ್ರಾ ಅಧಿಕಾರಾವಧಿ ವಿಸ್ತರಣೆಗೆ ಅನುಮತಿ ನೀಡಿದ ನ್ಯಾಯಮೂರ್ತಿ ಬಿ.ಆರ್. ಗವಾಯಿ ನೇತೃತ್ವದ ತ್ರಿಸದಸ್ಯ ಪೀಠ, ಇನ್ನು ಮುಂದೆ ಯಾವುದೇ ವಿಸ್ತರಣೆ ಇಲ್ಲ ಎಂದು ಸ್ಪಷ್ಟಪಡಿಸಿದೆ.

ಉಗ್ರವಾದಿ ದೇಶಗಳ ಪಟ್ಟಿ ಸಿದ್ಧಪಡಿಸಲು ಎಫ್.ಎ.ಟಿ.ಎಫ್. (ಹಣಕಾಸು ಕಾರ್ಯಪಡೆ) ಪರಿಶೀಲನೆ ನಡೆಸುತ್ತಿದೆ. ಈ ಸಂದರ್ಭದಲ್ಲಿ ಭಾರತದ ಹಿತ ಕಾಯ್ದುಕೊಳ್ಳುವ ಸಲುವಾಗಿ ಮಿಶ್ರಾ ಅಧಿಕಾರವಧಿ ವಿಸ್ತರಿಸಬೇಕಿದೆ ಎಂದು ಕೇಂದ್ರ ಸರ್ಕಾರ ನ್ಯಾಯಾಲಯದ ಎದುರು ತಿಳಿಸಿತ್ತು.

## ಉಪನ್ಯಾಸಕರ ಮನೆಯಲ್ಲಿ ಕಳ್ಳತನ

ದಾವಣಗೆರೆ, ಜು. 27 - ಮನೆಯಲ್ಲಿ ಯಾರೂ ಇಲ್ಲದ ಹೊತ್ತಿನಲ್ಲಿ ಮನೆಯ ಹಾಲ್‌ನ ಕಿಟಕಿಯ ಸರಳುಗಳನ್ನು ಕತ್ತರಿಸಿ 1.50 ಲಕ್ಷ ರೂ. ನಗದು ಹಾಗೂ 15.80 ಲಕ್ಷ ರೂ. ಬೆಲೆಯ ಆಭರಣಗಳನ್ನು ಕಳ್ಳತನ ಮಾಡಿಕೊಂಡು ಹೋಗಿರುವ ಘಟನೆ ನಡೆದಿದೆ.

ಚನ್ನಗಿರಿ ಪಟ್ಟಣದ ಕಗತೂರು ರಸ್ತೆ ಮಣ್ಣಮ್ಮ ಶಾಲೆ ಹಿಂಭಾಗದಲ್ಲಿರುವ ಕಾಲೇಜು ಉಪನ್ಯಾಸಕ ಸಿದ್ದೇಶಪ್ಪ ಅವರ ಮನೆಯಲ್ಲಿ ಕಳೆದ ಬುಧವಾರ ಈ ಘಟನೆ ನಡೆದಿದೆ.

409 ಗ್ರಾಂ ಬಂಗಾರ, 100 ಗ್ರಾಂ ಬೆಳ್ಳಿಯ ಆಭರಣ ಸೇರಿದಂತೆ 1.50 ಲಕ್ಷ ರೂ. ನಗದನ್ನು ಕಳ್ಳರು ದೋಚಿದ್ದಾರೆ. ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

## 'ಅವ್ವ' ಪ್ರಶಸ್ತಿಗೆ ಮಲ್ಲಿಕಾರ್ಜುನ ಕಡಕೋಳರ ಕೃತಿ ಆಯ್ಕೆ



ಕಲಬುರಗಿ, ಜು.27 - ಜಿಲ್ಲೆಯ ಡೊಂಗರಗಾಂವದ ಮಾತೋಶ್ರೀ ಈರಮ್ಮ ವಡ್ಡನಕೇರಿ ಪ್ರತಿಷ್ಠಾನದ ವತಿಯಿಂದ ನೀಡುವ ಏಳನೇ ವರ್ಷದ 2023 ನೇ ಸಾಲಿನ 'ಅವ್ವ' ಪ್ರಶಸ್ತಿಗೆ ಲೇಖಕರು ಹಾಗೂ ಕಥೆಗಾರರಾದ ಮಲ್ಲಿಕಾರ್ಜುನ ಕಡಕೋಳ ಅವರ 'ಮುಟ್ಟು' (ಕಥಾ ಸಂಕಲನ), ಕಾವ್ಯಶ್ರೀ ಮಹಾಗಾಂವಕರವರ 'ಒಳಕಲ್ ಒಡಲು' (ಕಾದಂಬರಿ) ಹಾಗೂ ಡಾ.ಶೃತಿ ಬಿ.ಆರ್ ಅವರ 'ಜೀರೋ ಬ್ಯಾಲೆನ್ಸ್' (ಕವನ ಸಂಕಲನ ) ಕೃತಿಗಳನ್ನು ಅವ್ವ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಕರ್ನಾಟಕ ಕೃಷಿ ವಿಶ್ವವಿದ್ಯಾಲಯ ಧಾರವಾಡದ ವಿಶ್ರಾಂತ ಕುಲಪತಿಗಳಾದ ಡಾ. ಎಸ್.ಎ.ಪಾಟೀಲ (ಕೃಷಿ ಕ್ಷೇತ್ರ), ಗುಲಬರ್ಗಾ ವಿಶ್ವವಿದ್ಯಾಲಯ ಪರಿಸರ ವಿಜ್ಞಾನ ಅಧ್ಯಯನ ಸಂಸ್ಥೆಯ ಮುಖ್ಯಸ್ಥರಾದ ಡಾ. ರಮೇಶ ಲಂಡನಕರ (ವಿಜ್ಞಾನ ಕ್ಷೇತ್ರ) ನಿವೃತ್ತ ಪ್ರಾಂಶುಪಾಲರಾದ ಡಾ. ಶ್ರೀಶೈಲ ನಾಗರಾಳ (ಶಿಕ್ಷಣ ಕ್ಷೇತ್ರ) ಅವರನ್ನು 2023 ನೇ ಸಾಲಿನ 'ಅವ್ವ ಗೌರವ' ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಡಾ. ಶರಣಬಸಪ್ಪ ವಡ್ಡನಕೇರಿ ಹಾಗೂ ಪ್ರತಿಷ್ಠಾನದ ಸಂಚಾಲಕ ಡಾ. ನಾಗಪ್ಪ ಗೋಗಿ ತಿಳಿಸಿದ್ದಾರೆ.


|| ಶ್ರೀ ವಿಶ್ವಬಂಧು ಮರುಳಸಿದ್ಧ ಪ್ರಸನ್ನ ||





**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ದಾವಣಗೆರೆ ತಾಲ್ಲೂಕು, ಆನೆಕೊಂಡ ಗ್ರಾಮದ
ಶ್ರೀ ಎ.ಆರ್. ಮುರಿಗೆಂದ್ರಪ್ಪ ಮತ್ತು ಸಹೋದರರು, ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 21.07.2023ನೇ ಶುಕ್ರವಾರ ಬೆಳಿಗ್ಗೆ 07.30 ಗಂಟೆಗೆ
ದಾವಣಗೆರೆ ಆಂಜನೇಯ ಬಡಾವಣೆ ವಾಸಿ ನಮ್ಮ ಸಹೋದರನಾದ
**ಲಯನ್ ಶ್ರೀ ಎ. ಆರ್. ಉಜ್ಜನಪ್ಪನವರು** ನಿವೃತ್ತ ಉಪ ತಹಶೀಲ್ದಾರ್
ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಶಿವಗಣಾರಾಧನೆ ಹಾಗೂ ಶ್ರದ್ಧಾಂಜಲಿ ಸಮಾರಂಭವನ್ನು
ಪರಮಪೂಜ್ಯ ಶ್ರೀ ಶ್ರೀ ಶ್ರೀ ಡಾ|| ಪಂಡಿತರಾಧ್ಯ ಶಿವಾಚಾರ್ಯ ಸ್ವಾಮಿಗಳು
ಪಟ್ಟಾಧ್ಯಕ್ಷರು, ತರಳಬಾಳು ಜಗದ್ಗುರು ಶಾಖಾಮಠ, ಸಾಣೇಹಳ್ಳಿ ಇವರ ಸಾನ್ನಿಧ್ಯದಲ್ಲಿ
ದಿನಾಂಕ 29.07.2023ನೇ ಶನಿವಾರ ಬೆಳಿಗ್ಗೆ 10.30 ಗಂಟೆಗೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಭವನ, ರಿಂಗ್ ರೋಡ್ ಸರ್ಕಲ್, ನಿಜಲಿಂಗಪ್ಪ ಬಡಾವಣೆ, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ದುಃಖತಪ್ತ ಕುಟುಂಬ ವರ್ಗ :
ಶ್ರೀಮತಿ ನಾಗಮ್ಮ ಎ.ಆರ್. ಉಜ್ಜನಪ್ಪ ಹಾಗೂ ಮಕ್ಕಳು
#532, 2ನೇ ಕ್ರಾಸ್, ಆಂಜನೇಯ ದೇವಸ್ಥಾನ ಪಕ್ಕ, ಆಂಜನೇಯ ಬಡಾವಣೆ, ದಾವಣಗೆರೆ. ಮೊ : 83105 81526, 98860 18530
ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.


# ರಾಜ್ಯದಲ್ಲಿ ಹುಲಿಗಳ ಸಂಖ್ಯೆ ಗಣನೀಯ ಹೆಚ್ಚಳ: ಈಶ್ವರ ಖಂಡ್ರೆ



ಬೆಂಗಳೂರು,ಜು.27 - ಹುಲಿಗಳ ಸಂರಕ್ಷಣೆ ಗಾಗಿ ರಾಜ್ಯದಲ್ಲಿ ಕೈಗೊಂಡ ವಿವಿಧ ಉಪಕ್ರಮಗಳ ಫಲವಾಗಿ, ಹುಲಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಳವಾಗಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ.

ಅಂತರರಾಷ್ಟ್ರೀಯ ಹುಲಿ ದಿನಕ್ಕೆ 2 ದಿನಗಳ ಮುನ್ನ ರಾಷ್ಟ್ರೀಯ ಪ್ರಾಣಿ ಹುಲಿ ಗಣತಿಯ ವಿವರ ಬಿಡುಗಡೆ ಮಾಡಿರುವ ಅವರು, ರಾಷ್ಟ್ರೀಯ ಹುಲಿ ಪ್ರಾಧಿಕಾರ (ಎನ್.ಟಿ.ಸಿ.ಎ.) ಮಾರ್ಗಸೂಚಿಯ ಪ್ರಕಾರ ಪ್ರತಿ ನಾಲ್ಕು ವರ್ಷಗಳಿಗೆ ಒಮ್ಮೆ ಹುಲಿ ಗಣತಿ ಮಾಡಲಾಗುತ್ತದೆ. ಇದರ ಭಾಗವಾಗಿ ಆನೆ, ಮಾಂಸಹಾರಿ ಮತ್ತು ಸಸ್ಯಹಾರಿ ಪ್ರಾಣಿಗಳ ಗಣತಿಯನ್ನೂ ದೇಶಾದ್ಯಂತ ನಡೆಸಲಾಗುತ್ತದೆ ಎಂದು ತಿಳಿಸಿದ್ದಾರೆ.

ಪಶ್ಚಿಮ ಘಟ್ಟದ ಹೆಚ್ಚಿನ ಭಾಗ ಹೊಂದಿರುವ ಕರ್ನಾಟಕವು ಹುಲಿಗಳ ಸಂರಕ್ಷಣೆಯಲ್ಲಿ ಮುಂಚೂಣಿಯಲ್ಲಿದ್ದು, 2021-22ರ ಅವಧಿಯಲ್ಲಿ ಹುಲಿ ಗಣತಿಯನ್ನು ವೈಜ್ಞಾನಿಕವಾಗಿ ಹಾಗೂ ಸಮರ್ಪಕವಾಗಿ ನಡೆಸಿದ್ದು, ರಾಜ್ಯದ 5 ಹುಲಿ ಸಂರಕ್ಷಿತ ಪ್ರದೇಶಗಳಾದ ನಾಗರಹೊಳೆ, ಬಂಡೀಪುರ, ಭದ್ರಾ, ಬಿಳಿಗಿರಿ ರಂಗನಾಥಸ್ವಾಮಿ ದೇವಸ್ಥಾನ ಹಾಗೂ ಕಾಳಿ ಕಾನನ ಸೇರಿದಂತೆ 37 ವನ್ಯಜೀವಿ ಧಾಮಗಳಲ್ಲಿ ಒಟ್ಟು 37 ವಿಭಾಗದಲ್ಲಿ ಗಣತಿ ನಡೆಸಲಾಗಿದೆ. ಈ ಗಣತಿಗೆ ಕ್ಯಾಮರಾ ಟ್ರ್ಯಾಪ್ ಮತ್ತು ಲೈನ್ ಟ್ರ್ಯಾನ್ಸ್ಯಾಕ್ಟ್ ವಿಧಾನ ಬಳಸಲಾಗಿದೆ ಎಂದು ವಿವರಿಸಿದರು.

ರಾಜ್ಯದ ಎಲ್ಲ ಸಂರಕ್ಷಿತ ಅರಣ್ಯಗಳಲ್ಲಿ ಅಳವಡಿಸಲಾಗಿದ್ದ 5399 ಕ್ಯಾಮರಾ ಟ್ರ್ಯಾಪ್ ನಲ್ಲಿ 66 ಲಕ್ಷಕ್ಕೂ ಹೆಚ್ಚು ವನ್ಯ ಜೀವಿಗಳ ಛಾಯಾಚಿತ್ರ ಕ್ರೋಢೀಕರಣವಾಗಿದ್ದು, ಆಧುನಿಕ ತಂತ್ರಜ್ಞಾನ ಬಳಸಿ ಹುಲಿಗಳ ಚಲನವಲನ, ಪ್ರಾದೇಶಿಕ ಪರಿಮಿತಿ ಹುಲಿಗಳ ಮೈಮೇಲಿನ ಪಟ್ಟೆಗಳ ಆಧಾರದ ಮೇಲೆ ಹುಲಿಗಳ ಸಂಖ್ಯೆಯನ್ನು ಲೆಕ್ಕಹಾಕಲಾಗಿದೆ ಎಂದು ವಿವರ ನೀಡಿದರು.

2018ರಲ್ಲಿ ನಡೆದಿದ್ದ ಅಖಿಲ ಭಾರತ ಹುಲಿ ಗಣತಿಯ ಪ್ರಕಾರ ಕರ್ನಾಟಕದಲ್ಲಿ ನಡೆದ ಕ್ಯಾಮರಾ ಟ್ರ್ಯಾಪ್ ನಲ್ಲಿ 404 ಹುಲಿಗಳು ಪತ್ತೆಯಾಗಿದ್ದವು.

ಇದನ್ನು ವನ್ಯಜೀವಿ ಸಂಖ್ಯಾಶಾಸ್ತ್ರದ ಪ್ರಕಾರ ವಿಶ್ಲೇಷಿಸಿದಾಗ ರಾಜ್ಯದಲ್ಲಿ 475 ರಿಂದ 573 ಹುಲಿಗಳು ಇರಬಹುದು ಎಂದು ವಿಶ್ಲೇಷಿಸಲಾಗಿತ್ತು. 2022ರಲ್ಲಿ ರಾಜ್ಯದಲ್ಲಿ 435 ಹುಲಿಗಳು ಪತ್ತೆಯಾಗಿದ್ದು ಈ ಸಂಖ್ಯೆ ಇನ್ನೂ ಹೆಚ್ಚು ಆಗ ಬಹುದು ಎಂದು ವಿಶ್ಲೇಷಿಸಬಹುದು ಎಂದರು.